अथ कथं कर्मणो मायागुणत्वे पृथक् पाशत्वम्। सत्यम्। सन्निहितायां मायायां नानावस्थायां नानागुणाः न ते सर्वे पृथक् परिगण्यन्ते। स्वाश्रयाभिन्नत्वात्। गुणगुणिनोर्भेदसहोप्यभेदस्सम्बन्धः। अतो न कुत्रचित्तयोः पृथग्गणनम्। तथाऽपि कर्माख्यो बुद्धिगुणोऽयं गुणान्तरेभ्यो बीजत्वातिशयात् पृथग्गण्यते। बीजत्वं चास्य कालेन परमोपादानभूतायां मायातत्व भूमौ प्राचीनसर्वकार्यवनोपसंहारेऽपि पश्चिमकार्यवनांकुरे हेतुत्वेनावस्थानात्। यद्यपि तत्र प्रलये बुद्धिकार्यशक्तिवत्कार्यान्तरशक्तीनामप्यवस्थानं युज्यते। तथाऽपि न हि तद्वदेतासां प्राधान्यं विद्यते। तस्या एवानितरसाधारण्येन सर्वकार्यप्रपञ्चप्रवृत्तिबीजत्वात्। अतो ह्येतद्बुद्धिशक्त्यात्मकं कर्म सहकारीति

च गीयते। जगदीश्वरस्यापि तदन्वयव्यतिरेकानुविधानेन प्रवृत्तियोगात्। नच परमेऽध्वनि कर्मानपेक्षेति चोद्यम्। तत्राधिकारिविषयायाः प्रवृत्तेः अशुद्धवर्त्माधिकारार्थत्वात्।

अथ पुर्यष्टकमातिवाहिकासाधारणदेहः सूक्ष्मदेह इत्याद्यभिधानवती माया प्रत्यात्मनियताऽनंतनाथेन सर्गादौ मायातत्वादुत्पादितकलादिक्षित्यन्तत्रिंशत्तत्वसमष्टिरूपा यावत्प्रलयं मोक्षान्तं वा भोगसाधनं अधस्तनसमस्तभुवनेषु कामानुसारिणी पर्यटति।

ननु तत्वानां भुवनाधारत्वं प्रागुक्तम्। कथमिदानीमेषां भुवनचारित्वोक्तिः। सत्यम्। सा मायाख्या तत्वपङ्क्तिर्द्विविधा। साधारण्यसाधारणी च। तत्र साधरण्येकाऽतिविस्तृता सर्वात्मभोग्यभुवनाधारत्वेन प्रागुक्ता विद्यादिविंदुकलात्रितये निश्चलेवावतिष्ठते। तथाहि विद्याकलायां माया कला कालनियति विद्यारागप्रकृतिसंज्ञितानां सप्तानामंगुष्ठमात्रादिवामदेवान्तसप्तविंशतिभुवनाधाराणामवस्थितिः। अथ प्रतिष्ठाकलायां गुणवुद्ध्यहङ्कारमनश्श्रोत्रत्वक्चक्षुर्जिह्वाघ्राणवाक्पादपाणिपायूपस्थशव्दस्पर्शरूपरसगंधव्योमवाय्वनलजलाख्यानांत्रयोविंशतितत्वानां श्रीकण्ठाद्यमरेशान्तषट्पञ्चाशद्भुवनाधाराणां तदधो निवृत्तिकलायां पृथिवीतत्वस्यैकस्य व्रह्माण्डवाह्यान्तरभद्रकाळ्यादिकालाग्निरुद्रान्ताष्टोत्तरशतभुवनाधारस्य महाभूतपञ्चकोपलक्षितस्येति[1] विवेकः।

[1] स्थितिरित्यनुषङ्गः।

एतेष्वेवासाधारिण्यः प्रत्येकमात्मनां भोगसाधनत्वेन व्याख्याताः सङ्कोचविकासधर्मिण्यस्तत्वपङ्क्तयः सूक्ष्मदेहात्मिका इतस्ततः संचरंति। तासां तत्तद्भुवनजन्यस्थूलदेहसम्बन्धादेव तत्तद्विचित्रकर्मसन्तानांजन[1]भोजनादियोग्यत्वात्।

अथैषां तत्वानामुत्पत्तिव्यापारावभिधीयेते। तदेकं नित्यं विभु चित्रशक्तिमयं मायाख्यं परमकारणं तत्वमेकदेश्वरशक्त्या क्षुब्धं सर्गादौ कलाकालनियत्याख्यं तत्वत्रयमसूत। तत्र कलाख्यं तत्वमात्मनश्चैतन्यं मलशक्तेरेकदेशक्षेपेण किंचित्प्रकटयति। ततोऽसौ तद्व्यंजकानुविद्धस्वरूप आत्मा स्वोचितव्यापारेष्वेव कर्तृभावं भजते। व्यङ्ग्यव्यञ्जकयोरनयोरात्मरूपकलातत्वयोः परस्परप्रतिहारेण कस्यचित्प्रयोजकस्यानवकाशात्।

ननु स्वसंविद्रूपमात्मानं न नीहारो निरुणद्धि। किं तु परसंविद्रूपां तच्छक्तिमेव। तत्कथमात्मोपकारकं कलातत्वमिति। न हि कर्तुर्विद्यमानस्य करणाभावे क्रिया काचिदुपपद्यते। अतः कलातत्वोपकृतशक्तिकरण एवाऽऽत्मा स्वभोगे प्रयुज्यते। भोगश्चास्य बुद्धितत्वोपरञ्जनमेव। तच्च सुखादिप्रवृत्तिष्वभेदेन भासमानत्वरूपं संवेदनमिति चोच्यते। तत्रास्य कर्तुः कलातत्वमिदं नालम्। अस्य शक्तिस्फुटीकरणमात्रोपक्षीणत्वात्।

[1] मज्जनेति पाठः।

तदभेदापन्नत्वाच्चेत्यस्मादेव तत्वान्तरं विद्याख्यं प्रकाशरूपं बुद्धिगतार्थानुभवसाधकत्वेनोत्पाद्यते। नच तेन विनाप्यात्मचिच्छक्तिरेव स्वयं बुद्धिग्रहणमर्हतीति वाच्यम्। तस्य सामान्यकरणत्वेन भोग्यवस्तुविशेषग्रहणे करणविशेषापेक्षत्वात्। अन्यथा अनेकतत्वपरिकल्पनाभावप्रसङ्गाच्च।

किञ्च ततोऽनन्तरं तस्य विद्यातत्वविदितेष्वेवार्थेष्वभिषङ्गजनकं रागाख्यं तत्वं कलैव जनयति, ज्ञातमात्रस्यार्थस्य भोग्यत्वासम्भवात्। नह्यनभिष्वङ्गवान् कश्चिद्भोगे प्रवर्तते। तदयमेनं तद्भोगप्रवृत्तये रञ्जयन् रागोभिधीयते। नच तदभावेप्यात्मनो बुद्धिगुणा एव रञ्जकाः सन्तीति वाच्यम्। तेषां बुद्धिगुणानां च क्रमेणान्तरबाह्यार्थत्वेन भोग्यत्वनिश्चयात्। यदि भोग्यत्वेप्येषां रञ्जकत्वमिष्यते, तदा वीतरागाभावः प्रसज्येत। अथ कालोप्यस्य ग्राह्यवस्तुषु वृत्तवर्तमानवर्तिष्यमाणताऽवस्थात्रयं क्रमादापादयन् तद्वारापि चिरक्षिप्रतादिबोधं विधाय च सर्वत एवैनं संसारयति। इत्थं कालप्रेरितस्याणोस्स्वार्जितकर्मभोगनियामकत्वेनात्र नियतिरप्युपयुज्यते। अन्यथा अन्येनार्जितं कर्मान्येनापि भुज्यतामिति भोगसाङ्कर्यमेव स्यात्। इत्यनेन तत्वपञ्चकेन कंचुकितोऽयमात्मा पुरुषतत्वसंज्ञां लभते। तद्बन्धेनैवास्य भोक्तृत्वदशापन्नत्वात्।

अथास्य पुंसो भोग्यार्थप्रसूतये प्रकृत्याख्यं कलातस्तत्वं

प्रजायते। येनायं सत्कळत्रेणेव समाश्लिष्टः पुमान् न कदाचिद्विरहं सहते। अस्य संसारमूलत्वादस्यैव गुणाः सत्वरजस्तमोनामानस्त्रयो विश्रुताः। अमी चास्मिन्नाभिव्यक्ता भवन्ति। अस्य निरवयवत्वात्। अत एवेदं तत्वमव्यक्तमिति चोच्यते। अस्मात्तु गुणतत्वमभिव्यक्तं प्रख्याव्यापारनियमरूपम्। तत्र गुणत्रययुक्तं परस्पराविवियुक्तताद्दृग्भागत्रयोपपन्नमुत्पन्नम्। नचैतस्यापि बुद्धिवद्भोग्यार्थविभासकत्वं युज्यते। सत्यपि सावयवत्वे समस्तवक्ष्यमाणकरणकार्यस्तोमगर्भत्वेन प्रकृत्यविशेषत्वात्। अतोस्मात्त्रिप्रकाराद्गुणतत्वात्त्रिप्रकारैव सर्वकार्यपरंपरा प्रादुर्भवति।

तथाहि तत्र साक्षाद्बुद्धितत्वं महत्तत्वापरपर्यायं भानुवत्प्रकाशरूपमध्यवसायधर्मि समनस्कबाह्येन्द्रियोपलब्धसमस्तबाह्यार्थप्रतिबिंबाकारनानाभावप्रत्ययप्रपञ्चखचितं सात्विकराजसतामसभेदत्रयभिन्नसुखदुःखमोहाख्यवृत्तित्रयाश्रयभूतं गुणतत्वादाविर्भूतम्। यदुपरक्तः पुरुष एव भोगीति प्रगीयते। तदुपरागस्तु सुखादिसंवेदनात्मक इति प्रागेवोक्तः। अत एवास्य बुद्धितत्वस्य भोग्यत्वं व्यवस्थितम्। सुखादिरूपेण सदा विद्यया संवेद्यमानत्वात्। सुखादीनांचाऽऽत्मगुणत्वं धर्मादीनां बुद्धिगुणत्वसाधनेनैव परास्तम्। तेषामुभयेषां भावप्रत्ययरूपत्वेन भेदाभावात्। धर्मज्ञानवैराग्यैश्वर्याधर्माज्ञानावैराग्यानैश्वर्याभिधाना

अष्टगुणा बुद्धौ वासनात्मकतया सूक्ष्माः स्थिताः। ये भाव्यन्ते युक्तिभिर्गम्यन्ते तत्वपरिज्ञात्प्रतीयन्त इति भावसंज्ञा भवन्ति। त एव पुनः कालेन परिणतया स्थूलतया भोग्यतामापन्नाः। प्रतीयन्ते संवेद्यन्ते इति प्रत्ययाः इति प्रत्ययसंज्ञाश्च। ते च प्रत्ययाः सिद्धितुष्ट्यशक्तिविपर्ययभेदेन पञ्चाशत्प्रकाराः।

तत्र सिद्धयोऽष्टौ। नव तुष्टयः। धर्मादिचतुष्टयस्यावस्थाभेदाः सत्वाधिक्येन प्रकाशरूपतया सुखरूपप्रवृत्तय इत्युच्यन्ते। अशक्तयस्त्वष्टाविंशतिसंख्याः। [1]अवैराग्यावस्था रजोवैशिष्ट्येन व्यापारहेतुतया दुःखरूपा विपर्ययाः पञ्च। अधर्मादित्र्यवस्थाः स्थूलाकारास्तमःप्राचुर्येण नियमनहेतुत्वान्मोहरूपाः। अत्र च भावाष्टके धर्माधर्मयोरेव प्राधान्यम्। तयोरेव भावमूलत्वात्तच्छ्रुतिविहितनिषिद्धानुष्ठानजन्यकर्मपाशत्वेन प्रशस्यते। एवं बुद्धेः सिद्ध्यादिप्रत्ययाधिकरणत्वेन भोग्यत्वेऽपि विषयाध्यवसायजनकत्वेन करणत्वं चोपपद्यते।

अथैतस्या एवाऽहङ्कारतत्वस्योत्पत्तिः। [2]ग्राहकत्वाध्यवसायो धर्मः। अपि चायं संरम्भात्मकतया प्राणादिप्रवृत्तीनां विषयव्यवहाराणां च हेतुः। स च त्रिविधः सत्वादिगुणभेदात्।

---

[1] अवैराग्यमया इति पाठो वर्तते तच्चिन्त्यम्।

[2] अहङ्कारतत्वस्येति शेषः।

ते च त्रयोहङ्कारस्कन्धाः सात्विकराजसतामसाः क्रमेण तैजसवैकारिकभूतादिकसंज्ञाश्च ज्ञेयाः। तत्र तैजसान्मनस्तत्वमर्थविधानात्मक सङ्कल्पधर्मि सदा सर्वतः शीघ्रचारि श्रोत्रादिप्रवर्तकं प्रवर्तते। यत्प्रवृत्त्यनन्तरमेव बुद्ध्यहङ्कारयोः प्रवृत्तिः। त्रीण्यप्येतान्यंतःकरणानि। एतेषां बाह्यकरणोपरमेप्यंतः प्रवृत्तिमत्वात्।

बाह्यकरणानि तु ज्ञानकर्मभेदेन द्विविधानि। तत्र श्रोत्रत्वक्चक्षुर्जिह्वाघ्राणानि पञ्च तत्वानि। तावता महाभूतगुणानां शब्दस्पर्शरूपरसगन्धानां ग्राहकत्वेन ज्ञानकरणान्युच्यन्ते। तेषां च तैजसादेवोत्पत्तिः अर्थप्रकाशकारित्वात्। ततो वैकारिकाद्वाक्पादपाणिपायूपस्थाख्यानि वचनगमनादानविसर्गानन्दाख्यकर्मपञ्चकसाधकतमत्वेन कर्मेन्द्रियाणि पञ्च सञ्जातानि। इदं च बाह्यकरणदशकं अस्य साक्षाद्बहिर्गतार्थसम्बन्धेनैव। प्रत्येकं स्वस्वकार्यनिर्वाहात्। अस्य च मूर्तत्वादनाधारत्वे चेष्टा नस्यादित्येतदुपकाराय शब्दाद्येकोत्तराधिकगुणशालीनि तद्गुणाभिन्नत्वेन तन्नामकानि पञ्चतन्मात्राणि भूताद्यहङ्काराद्दुद्भूतानि। तेभ्यश्च क्रमात्तावन्ति तथाविधगुणवन्ति अवकाशव्यूहपाकसंग्रहधारणक्रियावन्ति व्योमवाय्वनिलजलपृथिव्याह्वयानि सूक्ष्मभूतानि। तदेतच्च तत्वदशकं तत्करणाधिकरणत्वेन कार्यसंज्ञं भवति।

तदेवं वर्णितानि कलादिपृथिव्यन्तानि त्रिंशत्तत्वान्येव

सम्भूय भोगसाधनत्वेन पुंसः सूक्ष्मदेहतां वहन्ति। एषां च प्रलये प्रातिलोम्येन स्वस्वकारणेऽन्तर्भावे कृते कैवल्यमेव स्यात्। यदि वा तेषां मलपरिपाके दीक्षयोपसंहारः क्रियते तदा शिवसाम्यरूपो मोक्ष एव स्यात्। तदेवं पदार्थाः सप्रकारं सविस्तारं निरूपिताः॥

इति श्रीशैवसिद्धान्तपरिभाषायां पाशपरिच्छेदः समाप्तः।

विनियोगपरिच्छेदः

अथैषां पदार्थानां विनियोगाः संगृह्यन्ते। एषामेव फलं परापरभिन्ना मोक्षसिद्धिः। ननु सार्वज्ञ्यमेव मुक्तिरिति श्रीमतामभिमतम्। कथमत्र सर्वार्थानामपि विनियोगापेक्षिणी सेयमिति। सत्यम्। ज्ञानं तावत् द्विविधम्। परमपरं चेति। तत्र परज्ञानमवबोधरूपम्। तच्च निश्शेषपाशनिर्मुक्ततया परं द्वारानपेक्षं शुद्धचैतन्यात्मकमेव। अपरं चाऽऽगमरूपम्। तच्च पाशलेशात्परिग्रहशक्तिकार्यनादाद्यपेक्षमधिकारयुक्तचैतन्यात्मकम्। तथाच परज्ञानवन्तः परमशिवसाम्यलाभात् परमुक्ताः। एतेषां न किंचित्प्राप्तव्यमस्ति। तत्प्राप्तस्यैव पदस्य सर्वोन्नतस्य निरतिशयत्वेनोपरिप्राप्तव्यपदाभावात्।

अपरज्ञानिनस्तु अधिकारिण आचार्याः सिद्धान्तव्यक्तचैतन्यत्वेनापरमुक्ताः। त एव परमुक्त्यर्थमागमदृष्टासु क्रियायोगचर्यासु यथायोग्यं वस्तुत्रयं शिष्यैः सह विनियुञ्जते। तथाहि। क्रियायां दीक्षादावाचार्यैकसाध्यायां पत्युरनुग्राहकत्वेन पशोरनुग्राह्यत्वेन पाशस्य निग्राह्यत्वेन च विनियोगः। योगे च सकलध्यानादौ साधकसहिताऽऽचार्यसाध्ये शिवस्य ध्येयत्वेन जीवस्य ध्यातृत्वेन बन्धस्य विस्मरणीयत्वेन विनियोगः। चर्यायामालयसेवादौ साधकसन्निहिताऽऽचार्यसाध्यायां देवस्य सेव्यत्वेन

दासस्य तद्दास्यव्यवस्थापनीयत्वेन जडद्रव्यजातस्य तत्पादसमर्पणीयत्वेन विनियोगः इति अत्र सर्वत्राऽपि [1]पत्युराराधनीयत्वं विशिष्यते। तस्यानाराधनेनाप्रसन्नत्वे तत्प्रार्थनध्यानसन्निधापनानां तदधीनपशुपाशविषयविनियोगानां च विध्यनुपपत्तेः। तदाराधनं तु श्रद्धया शिवलिङ्गादौ पूर्वापरनानाङ्गसंकुलं मनोवाक्कायव्यापारैर्ध्यानजपमुद्राविशेषैः स्वेष्टशुद्धद्रव्यसमर्पणम्।

तच्च द्विविधम्। स्वार्थं परार्थं चेति। तत्र यत्साधकाद्यैः स्वेप्सितसिद्ध्यर्थमाचार्यानुज्ञया चललिंगादौ क्रियते तत्स्वार्थम्। तस्य कर्तृमात्रफलदत्वात्। यत्पुनराचार्यमात्रेण राजराष्ट्रादीप्सितसिद्ध्यर्थं स्वातन्त्र्येण स्वायम्भुवादौ स्थिरलिंगेषु क्रियते तत्परार्थमाराधनम्। तस्य कर्तृसमन्वितानां परेषां च फलदत्वात्॥

ननु आचार्यस्य परार्थपूजायां स्वफलसिद्धिर्माभूत्। तेनापि स्वार्थपूजाया नियमेन क्रियमाणत्वादिति चेन्न; तस्य स्वार्थवत्परार्थस्याप्यकरणे प्रत्यवायश्रवणात्। वस्तुतस्तु गुरूणां स्वार्थतया विहितं सर्वं परार्थमेव। सिद्धिफलदानामेषां चरितस्य साधकादिमार्गदर्शनार्थत्वात्। ते च गुरवः शिवमन्त्रेशरुद्रदेवमुनिमनुष्यभेदेन षट् प्रकाराः। यद्यप्येतेषु परमहदन्तराळदिव्यदिव्यादिव्यादिदिव्यसम्बन्धतारतम्यवत्वादुत्तरोत्तरे पूर्वपूर्वनियोज्याः। तथाऽपि

[1] पशुराराधनीयत्वमित्यर्थः।

मनुष्याचार्या विशिष्यन्ते। तेषां पूर्वेषां सर्वेषामपि सान्निध्यसम्भवात्। तत्रापि वर्णचतुष्टये वर्णानां गुरुत्वं नेतरेषां, यदधीतवेदवेदांगानां वेदान्तज्ञानाभावेन सिद्धान्तश्रवणयोग्यता न सम्भवति। सिद्धान्तस्य वेदान्तसारत्वात्।

यदि क्षत्रियादीनां च मलपाकपूर्तिः सम्भवति तदा ते निरधिकारदीक्षया परमोक्षं प्रापिताः स्युः। अथवा विश्वामित्रादिवत् तपोविशेषेण वर्णान्तरसंक्रान्तिं प्राप्याधिकारं भजेयुः। अधिकारिणां च लोकसंग्रहाय श्रुतिविहितवर्णाश्रमधर्मानतिलङ्घनश्रवणात्। चातुर्वर्ण्यभवानां च साधकानां पूर्वजात्युद्धारेऽपि तत्तज्जात्युचिताचारस्य लोकसाङ्कर्यानुत्पादाय फलाभिसन्धिपरिहारेणावश्यानुष्ठेयत्वात्। न च शैवाचारवतां वैदिकाचारानुपपत्तिः। तत्र शैवाविरुद्धानामेवाभ्यनुज्ञानात्। नहि वेदागमयोरत्यन्तविरोधः। परकर्तृकत्वाविशेषात्। यद्वस्तु वेदे शुद्धाशुद्धजनसाधारण्येन व्यंग्यतया प्रतिपाद्येत तदागमे शुद्धैकविषये स्पष्टमेवोपदिश्यत इत्यनयोरियान् भेदः।

तच्च पश्चात्मपशुत्वपाकार्थं विहिताचारा वेदांशाः सिद्धान्तिभिस्त्याज्याः। कर्मकाण्डे काम्यकर्मवादः। उपासनाकाण्डे पञ्चाक्षरविरुद्धविद्यांतरोपासनावादः। ज्ञानकाण्डे परमात्मैक्यादिज्ञानवादः। सिद्धांते तु सर्व एवांशाः संसेव्याः। तत्र साधकादीनां

यावदधिकारोदयं स्वाचारन्यूनता ज्ञेया। यदि त्वनभ्युदितेप्यधिकारे प्रारब्धदेहत्यागः तदा तेषां त्रयाणां क्रमेण शिवमन्त्रेशरुद्रपदावाप्तयो भवन्ति। न चात्र साधकपुत्रकयोः समपदावाप्तिः। तत्र शिवपदे च तयोर्भोगलयावस्थानक्रमावाप्तिसम्भवात्। तदेवं समधीतसामान्यविशेषशास्त्राणां समर्थानां समस्तसम्पत्सम्पन्नानां ब्राह्मणोत्तमानामेव सर्वपदार्थविनियोगभरणाय परमेश्वराधिकरणत्वापरपर्यायमाचार्यत्वं व्यवस्थितमित्युपविशंत्वाचार्याः॥

सिद्धश्रीगुरुकारुण्यः सिद्धान्तार्थमशेषतः।
सूर्यभट्टः सुबुद्धीनां सुबोधं पर्यभाषत॥

इति श्रीकविराजशेखरसूर्यभट्टारककृतौ श्रीशैवसिद्धान्तपरिभाषायां विनियोगपरिच्छेदः समाप्तः॥

ಶ್ರೀ ಶೈವಸಿದ್ಧಾಂತ ಪರಿಭಾಷಾ

(ಶ್ರೀಕವಿರಾಜಶೇಖರಸೂರ್ಯಭಟ್ಟಾರಕವಿರಚಿತಾ)

ಕನ್ನಡ ಅನುವಾದ

ಅನುವಾದಕರು :

ಶೃಂಗಗಿರಿ ಕವಿ ನರಸಿಂಹಭಟ್ಟರವರು



ಮೊದಲ ಮಾತು

(ಆಂಗ್ಲಭಾಷೆಯ ಕನ್ನಡದ ಅನುವಾದ)

ಈ ಚಿಕ್ಕ ಪ್ರಕಟಣೆಗೆ ಮುನ್ನುಡಿಯನ್ನು ಬರೆಯಲು ಸಂತೋಷಿಸುತ್ತೇನೆ. ಭಾರತೀಯ ಧಾರ್ಮಿಕ ಜೀವನದಲ್ಲಿ ವೇದ ಮತ್ತು ಆಗಮಗಳು ಹಾಸುಹೊಕ್ಕಾಗಿವೆ; ಇವೆರಡರ ಸಂಬಂಧವು ಅಷ್ಟು ನಿಕಟವಾಗಿದೆ. ಆದರೆ ವೇದಕ್ಕೆ ಬಾಯಿಮಾತಿನಿಂದಲಾದರೂ ಹೆಚ್ಚು ಸೇವೆಯು ನಡೆದಿರುವಾಗ, ಆಗಮಗಳಿಗೆ ಆವಶ್ಯಕವಾದ ಗಮನವು ತಕ್ಕಷ್ಟು ದೊರೆಯದಿರುವುದು ಶೋಚನೀಯವು. ಈ ನ್ಯೂನತೆಯ ಪರಿಹಾರದ ದೃಷ್ಟಿಯಿಂದ ಈ ಗ್ರಂಥವನ್ನು ಆದರಿಸುತ್ತೇನೆ. ಇದು ಕನ್ನಡ ರಾಜ್ಯದಲ್ಲಿ ನೂತನ ಪ್ರಯತ್ನವಾಗಿದೆ. ಇದರ ಪ್ರಕಾಶಕರಾದ ಆಗಮರತ್ನ ಬ್ರ|| ಶ್ರೀ ಕೃಷ್ಣದೀಕ್ಷಿತರನ್ನು ನಾನು ಅಭಿನಂದಿಸುತ್ತೇನೆ. ಪ್ರಸಿದ್ಧ ಆಗಮಿಕವಂಶಜರಾದ ಶ್ರೀ ದೀಕ್ಷಿತರು ಮೈಸೂರು ಮುಜರಾಯಿ (ರಿಲಿಜಿಯಸ್ ಎಂಡೋಮೆಂಟ್ಸ್) ಇಲಾಖೆಯ ಪ್ರಧಾನ ಆಗಮಪಂಡಿತಸ್ಥಾನವನ್ನು ಅಲಂಕರಿಸಿದ್ದಾರೆ. ಮತ್ತು ಈ ಕಾರ್ಯವನ್ನು ನಿರ್ವಹಿಸುವ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದ್ದಾರೆ. ಆಗಮಶಾಸ್ತ್ರಗಳ ಅಧ್ಯಯನ ಅನುಷ್ಠಾನಗಳ ಪ್ರಚಾರಕಾರ್ಯದಲ್ಲಿ ಇವರ ಅವಿಶ್ರಾಂತವಾದ ಅನೇಕ ವರ್ಷಗಳ ಪ್ರಯತ್ನವು ಪ್ರಸಿದ್ಧವೇ ಇದೆ. ಈ ಗ್ರಂಥಕ್ಕೆ ಸೇರಿಸಿರುವ ಉತ್ತಮವಾದ ಕನ್ನಡ ಭಾಷಾಂತರದಿಂದ ಈ ಗ್ರಂಥದ ಉಪಯೋಗವು ಅತಿಶಯವಾಗಿ ಹೆಚ್ಚಿಸಲ್ಪಟ್ಟಿದೆ. ಇದು ಪರಿಣತ ವೇದಾಂತಜ್ಞರಾದ ಶ್ರೀ ಕವಿ ನರಸಿಂಹಭಟ್ಟರ ಕೃತಿಯು. ದಕ್ಷಿಣಾಮ್ನಾಯವೆಂದು ಪ್ರಸಿದ್ಧವಾಗಿರುವ ಶ್ರೀ ಶೃಂಗಗಿರಿಯ ಅಭಿಜನರಾದ ಇವರ ಪರಿಚಯವನ್ನು ಬಹುಕಾಲದಿಂದ ಹೊಂದಿರುವ ಸುಯೋಗವು ನನಗಿದೆ. ಇವರು ಕವಿಗಳ ಮತ್ತು ಪಂಡಿತರ ವಂಶದವರು. ಇವರು ತಮ್ಮ ಈ ಕಾರ್ಯವನ್ನು ಅಪೂರ್ವ ದಕ್ಷತೆಯಿಂದಲೂ ವಿಚಕ್ಷಣತೆಯಿಂದಲೂ ನಿರ್ವಹಿಸಿರುತ್ತಾರೆ.

ವಿಶಾಲವಾದ ಅರ್ಥದಿಂದ 'ಆಗಮ'ವೆಂದರೆ ಜನಾಂಗದಿಂದ ಜನಾಂಗಕ್ಕೆ ನೀಡಿಬಂದಿರುವ ಸಂಪ್ರದಾಯಾರ್ಥವೆಂದು ತಿಳಿದುಬರುವುದು. ಈ ಅರ್ಥದಲ್ಲಿ ವೇದಕ್ಕೂ ಈ ಪದವು ಪ್ರಾಮಾಣಿಕವಾಗಿ ಉಪಯೋಗಿಸಲ್ಪಟ್ಟಿದೆ. ಸಾಮಾನ್ಯಾರ್ಥದಲ್ಲಿ 'ಆಗಮ'ಶಬ್ದವು ಮತಸಂಬಂಧವಾದ ಜ್ಞಾನವಿಶೇಷಕ್ಕೆ ಸಂಕೇತವಾಗಿದೆ. 'ತಂತ್ರ'ವೆಂಬ ಶಬ್ದವನ್ನು 'ಆಗಮ' ಶಬ್ದಕ್ಕೆ ಪರ್ಯಾಯವಾಗಿ ಉಪಯೋಗಿಸುವುದುಂಟು. ಈ ವಿದ್ಯೆಯು ಅತಿ ಪ್ರಾಚೀನವಾದುದೆಂದು ಅಂಗೀಕೃತವಾಗಿದೆ. ಕೆಲವು ಸಂದರ್ಭಗಳಲ್ಲಿ ಅಪೌರುಷೇಯವಾದ ವೇದಕ್ಕೆ ಪರಿಸಮಾನವಾಗಿ ಗಣಿಸಲ್ಪಟ್ಟಿದೆ. ಮನುಸ್ಮೃತಿಗೆ ಮಧ್ಯಕಾಲದ ವ್ಯಾಖ್ಯಾತೃಗಳಾದ ಕುಲ್ಲೂಕಭಟ್ಟರು ಈ ವಚನವನ್ನು ಪ್ರಮಾಣಿಕತೆಯಿಂದ ಉದಹರಿಸಿರುತ್ತಾರೆ—"ವೈದಿಕೀ ತಾಂತ್ರಿಕೀ ಚೈವ ದ್ವಿವಿಧಾ ಶ್ರುತಿಃ ಕೀರ್ತಿತಾ"—ಜ್ಞಾನಪ್ರಕಾಶವು ವೇದ ಮತ್ತು ತಂತ್ರ—ಎಂಬ ಎರಡು ಮೂಲಗಳನ್ನುಳ್ಳದ್ದು.

ಯದ್ಯಪಿ 'ತಂತ್ರ' ಶಬ್ದವು ಒಂದು ವಿಧವಾದ ಅಶ್ಲೀಲಸಂಬಂಧವನ್ನು ಹೊಂದಿರುತ್ತದೆ. ಮತಚರಿತ್ರೆಯ ಒಂದು ಕಾಲದಲ್ಲಿ ತಾಂತ್ರಿಕಾನುಷ್ಠಾನವು ಅನುಚಿತಮಾರ್ಗದಲ್ಲಿ ವಿಶೇಷವಾಗಿ ಪ್ರವರ್ತಿಸಿ, ಅದರ ನಿಮಿತ್ತವಾಗಿ, ಸಾರ್ವಜನಿಕವೂ ಧೀರವೂ ಆದ ಅದರ ತತ್ವಪ್ರತಿಪಾದನೆಯ ಘನತೆಯು ಬೆಳಕಿಗೆ ಬರದೆ, ತಂತ್ರಶಾಸ್ತ್ರವೇ ಅಡಗಿಹೋದುದಲ್ಲದೆ, ತಿರಸ್ಕಾರಕ್ಕೂ ಗುರಿಯಾಯಿತು. ಈ ಕಾರಣದಿಂದ ತಂತ್ರವಿದ್ಯೆಯೇ ಅಪಕೀರ್ತಿಗೆ ಒಳಗಾಯಿತು. ಆದರೂ ಇದರ ಜ್ಞಾನಭಾಗವು ರಹಸ್ಯವಾಗಿ ಗುರುಶಿಷ್ಯ ಪರಂಪರೆಯಿಂದ ಅಧ್ಯಯನಪದ್ಧತಿಯಲ್ಲಿ ಬಂದೇ ಇದೆ; ಹಾಗೆಯೇ ಪ್ರಯೋಗಭಾಗವೂ ಸಹ ದೇವಾಲಯ ನಿರ್ಮಾಣಗಳು ಮತ್ತು ದೇವತಾ ಪ್ರತಿಷ್ಠೆಗಳು—ಮುಂತಾದ ವಿಷಯಗಳಲ್ಲಿ ಆಗಮಿಕರ ಪರಂಪರೆಯಲ್ಲಿಯೂ ಗ್ರಂಥಗಳಲ್ಲಿಯೂ ಪ್ರಚಾರದಲ್ಲಿ ಇದ್ದೇ ಇದೆ. ಇವುಗಳಲ್ಲಿ ಮೊದಲನೆಯದು ಉತ್ತರಭಾರತದಲ್ಲಿಯೂ ಎರಡನೆಯದು ದಕ್ಷಿಣದಲ್ಲಿಯೂ ಹೆಚ್ಚು ಬಳಕೆಯಲ್ಲಿದೆ.

ತಂತ್ರಶಾಸ್ತ್ರಗಳ ಪ್ರಯೋಗಭಾಗವು ಸಂಸ್ಕೃತ ವಿದ್ಯಾಭ್ಯಾಸದಲ್ಲಿ ಗಣ್ಯವಾಗಿ ಹಲವು ವರ್ಷಗಳಿಂದಲೂ ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆ(ವಿದ್ಯಾಲಯ)ದಲ್ಲಿ ಪಠ್ಯಭಾಗವಾಗಿ ಅಂಗೀಕೃತವಾಗಿರುವುದು ಮೈಸೂರಿನ ಹೆಮ್ಮೆಯಾಗಿದೆ. ಈ ಪಾಠಶಾಲೆಯಲ್ಲಿ ದಕ್ಷಿಣ ಭಾರತದಲ್ಲಿ ವಿಶೇಷ ಪ್ರಚಾರದಲ್ಲಿರುವ ಶೈವ, ಪಾಂಚರಾತ್ರ ಮತ್ತು ವೈಖಾನಸವೆಂಬ ಮೂರು ಪ್ರಧಾನಾಗಮಗಳಲ್ಲಿ ಶಿಕ್ಷಣವು ಕೊಡಲ್ಪಡುತ್ತಿದೆ. ವೀರಶೈವ ಮತ್ತು ತಂತ್ರಸಾರ ಆಗಮಗಳೂ ಇವುಗಳೊಡನೆ ಸೇರಿಬರುವಂತೆ ಶಿಕ್ಷಣ ಕ್ರಮವು ಈಚೆಗೆ ಏರ್ಪಟ್ಟಿದೆ. ಆಯಾ ದೇವಾಲಯಗಳಲ್ಲಿ ಅರ್ಚನಾದಿ ಕಾರ್ಯಗಳಿಗೆ ಆವಶ್ಯಕವಾದ ಅಧಿಕಾರಿವರ್ಗವನ್ನು ಸುಶಿಕ್ಷಿತವನ್ನಾಗಿ ಮಾಡುವುದಕ್ಕೆ ಬೇಕಾದ ಈ ಶಿಕ್ಷಣಗಳ ಆವಶ್ಯಕತೆಯನ್ನು ಹೆಚ್ಚು ಹೇಳ ಬೇಕಾಗಿಲ್ಲ. ಇದರ ಸಂಪೂರ್ಣ ಪ್ರಯೋಜನವು ಉಪಯೋಗಿಸಲ್ಪಡು ವುದನ್ನು ನಿರೀಕ್ಷಿಸಬೇಕಾಗಿದೆ. ಇದರ ಆವಶ್ಯಕತೆಯ ವಿಷಯದಲ್ಲಿ ಜನ ಸಾಮಾನ್ಯಕ್ಕೂ ತಿಳಿವಳಿಕೆಯನ್ನು ಕೊಡಬೇಕಾಗಿದೆ. ಆಗಮ ಮಹಾ ಮಂಡಲವು ಈ ದಿಕ್ಕಿನಲ್ಲಿ ಹೆಚ್ಚು ಉಪಯುಕ್ತವಾದ ಕಾರ್ಯವನ್ನು ಮಾಡ ಬಹುದಾಗಿದೆ.

ಕೇವಲ ಕರ್ಮಾನುಷ್ಠಾನವು ವ್ಯರ್ಥವಲ್ಲದಿದ್ದರೂ ಸಾಲದು. ಕರ್ಮಾನುಷ್ಠಾನದ ಹಿನ್ನೆಲೆಯನ್ನು ತಿಳಿಯುವುದು ಅವಶ್ಯವು—ಏಕೆಂದರೆ ಉಪನಿಷತ್ತುಗಳು ಹೀಗೆ ಹೇಳುತ್ತವೆ—'ಯದೇವ ವಿದ್ಯಯಾ ಕರೋತಿ ತದೇವ ವೀರ್ಯವತ್ತರಂ ಭವತಿ'—ತಿಳಿವಳಿಕೆಯಿಂದ ಮಾಡಿದುದೇ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಈ ಚಿಕ್ಕ ಗ್ರಂಥದಲ್ಲಿ ಶೈವಾಗಮವು ಸಂಕ್ಷಿಪ್ತ ವಾಗಿ ನಿರೂಪಿತವಾಗಿರುವುದು ಕಂಡುಬರುವುದು. ಇದು ದರ್ಶನಭಾಗ ವನ್ನು ವಿವರಿಸುತ್ತದೆ. ಸಾಮಾನ್ಯವಾಗಿ ನೋಡಿದ್ದರಲ್ಲಿ ಇದು ಶ್ರೀಕಂಠಾ ಚಾರ್ಯರ ಶಿವಪರವಿಶಿಷ್ಟಾದ್ವೈತಮತವನ್ನು ಅವಲಂಬಿಸಿರುವಂತೆ ಕಾಣ ಬರುವುದು. ರಾಮಾನುಜಾಚಾರ್ಯರು ವಿಷ್ಣುಪರವಾದ ವಿಶಿಷ್ಟಾದ್ವೈತ ಮತವನ್ನು ಪ್ರಚಾರಮಾಡಿರುವುದು ಪ್ರಸಿದ್ಧವೇ ಇದೆ.

ಈ ಗ್ರಂಥದ ಕರ್ತೃವು ಕವಿರಾಜಶೇಖರ ಸೂರ್ಯಭಟ್ಟಾರಕರೆಂದು ಹೇಳಲ್ಪಟ್ಟದೆ. ಇವರ ಕಾಲ ಮತ್ತು ಪೂರ್ವೋತ್ತರಗಳು ಏನೂ ತಿಳಿದು ಬಂದಿಲ್ಲ. 'ಶೈವಸಿದ್ಧಾಂತ ಪರಿಭಾಷಾ' ಎಂಬ ಗ್ರಂಥದ ಹೆಸರು 'ಶೈವ ಪರಿಭಾಷಾ' ಎಂಬ ದ್ವೈತಪರವಾದ ಶೈವಗ್ರಂಥವನ್ನು ಜ್ಞಾಪಕಕ್ಕೆ ತರುತ್ತದೆ. ಈ ಪುಸ್ತಕವು ಆರು ಪರಿಚ್ಛೇದಗಳಿಂದ ಕೂಡಿದೆ. ಮೊದಲನೆಯದು ಉಪೋದ್ಘಾತಪರಿಚ್ಛೇದವು. ಎರಡನೆಯ ಪ್ರಮಾಣಪರಿಚ್ಛೇದದಲ್ಲಿ ಯಥಾರ್ಥ ಜ್ಞಾನಕ್ಕೆ ಸಾಧನಗಳಾದ ಪ್ರಮಾಣಗಳನ್ನು ನಿರೂಪಿಸಿದೆ. ಇಲ್ಲಿಯೇ ಭಾರತೀಯ ಇತರ ಮತಗಳೂ ವಿಚಾರಕ್ಕೆ ಬಂದಿವೆ. ಇತರ ಮೂರು ಪರಿಚ್ಛೇದಗಳು ಶೈವಾಗಮಗಳಲ್ಲಿ ಮುಖ್ಯಗಳಾದ ಪತಿ, ಪಶು, ಪಾಶಗಳೆಂಬ ಮೂರು ಪದಾರ್ಥಗಳನ್ನು ಕ್ರಮವಾಗಿ ವಿವರಿಸುತ್ತವೆ. ನಾಲ್ಕನೆಯ ವಿನಿಯೋಗಪರಿಚ್ಛೇದದಲ್ಲಿ ಈ ಪದಾರ್ಥಗಳ ಉಪಯೋಗವು ನಿರೂಪಿತ ವಾಗಿದೆ. ಗ್ರಂಥದ ಶೈಲಿಯು ಕಠಿಣವೂ ಪ್ರಾಮಾಣಿಕವೂ ಆಗಿದೆ. ಶೈವದರ್ಶನದ ಈ ಅಲ್ಪಗ್ರಂಥವು ಶೈವಾಗಮದ ಅನುಯಾಯಿಗಳಿಗೆ ಮಾತ್ರವೇ ಅಲ್ಲದೆ, ಭಾರತೀಯ ವಿದ್ಯೆಗಳಲ್ಲಿ ಅಭಿರುಚಿಯುಳ್ಳ ಎಲ್ಲರಿಗೂ ಸಮುಚಿತವಾದ ಮೂಲಶಿಕ್ಷಣವನ್ನು ಉಂಟುಮಾಡಿಕೊಡುವುದರಲ್ಲಿ ಉಪ ಯುಕ್ತವಾಗುತ್ತದೆ. ಈ ಗ್ರಂಥವನ್ನು ಪ್ರಚಾರಕ್ಕೆ ತಂದಿರುವಲ್ಲಿ ಇದರ ಪ್ರಚಾರಕರೂ ಮತ್ತು ಇದರ ಪರಿವರ್ತನಕಾರರೂ ಸಹ ಓದುಗರ ಕೃತಜ್ಞತೆಗೆ ಭಾಜನರಾಗಿದ್ದಾರೆ.

4–3–58 ಕೆ. ಗುರುದತ್

'ಪ್ರತಿಭಾ'
ಶಾಂತಿನಗರ
ಬೆಂಗಳೂರು-1

ಶ್ರೀಃ

ಪೀ ೞಿ ಕೆ

ನಮಸ್ತಸ್ಮೈ ಗಣೇಶಾಯ ಬ್ರಹ್ಮವಿದ್ಯಾಪ್ರದಾಯಿನೇ
ಯಸ್ಯಾಗಸ್ತ್ಯಾಯತೇ ನಾಮ ವಿಘ್ನಸಾಗರಶೋಷಣೇ ॥
ಮನೋನ್ಮನೀನಾತ್ಮಕಯಾ ಸಮೇತೇ
ಶ್ರೀವೈದ್ಯನಾಥೇಶ್ವರಸಾರ್ವಭೌಮೇ ।
ಹೃದಿಸ್ಥಿತೇ ಮೇ ಕಿಮು ವಾಂಛಿತಾರ್ಥಃ
ನ ಲಭ್ಯತೇ ದೈವಿಕಮಾನುಷೇಷು ॥

ಆಸ್ತಿಕಮಹೋದಯರೇ,

"ಶ್ರೀಶೈವಸಿದ್ಧಾಂತಪರಿಭಾಷಾ" ಎಂಬ ಈ ಗ್ರಂಥವು ಬೆಳಕಿಗೆ ಬರಲು ಕಾರಣವಾದ ಹಿನ್ನೆಲೆಯನ್ನು ಇಲ್ಲಿ ಪ್ರಸ್ತಾಪಿಸುವುದು ಅನುಚಿತವಾಗಲಾರದು.

ನಾನು ಶೈವಾಗಮವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಪಠ್ಯಗ್ರಂಥವಾಗಿದ್ದ "ಶ್ರೀಕಂಠಭಾಷ್ಯ"ವನ್ನೂ, ಅದಕ್ಕೆ ಶ್ರೀ ಅಪ್ಪಯ್ಯದೀಕ್ಷಿತರವರಿಂದ ರಚಿತವಾಗಿರುವ "ಶಿವಾರ್ಕಮಣಿದೀಪಿಕಾ" ಎಂಬ ವ್ಯಾಖ್ಯಾನವನ್ನೂ ಅಭ್ಯಾಸಮಾಡಬೇಕಾಗಿತ್ತು. ಆ ಗ್ರಂಥಭಾಗಗಳನ್ನು ಹೇಳಿಕೊಡುತ್ತಿದ್ದ ನಮ್ಮ ಅಧ್ಯಾಪಕರಾದ ಆಸ್ಥಾನಮಹಾವಿದ್ವಾನ್ ಶ್ರೀ ವೆಂಕಟಸುಬ್ರಹ್ಮಣ್ಯ ಶಾಸ್ತ್ರಿಗಳವರು ಉದ್ದಾಮಪಂಡಿತರಾಗಿದ್ದ ಕಾರಣ ಅಲ್ಪಜ್ಞರಿಗೂ ಅರ್ಥವಾಗುವಂತೆ ಸರಳವಾದ ಶೈಲಿಯಲ್ಲಿ ಪಾಠಮಾಡುತ್ತಿದ್ದರು. ಪ್ರಕರಣ ಗ್ರಂಥಗಳ ಪರಿಚಯವಿಲ್ಲದೆ ಶ್ರೀಕಂಠಭಾಷ್ಯದಂತಹ ದರ್ಶನಗ್ರಂಥವನ್ನು ವ್ಯಾಸಂಗಮಾಡುವುದು ಕಷ್ಟಸಾಧ್ಯವೆಂದು ಆಗಾಗ ಅವರು ಹೇಳುತ್ತಿದ್ದುದು ನಮ್ಮ ಅನುಭವಕ್ಕೂ ಬರದೇ ಇರಲಿಲ್ಲ.

ನನ್ನೊಡನೆ ಆಗ ವ್ಯಾಸಂಗಮಾಡುತ್ತಿದ್ದ ನನ್ನ ತಮ್ಮಂದಿರಾದ, ಈಗ ಮೈಸೂರು ಚಾಮುಂಡಿಬೆಟ್ಟದ ಶ್ರೀಚಾಮುಂಡೇಶ್ವರೀ ಅಮ್ಮನವರ ದೇವಸ್ಥಾನದ ಆಗಮಿಕರಾಗಿರುವ ಶೈವಾಗಮವಿಶಾರದ, ಆಗಮಾಚಾರ್ಯ ಚಿ| ರಾ| ಶ್ರೀನಾರಾಯಣದೀಕ್ಷಿತರಿಗೂ, ನನಗೂ ದೇವರದಯೆಯಿಂದ,

ಹಿರಿಯರ ಆಶೀರ್ವಾದಾನುಗ್ರಹಬಲದಿಂದ ದೊರೆತಿದ್ದ ಸಾಕಾದಷ್ಟು ಸಂಸ್ಕೃತಸಾಹಿತ್ಯಜ್ಞಾನದ ಬಲದಿಂದ ಸ್ವಲ್ಪಮಟ್ಟಿಗಾದರೂ ನಮ್ಮ ಅಧ್ಯಾಪಕರ ಪ್ರವಚನವನ್ನು ಅರ್ಥಮಾಡಿಕೊಂಡು ಮನನಮಾಡಲು ಸಾಧ್ಯವಾಯಿತು. ಅಂತೆಯೇ ನಮ್ಮ ವಿದ್ಯಾರ್ಥಿದೆಸೆಯು ದೇವರ ಕೃಪೆಯಿಂದ ಯಶಸ್ವಿಯಾಗಿಯೇ ಪೂರ್ಣವಾಯಿತು.

ನಮ್ಮ ಅನುಭವದ ಫಲವಾಗಿ—ಮುಂದೆ ಶೈವಾಗಮವನ್ನು ವ್ಯಾಸಂಗ ಮಾಡಲು ಬರುವ ನಮ್ಮ ಕಿರಿಯರಿಗೆ ಸಾಕಾದಷ್ಟು ಸಂಸ್ಕೃತದ ವ್ಯುತ್ಪತ್ತಿಯಿಲ್ಲದಿದ್ದಾಗ ಆ ಪ್ರೌಢಗ್ರಂಥಗಳನ್ನು ಅಭ್ಯಾಸಮಾಡಲು ಸಾಧ್ಯವಾಗಲಾರದೆಂದು ನಮಗೆ ಮನವರಿಕೆಯಾಗಿತ್ತು. ಸರಿಯಾದ ಅಸ್ತಿಭಾರವಿಲ್ಲದೆ ಕಟ್ಟುವ ಕಟ್ಟಡವು ಸುಭದ್ರವಾಗಿ ಹೇಗೆ ನಿಲ್ಲಲಾರದೋ, ಹಾಗೆಯೇ ಪ್ರಕರಣಗ್ರಂಥಗಳ ಪರಿಚಯವಿಲ್ಲದೆ ಭಾಷ್ಯಗ್ರಂಥವನ್ನು ಅಭ್ಯಾಸಮಾಡ ಬಯಸುವುದು ಅಸಾಧ್ಯವೆಂಬ ನಮ್ಮ ಅನುಭವವು ಆಗಮುಪಠ್ಯಗ್ರಂಥಗಳ ತಿದ್ದುಪಡಿಯ ಅವಶ್ಯಕತೆಯನ್ನು ಪ್ರೇರಿಸಿತು.

ಯಾವದೇ ಸಂಕಲ್ಪವು ಸಿದ್ಧಿಯಾಗಲು ಕ್ರಿಯಾಸಿದ್ಧಿಯು ಬೇಕೇ ಬೇಕು. ಉದಾತ್ತಸಂಕಲ್ಪಗಳ ಸಿದ್ಧಿಯು ಸಾಧ್ಯವಾಗಲು ಸಮುಚಿತಸ್ಥಾನಮಾನಗಳೂ ಅವಶ್ಯಕ. ಇವೆರಡೂ ದೊರೆತಾಗ ಕರ್ತವ್ಯದ ಹೊಣೆಯನ್ನು ಅರಿತು, ನಿಷ್ಕಾಮನೆಯ ದೃಷ್ಟಿಯಲ್ಲಿ ಮುನ್ನಡೆದರೆ ಮಾತ್ರ ಪರಮೇಶ್ವರನ ಕರುಣೆ ಒದಗಿಬಂದು ಹಿಡಿದ ಕಾರ್ಯ ಕೈಗೂಡುವುದು; ಸತ್ವಶುದ್ಧಿಯಿಲ್ಲದ, ಕ್ರಿಯಾಸಿದ್ಧಿಪಡೆಯದ, ಸ್ವಾರ್ಥಸಂಕಲ್ಪಗಳು ಅನಾಯಾಸವಾಗಿ ಕೈಗೂಡಿದಂತೆ ಕೆಲವು ವೇಳೆ ಕಂಡುಬಂದರೆ ಅದು ಪೂರ್ವಪುಣ್ಯಬಲದಿಂದ ಅನುಭವಕ್ಕೆ ಬಂದ ಅಂಶವಾಗಿದ್ದಿರಬೇಕು, ಅಷ್ಟೆ. ಆದರೂ ಆ ಪ್ರಯತ್ನಸಿದ್ಧಿಯು ಪರಾರ್ಥಕ್ಕಾಗಿ ಪ್ರಯೋಜಕವಾಗದಿದ್ದಾಗ ತರಂಗದಂತೆ ಕೇವಲ ಆಶಾಜನಕ ಮತ್ತು ಅಶಾಶ್ವತ ಎಂಬುದರಲ್ಲಿ ಸಂದೇಹವಿಲ್ಲ.

"ಕ್ರಿಯಾಸಿದ್ಧಿಸ್ಸತ್ವೇ ಭವತಿ ಮಹತಾಂ ನೋಪಕರಣೇ"
"ನ ಸಾಹಸಮನಾರುಹ್ಯ ನರಃ ಕಲ್ಯಾಣಮೃಚ್ಛತಿ"
"ತೇನ ವಿನಾ ತೃಣಮಪಿ ನ ಚಲತಿ"

ಎಂಬ ಸತ್ಯಸಂದೇಶಗಳು ಬಾಲ್ಯದಿಂದಲೂ ನನ್ನ ನಿತ್ಯಜೀವನದಲ್ಲಿ ಮಾರ್ಗ ದರ್ಶಕವಾಗಿದ್ದು ಕರ್ತವ್ಯಜಾಗೃತಿಗೆ ಸಾಧಕವಾಗಿವೆ. ನನ್ನ ಮನಸ್ಸಿನಲ್ಲಿ ಥಟ್ಟನೆ ಒಂದು ಯೋಚನೆ ಹೊಳೆಯಿತೆಂದರೆ, ಅದು ಪರಮೇಶ್ವರನ ಪ್ರೇರಣೆ ಯೆಂಬ ಭಾವನೆ ಮೊದಲು ಬರುವುದು, ಆಮೇಲೆ ಅದರ ಸಿದ್ಧಿಗಾಗಿ ಅಗತ್ಯ ವಾದ ಉಪಾಸನೆಯಿಂದ ಸಂಕಲ್ಪವನ್ನು ಸುನಿಶ್ಚಿತರೂಪಕ್ಕೆ ತರುವ ಪ್ರಯತ್ನ ತಾನಾಗಿ ನಡೆಯುವುದು; ತರುವಾಯ ಪ್ರಯತ್ನದ ಮುನ್ನಡೆಯಲ್ಲಿ ಕೆಲವು ವೇಳೆ ಅಡ್ಡಿ-ಆತಂಕಗಳು ತೋರಿಬಂದರೂ, ಕಾರ್ಯದ ಸಾಧ್ಯಾಸಾಧ್ಯತೆಯ ವಿವೇಕದಿಂದ ಪ್ರಯತ್ನದ ಮುನ್ನಡೆ ಸಾಗುವುದು. ಆಗಲೂ ಅದು ಈಶ್ವರ ಸೇವಾರೂಪವಾಗಿದ್ದು ಜಯಾಪಜಯಗಳು ಭಗವಂತನ ಅಡಿದಾವರೆಗಳಿಗೇ ಮೀಸಲಾಗಿಬಿಡುವುವು.

ಆಗ ಆಸೆ-ನಿರಾಸೆಗಳ ಹೊಯ್ದಾಟಗಳಿಗವಕಾಶವಿಲ್ಲದೆಯೇ ಪರಮಾ-ತ್ಮನ ಸೇವಾರೂಪವಾದ ಪ್ರಯತ್ನವು ಫಲಾಭಿಸಂಧಿಯನ್ನು ಪಡೆಯುವುದು. ಹಾಗೂ ಸಂಕಲ್ಪಸಿದ್ಧಿಯಾಗಲು ಕಾರಣಾಂತರಗಳಿಂದ ಸ್ವಲ್ಪ ಸಾವಕಾಶ ವಾದರೂ ವಿಫಲವಾಗಲಂತೂ ಅವಕಾಶವೇ ಇಲ್ಲ. ಇದುವರೆಗೆ ಈ ರೀತಿ ಅನೇಕ ಕಾರ್ಯಗಳು ನಡೆದಿರುವುದೂ, ನಡೆಯುತ್ತಿರುವುದೂ, ನಡೆಯ ಬಹುದಾದುದೂ, "ಸಂತೋಷಂ ಜನಯೇತ್ಪ್ರಾಜ್ಞಃ ತದೇವೇಶ್ವರಪೂಜನಮ್" ಎಂಬ ನಿಶ್ಚಯದಿಂದ ಸ್ವಾರ್ಥತ್ಯಾಗದಿಂದಲೇ ಆರಂಭವಾಗುವುದರಿಂದ ಈಶ್ವರಸೇವಾರೂಪವಾಗಿದ್ದು ತನಗೆ ತಾನೇ ನಡೆದು ಬರುತ್ತಿರುವುದು ಅನುಭವಸಿದ್ಧವಾಗಿವೆ.

ನಾನು ಆಗಮಪರೀಕ್ಷೆಯಲ್ಲಿ ಉತ್ತೀರ್ಣನಾದ ವರ್ಷವೇ ಮೈಸೂರು ಸರ್ಕಾರದ ಮುಜರಾಯಿ ಇಲಾಖೆಯ ಶೈವಾಗಮಪಂಡಿತಸ್ಥಾನಕ್ಕೆ ಉಮೇದುವಾರಿಕೆಯ ಅರ್ಜಿಯನ್ನು ಸಲ್ಲಿಸುವ ಸಂದರ್ಭ ಒದಗಿತು. ಉಮೇದುವಾರರ ಯೋಗ್ಯತಾಂಶದ ಪರಿಶೀಲನೆಯಿಂದ 1935ನೆಯ ನವೆಂಬರ್ ಮಾಹೆಯಲ್ಲಿ ಆ ಉದ್ಯೋಗವು ಪರಮೇಶ್ವರನ ಅನುಗ್ರಹರೂಪ ವಾಗಿ ನನಗೆ ಲಭಿಸಿತು.

ನನ್ನನ್ನು 'ಲೌಕಿಕ ವಿದ್ಯಾಭ್ಯಾಸಕ್ಕೆ ಬಿಡದೆ, ಆಗಮವಿದ್ಯಾವ್ಯಾಸಂಗವನ್ನು ಮಾಡಿಸಿ ನಮ್ಮ ಸುಪವಿತ್ರವಾದ ಕುಲಮರ್ಯಾದೆಯನ್ನುಳಿಸಿ ಬೆಳೆಯಿಸಲು ಸಾಧಕವಾದಂತೆ ಶಿಕ್ಷಣವನ್ನು ಕೊಡಬೇಕೆಂದು' ನಮ್ಮ ದೊಡ್ಡಪ್ಪನವರಾದ ಶ್ರೀಚಾಮುಂಡೇಶ್ವರೀ ಅಮ್ಮನವರ ಸನ್ನಿಧಿಯ ಆಗಮಿಕರೂ, ಮೈಸೂರು 'ಆಗಮತ್ರಯಮಂಡಲಿ' ಮತ್ತು 'ಶ್ರೀಶೈವಾಗಮಾದ್ವೈತ ಸಭೆ'ಯ ಸ್ಥಾಪಕರೂ ಅಧ್ಯಕ್ಷರೂ ಆಗಿದ್ದು ಆಗಮಶಾಸ್ತ್ರದ ಹಾಗೂ ಅರ್ಚಕಾಗಮಿಕರುಗಳ ಪುರೋಭಿವೃದ್ಧಿಗಾಗಿ ಸತತ ಶ್ರಮಿಸಿದ ಪೂಜ್ಯಪಾದ ಶ್ರೀ ಏಕಾಮ್ರದೀಕ್ಷಿತರವರಿಗೂ, 'ಕುಲವಿದ್ಯೆಯನ್ನೇ ಅಭ್ಯಸಿಸಿ ಹಿರಿಯರ ಮಾರ್ಗದಲ್ಲಿ ನಡೆದು ಆದರ್ಶವಾದ ಜೀವನವನ್ನು ನಡೆಯಿಸಬೇಕೆಂದು ನನಗೂ, ಆಗಿಂದಾಗ ಪ್ರೋತ್ಸಾಹಿಸಿ ಸದಾಶ್ರಯನೀಡಿದ ನಮ್ಮನ್ನಾಳಿದ ಮಹಾಸ್ವಾಮಿಯವರಾದ ಮೈಸೂರು ಶ್ರೀಮನ್ಮಹಾರಾಜ ಶ್ರೀಮನ್ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಒಲುಮೆಯ ಪ್ರೀತಿ ವಿಶ್ವಾಸಗಳೂ ನನ್ನ ಈ ಉದ್ಯೋಗ ಪ್ರಾಪ್ತಿಗೆ ಕಾರಣವಾದುವು. ಆ ಪ್ರೋತ್ಸಾಹವೇ ವಿವಿಧ ಮುಖಗಳಿಂದ ಬೆಳೆಯುತ್ತ ಬಂದು ಆಗಮವಿದ್ಯಾಭಿವೃದ್ಧಿ ಸಾಧನೆಯಲ್ಲಿ ಮತ್ತು ಅರ್ಚಕಾಗಮಿಕರುಗಳ ಸ್ಥಾನಮಾನಗಳ ರಕ್ಷಣೆ ಪೋಷಣೆಗಳ ವಿಷಯದಲ್ಲಿ ಪ್ರಯತ್ನಶೀಲನಾಗಲು ನನಗೆ ಉತ್ತೇಜನ ಕೊಟ್ಟಿತೆಂಬುದನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುವುದು ನನ್ನ ಆದ್ಯ ಪವಿತ್ರ ಕರ್ತವ್ಯವಾಗಿದೆ.

ಅಲ್ಲಿಂದ ಮುಂದೆ ಒಂದು - ಒಂದೂವರೆ ವರ್ಷಗಳಲ್ಲಿ ಅಂದರೆ 1937 ಮತ್ತು 1938ನೆಯ ಇಸವಿಗಳಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲೆಯಲ್ಲಿ ನಡೆದ 'ಆಗಮಿಕಪರೀಕ್ಷೆ'ಯ ವಾಚಾ ಪರೀಕ್ಷಕನಾಗಿ ಕರ್ತವ್ಯನಿರ್ವಹಣೆ ಮಾಡುವ ಸುಸಂದರ್ಭ ಒದಗಿಬಂತು. ಆಗಲೇ ಆಗಮವಿದ್ಯಾವ್ಯಾಸಂಗದ ಬಗ್ಗೆ ಇದ್ದ ತೊಡಕುಗಳನ್ನು ಪರಿಹರಿಸಲು ಆಗಮಶಾಸ್ತ್ರ ಪಠ್ಯಗ್ರಂಥಗಳ ತಿದ್ದುಪಡಿಯ ಅವಶ್ಯಕತೆಯನ್ನು ಕುರಿತ ನನ್ನ ಅಭಿಪ್ರಾಯವನ್ನು ವಿವರವಾಗಿ ಮಹಾಪಾಠಶಾಲೆಯ ಪ್ರಿನ್ಸಿಪಾಲರವರಿಗೆ ಲಿಖಿತಮೂಲಕ ಮನವರಿಕೆಮಾಡಿದೆನು.

ಹೀಗೆ 1937-38ರಲ್ಲಿ ಕೊಟ್ಟ ನನ್ನ ಸಲಹೆಯು ಕಾರ್ಯಗತವಾಗಲು ಪ್ರಾರಂಭವಾದುದು 1946ನೆಯ ಇಸವಿಯಲ್ಲಿ. ಆಗ ಆಗಮಶಿಕ್ಷಣ ಮತ್ತು ಪರೀಕ್ಷಾಪಠ್ಯಗ್ರಂಥಗಳ ವ್ಯವಸ್ಥೆಗಾಗಿ ಏರ್ಪಟ್ಟ ಸಮಿತಿ (ಆಗಮ ಸಿಲಿಬಸ್ ಕಮಿಟಿ)ಯ ಸ್ಥಾಪನೆಯಾಗಿ ಪ್ರಯತ್ನನಡೆದರೂ, ಮೇಲಿಂದ ಮೇಲೆ ಬರುತ್ತಿದ್ದ ಎಡರು - ತೊಡರುಗಳು ಪರಿಹೃತವಾಗಿ ಸುವ್ಯವಸ್ಥಿತ ಯೋಜನೆಯು ಸಿದ್ಧವಾದುದು, ಆಗಮಪಾಠ - ಪ್ರವಚನಗಳ ಮೇಲ್ವಿ ಚಾರಣೆಗಾಗಿ ಘನಸರ್ಕಾರದವರು 'ಆಗಮತ್ರಯ ಮಹಾಮಂಡಲ'ದ ಸಲಹೆಯನ್ನು ಮಾನ್ಯಮಾಡಿ, 'ಆಗಮ ವಿದ್ಯಾಶಿಕ್ಷಣ - ಪರೀಕ್ಷಾ ಮಹಾ ಸಭೆ' (The Advisory Committee for Agama studies and Examinations)ಯನ್ನು ರಚಿಸಿದ ನಂತರವೇ ಎಂಬುದು ಗಮ ನಾರ್ಹವಾದ ವಿಷಯವಾಗಿದೆ. ಅದುವರೆಗೆ ಶೈವಾಗಮ, ವೈಖಾನಸಾಗಮ ಮತ್ತು ಪಾಂಚರಾತ್ರಾಗಮಗಳೆಂಬ ಮೂರು ಶಾಖೆಯ ವ್ಯಾಸಂಗಮಾತ್ರ ನಡೆಯುತ್ತಿದ್ದುದರ ಜೊತೆಗೆ, ಶೈವಾಗಮದ ಉತ್ತರಭಾಗವಾದ 'ವೀರ ಶೈವಾಗಮ', ಪಾಂಚರಾತ್ರಾಗಮದ ಒಳಭೇದವಾಗಿ ವೈಷ್ಣವ (ಮಾಧ್ವ) ಸಂಪ್ರದಾಯಾನುಯಾಯಿಗಳಿಗಾಗಿ ಬೇಕಾಗಿದ್ದ 'ತಂತ್ರಸಾರಾಗಮ' ಶಿಕ್ಷಣದ ವ್ಯವಸ್ಥೆಯೂ ಆಗಬೇಕೆಂದು ಅದೇ ಸಮಯದಲ್ಲಿ ಸಲಹೆ ಮಾಡಿದ ಆಗಮತ್ರಯ ಮಹಾಮಂಡಲದವರ ಸಕಾರಣವಾದ ಸಕಾಲೀನವಾದ ಸಲಹೆಯನ್ನು ಘನಸರ್ಕಾರದವರು ಒಪ್ಪಿದಮೇಲೆ, ಆ ಭಾಗಗಳಿಗೂ ಪಠ್ಯ ಗ್ರಂಥಗಳ ವ್ಯವಸ್ಥೆ ಮಾಡಲು 1956ರಲ್ಲಿ ಆಗಮ ಸಿಲಿಬಸ್ ಕಮಿಟಿಯನ್ನು ರಚಿಸಿದರು. ಅವರಿಂದ ಅಂಗೀಕೃತವಾದ ಪಠ್ಯಗ್ರಂಥಗಳ ತಿದ್ದುಪಡಿಯ ಸಲಹೆಗಳು ಆಗಮಬೋರ್ಡಿನವರಿಂದ ಅನುಮೋದಿತವಾಗಿ, ಮುಜರಾಯಿ ಕಮಿಷನವರಿಂದ ಶಿಫಾರಸು ಮಾಡಲ್ಪಟ್ಟು G.O. No. S.R. 7-5695-96—Muz. 155-56-2, dated 26th November 1956ರ ಮೂಲಕ ಘನಸರ್ಕಾರದವರಿಂದ ಅಂಗೀಕೃತವಾಯಿತು.

ಹೀಗೆ ನನ್ನ ಸಂಕಲ್ಪವು ಸಿದ್ಧಿಯಾಗಲು ಇಪ್ಪತ್ತು ವರ್ಷಗಳ ಸತತ ವ್ಯವಸಾಯ ಬೇಕಾದರೂ, ಆಗಮವ್ಯಾಸಂಗ ಮಾಡಿದ ವಿದ್ಯಾರ್ಥಿಗಳು

ಹಾಗೆಯೇ ಪ್ರಕಟಿಸುವುದಕ್ಕಿಂತ ಕನ್ನಡ ಅನುವಾದದೊಡನೆ ಪ್ರಕಟಿಸಿದರೆ ಹೆಚ್ಚು ಜನರಿಗೆ (ಅಲ್ಪಜ್ಞರಿಗೂ) ಈ ಗ್ರಂಥದ ಪ್ರಯೋಜನವಾಗಬಹುದೆಂದು ತೋರಿತು.

ಈ ನನ್ನ ಆಶಯವನ್ನು ಆದರಿಸಿ, ಈ ಗ್ರಂಥವನ್ನು ಕನ್ನಡಭಾಷೆಯಲ್ಲಿ ಸರಳವಾಗಿ ಅನುವಾದ ಮಾಡಿಕೊಡಲು ಆನಂದದಿಂದ ಮುಂದೆ ಬಂದು ನಿಃಸ್ವಾರ್ಥಬುದ್ಧಿಯಿಂದ ಸಹಾಯ ಸಲ್ಲಿಸಿದ ನನ್ನ ಮಾನ್ಯ ಮಿತ್ರರಾದ ಶೃಂಗಗಿರಿ ವಿದ್ವಾನ್ ಕವಿ, ನರಸಿಂಹಭಟ್ಟರವರ ಉಪಕಾರವನ್ನು ನಾನು ಎಂದೆಂದೂ ಮರೆಯುವಂತಿಲ್ಲ.

ಈ ಗ್ರಂಥವು ಪಠ್ಯಗ್ರಂಥವಾಗಲೂ ಪ್ರಕಟವಾಗಲೂ ನಡೆಯಿಸಿದ ನನ್ನ ಪ್ರಯತ್ನದಲ್ಲಿ ಸಹಕಾರಮಾಡಿ ಯಥೋಚಿತವಾದ ಸಲಹೆಗಳನ್ನು ನೀಡಿ ಪ್ರೋತ್ಸಾಹಿಸಿದವರು — ಆಗಮತ್ರಯಮಹಾಮಂಡಲದಂತಹ ಸುಭದ್ರವಾದ ಸಂಸ್ಥೆಯ ಸ್ಥಾಪನೆಯಲ್ಲಿ, ಬೆಳವಣಿಗೆಯಲ್ಲಿ, ಈಶ್ವರಪ್ರೇರಣೆಯಿಂದ (ಗೌರವ ಕಾರ್ಯದರ್ಶಿಯಾಗಿ) ಕಾರ್ಯತತ್ಪರನಾದ ನನಗೆ ಸತತ ಬೆಂಬಲ ನೀಡಿದ, ನೀಡುತ್ತಿರುವ ವೈದಿಕಧರ್ಮಾಚಾರ್ಯ, ವಿದ್ಯಾಭೂಷಣ ಬ್ರಹ್ಮಶ್ರೀ ಎ. ಮಲ್ಲಿಕಾರ್ಜುನಶಾಸ್ತ್ರೀ, ಎಂ.ಎ. ಅವರು. ಇವರ ವಿಷಯದಲ್ಲಿ ಉಪಚಾರೋಕ್ತಿಗಳನ್ನಾಡುವುದು "ಉತ್ಪನ್ನಸೌಹೃದಾನಾಮುಪಚಾರಃ ಕೈತವಂ ಭವತಿ" ಎಂದಾಗುತ್ತದೆ. ಬೆಂಗಳೂರು ಶ್ರೀಚಾಮರಾಜೇಂದ್ರ ವೇದಮಹಾಪಾಠಶಾಲೆಯ ಪ್ರಿನ್ಸಿಪಾಲರಾಗಿದ್ದಾಗ ಆ ಪಾಠಶಾಲೆಯಲ್ಲಿ ಆಗಮತ್ರಯವಿದ್ಯಾವ್ಯಾಸಂಗಕ್ಕೆ ತಕ್ಕ ಯೋಜನೆಯನ್ನು ರೂಪಿಸಿ, ಆ ಮೂಲಕ ಆಗಮತ್ರಯಜನತೆಯ ಕೃತಜ್ಞತೆಗೆ ಪಾತ್ರರಾದ ಶ್ರೀಯುತರೇ ಆಗಮತ್ರಯಮಹಾಮಂಡಲದ ಸ್ಥಾಪನೆಗೂ ಮಾರ್ಗದರ್ಶಕರಾದರು. ಶ್ರೀ ಶೃಂಗೇರಿ ಜಗದ್ಗುರುಮಹಾಸನ್ನಿಧಾನದ ಕೃಪಾಶೀರ್ವಾದದಿಂದ ಮತ್ತು ಶ್ರೀದ್ವಾರಕಾಜಗದ್ಗುರುಮಹಾಸನ್ನಿಧಾನದ ಕರಾವಲಂಬದಿಂದ ಸ್ಥಾಪಿತವಾದ ಮಹಾಮಂಡಲದ ಅಧ್ಯಕ್ಷರಾಗಿ, ಅಭೂತಪೂರ್ವವಾದ ನಾಲ್ಕು ಮಹಾ ಸಮ್ಮೇಳನಗಳನ್ನು ನಡೆಯಿಸಿ, ಆಳುವ ಮಹಾಸ್ವಾಮಿಯವರಾದ ಶ್ರೀ ಜಯಚಾಮರಾಜಒಡೆಯರವರ ಹಾಗೂ ರಾಜಸೇವಾಪ್ರಸಕ್ತ ಶ್ರೀ ಮಂಗಳಂ

ಶೇಷಾದ್ರಿ, ಎಂ.ಎ. ಅವರು, ವಿದ್ಯಾರತ್ನ ಶ್ರೀ ಕೆ. ಗುರುದತ್, ಬಿ.ಎ., ಐ.ಎ.ಎಸ್ ರವರು, ಜನತಾಹಿತೈಷಿ, ಲೋಕಸೇವಾಧುರೀಣ ಶ್ರೀ ಎ. ಎನ್. ರಾಮರಾವ್, ಬಿ.ಎ., ಬಿ.ಎಲ್., ಎಂ.ಎಲ್.ಸಿ. ಅವರು ಮುಂತಾದ ಆಸ್ತಿಕಾಗ್ರಣಿಗಳ ಉದಾರಾಶ್ರಯವನ್ನು ಮಹಾಮಂಡಲಕ್ಕೆ ದೊರಕಿಸಿಕೊಟ್ಟು ಪ್ರಕೃತ ಉಪಾಧ್ಯಕ್ಷರಾಗಿದ್ದಾರೆ. ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಾಲರಾದ ಕೂಡಲೇ ಆಗಮ ವಿದ್ಯಾವ್ಯಾಸಂಗದ ಮೇಲ್ವಿಚಾರಣೆಗಾಗಿ ಘನಸರ್ಕಾರದವರಿಂದ ರೂಪಿತವಾದ ಆಗಮವಿದ್ಯಾ-ಶಿಕ್ಷಣ-ಪರೀಕ್ಷಾಮಹಾಸಭೆಯ ಕಾರ್ಯದರ್ಶಿಗಳಾಗಿಯೂ ಸೇವೆ ಸಲ್ಲಿಸಲು ದೊರಕಿರುವ ಸದವಕಾಶವನ್ನು ಸಾರ್ಥಕಪಡಿಸಿಕೊಳ್ಳುತ್ತಿರುವ ಶ್ರೀ ಎನ್. ಮಲ್ಲಿಕಾರ್ಜುನಶಾಸ್ತ್ರೀ, ಎಂ.ಎ. ಅವರಿಂದ ಆಗಮತ್ರಯಜನತೆಗೆ ಆಗಿರುವ-ಆಗುತ್ತಿರುವ ಉಪಕಾರವು ಅಪಾರವಾಗಿದ್ದು ಚಿರಂತನವಾಗಿದೆಯೆಂಬುದರಲ್ಲಿ ಅತಿಶಯೋಕ್ತಿಯೇನೂ ಇರುವುದಿಲ್ಲ.

ಆಗಮಜಾಗೃತಿಸಾಧನೆಗಾಗಿ ಹೊಸ ಅಧ್ಯಾಯವನ್ನು ಪ್ರಾರಂಭಿಸಬೇಕಾಗಿರುವ ಈ ಸಮಯದಲ್ಲಿ "ಆಗಮವಿದ್ಯಾಶಿಕ್ಷಣ-ಪರೀಕ್ಷಾಮಹಾ-ಸಭೆ"ಯ ಮಾನ್ಯ ಅಧ್ಯಕ್ಷರಾದ ವಿದ್ಯಾರತ್ನ ಶ್ರೀ ಕೆ. ಗುರುದತ್, ಬಿ.ಎ., ಐ.ಎ.ಎಸ್. (ಮೈಸೂರು ದೇಶದ ವಿದ್ಯಾ ಇಲಾಖೆಯ ನಿವೃತ್ತ ಮುಖ್ಯಾಧಿಕಾರಿಗಳು) ಅವರೇ "ಆಗಮತ್ರಯ ಮಹಾಮಂಡಲ"ದ ಅಧ್ಯಕ್ಷರಾಗಿಯೂ ಇರುವುದು ಆಸ್ತಿಕಜನತೆಗೆ ಶುಭಸೂಚಕವಾಗಿದೆ.

"ತ್ರಿಪದಾರ್ಥಂ ಚತುಷ್ಪಾದಂ ಮಹಾತಂತ್ರಂ ಜಗತ್ಪತಿಃ
ಸೂತ್ರೇಣೈಕೇನ ಸಂಕ್ಷಿಪ್ಯ ಪ್ರಾಹ ವಿಸ್ತರತಃ ಪುನಃ"

(ಜಗದ್ಗುರು)

ಎಂಬಂತೆ— ಪತಿ-ಪಶು-ಪಾಶಗಳೆಂಬ ತ್ರಿಪದಾರ್ಥಗಳನ್ನು ಬೋಧಿಸುವ ಜ್ಞಾನ, ಯೋಗ, ಕ್ರಿಯಾ, ಚರ್ಯಾತ್ಮಕವಾದ ನಾಲ್ಕು ಪಾದಗಳಿಂದ ಕೂಡಿರುವ "ಸಿದ್ಧಾಂತ"ವೆಂಬ ಶೈವಾಗಮವು ಜಗದ್ಗುರುವಾದ ಪರಮೇ-ಶ್ವರನಿಂದ ಸೂತ್ರರೂಪವಾಗಿ ಹೊರಬಂದು, ಪುನಃ ಆತನ ಪಂಚಮುಖ

*

ಗಳಿಂದಲೇ ಕೌಶಿಕ, ಕಾಶ್ಯಪ, ಭಾರದ್ವಾಜ, ಗೌತಮ, ಅಗಸ್ತ್ಯ ಮೊದಲಾದ ಮಹರ್ಷಿಗಳಿಗೆ ವಿವರವಾಗಿ ಬೋಧಿತವಾಗಿದೆ. ಶೈವಾಗಮ (ಸಿದ್ಧಾಂತ)ವನ್ನು ಸಾದ್ಯಂತವಾಗಿ ಪರಿಚಯಮಾಡಿಕೊಳ್ಳಲು ತ್ರಿಪದಾರ್ಥಜ್ಞಾನವು ಅವಶ್ಯಕ ವಾಗಿದೆ. ಈ "ಶ್ರೀಶೈವಸಿದ್ಧಾಂತಪರಿಭಾಷಾ" ಎಂಬ ಗ್ರಂಥವು ಆಗಮ ಶಾಸ್ತ್ರಪ್ರವೀಣರಾದ ಶ್ರೀಕವಿರಾಜಸೂರ್ಯಭಟ್ಟಾರಕರಿಂದ ರಚಿತವಾಗಿರುವ ತ್ರಿಪದಾರ್ಥಜ್ಞಾನಬೋಧಕವಾದ ಪ್ರಕರಣಗ್ರಂಥವಾಗಿದ್ದು ಶೈವಾಗಮ-ಜಿಜ್ಞಾಸುಗಳಿಗೆ ಕೈದೀವಿಗೆಯಂತಿದೆ.

ಶೈವಾಗಮಸಮ್ಮತವಾದ ಶಿವಶಕ್ತ್ಯುಪಾಸನೆಯಲ್ಲಿ ನಿಷ್ಣಾತರಾಗಿ, ಕಾಶ್ಮೀರ ಶೈವಸಿದ್ಧಾಂತವನ್ನು ಆಳವಾಗಿ ಅಧ್ಯಯನಮಾಡಿ, ತ್ರಿಕಸಿದ್ಧಾಂತ ಪ್ರತಿಪಾದಕವಾದ ವ್ಯಾಖ್ಯಾನಚಾತುರ್ಯನಿಪುಣರಾಗಿ, ಆದಿಯಿಂದಲೂ ಆಗಮಜನತೆಯಪುರೋಭಿವೃದ್ಧಿಯಲ್ಲಿ ಆಸಕ್ತರಾಗಿರುವ ವಿದ್ಯಾರತ್ನ ಶ್ರೀ ಕೆ. ಗುರುದತ್, ಬಿ.ಎ., ಐ.ಎ.ಎಸ್. (Rtd.) ಅವರ ಅಮೋಘ ವಾದ ಅಗ್ರಲೇಖನದೊಡನೆ ಈ ಗ್ರಂಥವು ಪ್ರಕಟವಾಗುವಂತಾದುದು ಈ ಗ್ರಂಥಕ್ಕೆ ಭೂಷಣಪ್ರಾಯವಾಗಿದೆ; ಅಂತೆಯೇ ಆಗಮಾಭ್ಯಾಸಿಗಳಿಗೆ ನವ-ಚೈತನ್ಯವನ್ನು ಉಂಟುಮಾಡಿಕೊಡುವ ಉಪದೇಶದಂತಿರುವ ಅಮೋಘ ವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಶ್ರೀ ಕೆ. ಗುರುದತ್ ಅವರಿಗೆ ಹಾರ್ದಿಕ ಧನ್ಯವಾದಗಳನ್ನರ್ಪಿಸುವೆನು.

ಈ ಗ್ರಂಥದ ಸಂಗ್ರಹ, ಪರಿಷ್ಕರಣ, ಅನುವಾದ, ಮುದ್ರಣಾದಿ ಸಮಯಗಳಲ್ಲಿ ನನ್ನಿಂದಾಗಿರಬಹುದಾದ ಅನೇಕ ತೊಂದರೆಗಳನ್ನು ಸಹಿಸಿ ಉಪಕರಿಸಿದ ನನ್ನ ಮಾನ್ಯಮಿತ್ರರುಗಳಾದ ಶ್ರೀ ಎ. ಮಲ್ಲಿಕಾರ್ಜುನ ಶಾಸ್ತ್ರಿ, ಎಂ.ಎ. ಅವರಿಗೂ, ಶೃಂಗಗಿರಿ ವಿದ್ವಾನ್ ಕವಿ ಶ್ರೀನರಸಿಂಹಭಟ್ಟ ರವರಿಗೂ, ಬೆಂಗಳೂರು, ನಾಗಸಂದ್ರ ರಸ್ತೆಯಲ್ಲಿರುವ ಪ್ರಭಾ ಮುದ್ರಣ ಮಂದಿರದ ವ್ಯವಸ್ಥಾಪಕರಾದ ಶ್ರೀ ಡಿ. ಎಸ್. ಕೃಷ್ಣಾಚಾರ್, ಎಂ.ಎಸ್‌ಸಿ. ಅವರಿಗೂ ಚಿರಕೃತಜ್ಞನಾಗಿರುವೆನು.

ಶೈವದರ್ಶನಜಿಜ್ಞಾಸುಗಳಾದ ಸಮಸ್ತಆಸ್ತಿಕರೂ, ವಿಶೇಷವಾಗಿ ಶೈವಾಗಮದೀಕ್ಷಾಕುಟುಂಬಿಗಳಾದ ಅರ್ಚಕಾಗಮಿಕರೂ, ಶೈವಾಗಮ

ವಿದ್ಯಾರ್ಥಿಗಳೂ ಈ ಗ್ರಂಥವನ್ನು ಭಕ್ತಿ ಶ್ರದ್ಧೆಯಿಂದ ಅಭ್ಯಾಸಮಾಡಿ, ತತ್ವ ತ್ರಯಗಳನ್ನು ಮನನಮಾಡಿ, ತಮ್ಮನ್ನು ತಾವು ಚನ್ನಾಗಿ ತಿಳಿದು— "ಗರೀಯಸೀ ಭಕ್ತಿಕಲಾ ಹಿ ಶಾಂಕರೀ" ಎಂಬ ಸಂದೇಶದಂತೆ ಶೈವಭಕ್ತಿ ಸಂಪನ್ನರಾಗಿ, ಆತ್ಮೋದ್ಧಾರಹೇತುವಾದ ಶೈವದೀಕ್ಷಾಸಂಪನ್ನತೆಯಿಂದ ಜನ್ಮಸಾರ್ಥಕತೆಯನ್ನು ಪಡೆಯುವಂತಾದರೆ ಈ ಗ್ರಂಥದ ಪ್ರಕಟಣೆಗಾಗಿ ಪಟ್ಟ ನನ್ನ ಶ್ರಮವು ಸಾರ್ಥಕವಾದಂತೆ; ಎಂದು ನಂಬಿ ನನ್ನ ಉಪಾಸ್ಯ ದೇವನೂ ದಕ್ಷಿಣಕಾಶಿ ಶ್ರೀಗಜಾರಣ್ಯ (ತಲಕಾಡು) ಕ್ಷೇತ್ರಾಧೀಶ್ವರನೂ, ಭವರೋಗವೈದ್ಯನೂ, ಶ್ರೀಮನೋನ್ಮನೀಮಾನಸವಲ್ಲಭನೂ, ಆದ ಶ್ರೀವೈದ್ಯ ನಾಥೇಶ್ವರಸ್ವಾಮಿಯ ಶ್ರೀಚರಣಸನ್ನಿಧಿಯಲ್ಲಿ ಈ ಗ್ರಂಥರೂಪವಾದ ಭಕ್ತಿ ಕುಸುಮವನ್ನು ಅನನ್ಯಭಕ್ತಿಯಿಂದ ಸಮರ್ಪಿಸಿ ಕೃತಾರ್ಥನಾಗುವೆನು.

|| ಜಯಧರ್ಮ ||

ಇಂತು

ಆಗಮಿಕ ಕೃಷ್ಣದೀಕ್ಷಿತ

ಪ್ರಸ್ತಾವನೆ

ವೇದಾಂಶ್ಚ ಧರ್ಮಶಾಸ್ತ್ರಾಣಿ ಪುರಾಣಂ ಭಾರತಂ ತಥಾ ॥
ವೇದಾಂಗಾನ್ಯುಪವೇದಾಂಶ್ಚ ಕಾಮಿಕಾದ್ಯಾಗಮಾನಪಿ ॥

ಕಾಪಾಲಂ ಲಾಕುಲಂ ಚೈವ ತಯೋರ್ಭೇದಾ ದ್ವಿಜರ್ಷಭಾಃ ।
ತಥಾ ಪಾಶುಪತಂ ಸೋಮಂ ಭೈರವಪ್ರಮುಖಾಗಮಾನ್ ॥

ತೇಷಾಮೇವೋಪಭೇದಾಂಶ್ಚ ಶತಶೋಽಥ ಸಹಸ್ರಶಃ ।
ವಿಷ್ಣ್ವಾಗಮಾಂಸ್ತಥಾ ಬ್ರಾಹ್ಮಾ ಬುದ್ಧಾರ್ಹಾದ್ಯಾಗಮಾನಪಿ ॥

ಲೋಕಾಯತಂ ತರ್ಕಶಾಸ್ತ್ರಂ ಬಹುವಿಸ್ತರಸಂಯುತಂ ।
ಮೀಮಾಂಸಾಮತಿಗಂಭೀರಾಂ ಸಾಂಖ್ಯಯೋಗೌ ತಥೈವ ಚ ॥

ಅನೇಕಭೇದಭಿನ್ನಾನಿ ತಥಾ ಶಾಸ್ತ್ರಾಂತರಾಣಿ ಚ ।
ನಿರ್ಮಮೇ ಶಂಕರಃ ಸಾಕ್ಷಾತ್ಸರ್ವಜ್ಞಃ ಸಂಗ್ರಹೇಣ ತು ॥

ಪ್ರಸಾದಾದೇವ ರುದ್ರಸ್ಯ ಬ್ರಹ್ಮಾವಿಷ್ಣ್ವಾದಯಃ ಸುರಾಃ ।
ಸಿದ್ಧವಿದ್ಯಾಧರಾ ಯಕ್ಷಾ ರಾಕ್ಷಸಾದ್ಯಾಸ್ತಥೈವ ಚ ॥

ಮುನಯಶ್ಚ ಮನುಷ್ಯಾಶ್ಚ ಯಥಾಭಾಗ್ಯಂ ದ್ವಿಜೋತ್ತಮಾಃ ।
ತಾನ್ಯೇವ ವಿಸ್ತರೇಣೈವ ಸಂಗ್ರಹೇಣೈವ ವಾ ಪುನಃ ॥

ಕುರ್ವಂತಿ ; ತಾನಿ ಮಾನಾನಿ ಕಥಿತಾನಿ ಮನೀಷಿಭಿಃ ।
ಅಧಿಕಾರಿವಿಭೇದೇನ ; ನೈಕಸ್ಯೈವ ಸದಾ ದ್ವಿಜಾಃ ॥

ನಿರತಿಶಯಸಾರ್ವಜ್ಞ್ಯಮಹೋದಧಿಯಾದ ಶ್ರೀ ಪರಮೇಶ್ವರನೇ ಲೋಕದಲ್ಲಿ ಪ್ರಸಿದ್ಧಗಳಾಗಿರುವ ನಾನಾವಿಧಗಳಾದ ಎಲ್ಲಾ ಶಾಸ್ತ್ರಗಳಿಗೂ ಆದಿಕರ್ತೃವು. ಆದ್ದರಿಂದ ಈ ಎಲ್ಲಾ ಶಾಸ್ತ್ರಗಳೂ ಅನಾದಿಯಾದುವು. ಇವುಗಳು ಪರಸ್ಪರವಿರುದ್ಧಗಳಾಗಿ ತೋರಿಬರುತ್ತಿದ್ದರೂ, ಆಯಾ ಅಧಿಕಾರಿಗಳಿಗೆ ಮಾತ್ರ ಆಯಾ ಶಾಸ್ತ್ರಗಳು ಪ್ರಮಾಣಗಳೆಂದೂ ಎಲ್ಲಾ ಶಾಸ್ತ್ರಗಳಿಗೂ ಪರಂಪರೆಯಿಂದ ಶ್ರೀಪರಶಿವಪ್ರಾಪ್ತಿಯಲ್ಲಿಯೇ ಪರಮತಾತ್ಪರ್ಯವೆಂದೂ ವ್ಯವಸ್ಥೆಯಾಗಿರುವುದರಿಂದ, ಈ ವಿರೋಧವೇನೂ ವಾಸ್ತವವಾದುದಲ್ಲ. ಶ್ರೀಮದ್ಭಗವದ್ಗೀತೆಯಲ್ಲಿ ಉಪದೇಶಿಸಿರುವಂತೆ—ಸ್ವೇ ಸ್ವೇ ಕರ್ಮಣ್ಯಭಿರತಃ

ಸಂಸಿದ್ಧಿಂ ಲಭತೇ ನರಃ—ತನತನಗೆ ವಿಹಿತವಾದ ಮಾರ್ಗದಲ್ಲಿ ನಿರತನಾಗುವುದರಿಂದಲೇ ಮಾನವನು ಕ್ರಮೇಣ ಉತ್ತರೋತ್ತರ ಉತ್ಕೃಷ್ಟಸಾಧನೆಗೆ ಯೋಗ್ಯನಾಗುತ್ತ ಪರಮಶ್ರೇಯೋಭಾಗಿಯಾಗುವನು. ಆಯಾ ಜೀವರುಗಳ ಕರ್ಮ, ಜ್ಞಾನ ಸಂಸ್ಕಾರಗಳನ್ನು ಅನುಸರಿಸಿ ನಾನಾವಿಧಗಳಾದ ಶಾಸ್ತ್ರಗಳು ಪ್ರಚಾರವಾಗಿರುತ್ತವೆ. ಇವುಗಳಲ್ಲಿ ಎಲ್ಲರಿಗೂ ಒಂದೇ ಮಾರ್ಗವೆಂದಾಗಲಿ, ಯಾರಿಗೆ ಯಾವ ಮಾರ್ಗವಾದರೂ ಆಗಲಿ ಎಂದಾಗಲಿ ಸಮಂಜಸವಾದುದಲ್ಲ; ಇದಲ್ಲದೇ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"-ಎಂಬ ಗೀತಾವಚನದಂತೆ ಸ್ವಧರ್ಮದ ತ್ಯಾಗವೂ ಪರಧರ್ಮದ ಸೇವೆಯೂ ಇಹಪರಗಳಲ್ಲಿ ಹಾನಿಕರಗಳೆಂದು ತಿಳಿದುಬರುತ್ತದೆ. ಆದುದರಿಂದ ಆಯಾಮಾರ್ಗಗಳಲ್ಲಿ ಅಧಿಕಾರಿಗಳಾದವರು ತಮ್ಮ ತಮ್ಮ ಧರ್ಮಗಳನ್ನು ಯಥಾವತ್ತಾಗಿ ತಿಳಿದುಕೊಂಡು ಅವುಗಳಲ್ಲಿ ನಿರತರಾಗುವುದು ಶ್ರೇಯಸ್ಕರವು.

ಶಾಸ್ತ್ರಾರ್ಥವು ಮಹಾಸಮುದ್ರದಂತೆ ಅಗಾಧವೂ ದುಸ್ತರವೂ ಪರಮ ಗಂಭೀರವೂ ಆದುದು. ಹಗಲಿರಳುಗಳಂತೆ ಅನಾದ್ಯನಂತವಾಗಿ ನಡೆಯುತ್ತಿರುವ ಜಗತ್ತಿನ ಸೃಷ್ಟಿಪ್ರಲಯಗಳಲ್ಲಿ, ಪ್ರತಿಸೃಷ್ಟಿಯಲ್ಲಿಯೂ ಜ್ಞಾನನಿಧಿಯೂ ದಯಾಮಯನೂ ಆದ ಪರಮೇಶ್ವರನು (ಯೋ ಬ್ರಹ್ಮಾಣಂ ವಿದಧಾತಿ- ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ||) ಶ್ರೀಹಿರಣ್ಯಗರ್ಭನನ್ನು ಮೊದಲು ಸೃಷ್ಟಿಮಾಡಿ, ಜಗತ್ತಿನ ಶ್ರೇಯಸ್ಸಿಗೆ ಆವಶ್ಯಕವಾದ ಈ ಶಾಸ್ತ್ರಗಳನ್ನು ಅರ್ಥವತ್ತಾಗಿ ಉಪದೇಶಮಾಡುವನು. ಅನಂತರ ಗುರುಶಿಷ್ಯ ಪರಂಪರೆಯಿಂದ ಶಾಸ್ತ್ರಗಳೂ ಅವುಗಳ ಅರ್ಥಗಳೂ ಲೋಕದಲ್ಲಿ ಪ್ರಚಾರವಾಗುತ್ತವೆ. ಇದನ್ನೇ ಅನಾದಿಸಂಪ್ರದಾಯವೆನ್ನುವರು. ಶಾಸ್ತ್ರವನ್ನೂ ಇದರ ಅರ್ಥವನ್ನೂ ಸಹ ಈ ಅನಾದಿಪರಂಪರೆಯಿಂದ ಬಂದಿರುವಂತೆಯೇ ತಿಳಿಯಬೇಕು. ಈ ಕಾರಣದಿಂದಲೇ ವಿದ್ಯೆಯನ್ನು ಗುರುಮೂಲಕವಾಗಿಯೇ ಪಡೆಯಬೇಕೆಂಬ ನಿಯಮವು ಇರುತ್ತದೆ.*

ಈ ಶಾಸ್ತ್ರಮಹಾಸಮುದ್ರದಲ್ಲಿ ಶ್ರೀಶೈವಸಿದ್ಧಾಂತವೆಂಬುದೂ ಒಂದು ರತ್ನವು. ಶಾಸ್ತ್ರಗಳಲ್ಲಿ ತಮತಮಗೆ ಬೇಕಾಗುವ ಪಾರಿಭಾಷಿಕ ಶಬ್ದಗಳನ್ನು

---

* ಗುರುದ್ವಾರೈವ ವಿದ್ಯೇಯಂ ಆಚಾರ್ಯಾದ್ಧೇತಿ ನಃ ಶ್ರುತಿಃ ||

ವಿಶೇಷವಾಗಿ ವ್ಯವಹರಿಸಿರುತ್ತದೆ. ಪಾರಿಭಾಷಿಕಶಬ್ದವೆಂದರೆ ಆಯಾಶಾಸ್ತ್ರಗಳ ಅರ್ಥಗಳನ್ನು ಸೌಕರ್ಯದಿಂದ ಹೇಳುವುದಕ್ಕಾಗಿ ಕಲ್ಪಿಸಿಕೊಂಡಿರುವ ಸಂಕೇತಶಬ್ದಗಳು. ಈ ಶಬ್ದಗಳ ಅರ್ಥವನ್ನು ತಿಳಿಯದೆ ಆಯಾ ಶಾಸ್ತ್ರಗಳನ್ನು ತಿಳಿಯುವುದಕ್ಕೆ ಆಗುವುದಿಲ್ಲ. ಒಂದೇ ಶಬ್ದವು ಬೇರೆ ಬೇರೆ ಶಾಸ್ತ್ರಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಹೇಳತಕ್ಕವುಗಳಾಗಿರುತ್ತವೆ. ಆದುದರಿಂದ ಯಾವ ಶಾಸ್ತ್ರವನ್ನು ತಿಳಿಯಬೇಕಾದರೂ ಆ ಶಾಸ್ತ್ರದಲ್ಲಿ ಉಪಯೋಗಿಸಿರುವ ಶಬ್ದಗಳ ಅರ್ಥವೇನೆಂಬುದನ್ನು ಮೊದಲು ತಿಳಿಯುವುದು ಅತ್ಯವಶ್ಯಕವು. ಒಂದು ಶಾಸ್ತ್ರದಲ್ಲಿ ಸಾಂಕೇತಿತವಾಗಿರುವ ಒಂದು ಶಬ್ದದ ಅರ್ಥವನ್ನು ಇನ್ನೊಂದು ಶಾಸ್ತ್ರದಲ್ಲಿನ ಅದೇ ಶಬ್ದಕ್ಕೆ ಅನ್ವಯಿಸುವುದು ತಪ್ಪಾಗುವುದು.

ಹೀಗಿರುವುದರಿಂದ ಪ್ರಕೃತದಲ್ಲಿ ಶ್ರೀಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಧಿಕಾರಿಗಳಿಗೆ ಈ ಶಾಸ್ತ್ರದಲ್ಲಿ ಪರಿಚಯವುಂಟಾಗಲು ಬೇಕಾದ ಪಾರಿಭಾಷಿಕಪದಾರ್ಥಗಳನ್ನು ತಿಳಿಸುವುದಕ್ಕಾಗಿ, ಶೈವಸಿದ್ಧಾಂತದಲ್ಲಿ ಪರಮನಿಷ್ಣಾತರಾದ ಶ್ರೀ ಕವಿರಾಜಶೇಖರಸೂರ್ಯಭಟ್ಟಾರಕರೆಂಬ ಮಹಾಶಯರು ಶ್ರೀಶೈವಸಿದ್ಧಾಂತಪರಿಭಾಷೆಯೆಂಬ ಗ್ರಂಥರತ್ನವನ್ನು ಶ್ರೀಗೀರ್ವಾಣವಾಣಿಯಲ್ಲಿ ರಚಿಸಿದ್ದಾರೆ. ಈ ಗ್ರಂಥದ ಅಧ್ಯಯನವು ಶೈವಸಿದ್ಧಾಂತಶಾಸ್ತ್ರವನ್ನು ತಿಳಿಯುವುದಕ್ಕೆ ಅತ್ಯವಶ್ಯಕವೆನ್ನುವುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲವಷ್ಟೆ.

ಗೀರ್ವಾಣವಾಣೀಪ್ರಚಾರವೇ ಶಿಥಿಲಪ್ರಾಯವಾಗುತ್ತಿರುವ ಈ ಕಾಲದಲ್ಲಿ ಶಾಸ್ತ್ರಾಧ್ಯಯನವು ಕ್ಷೀಣಿಸುತ್ತಿರುವುದು ಸಹಜವಾಗಿದೆ. ಸಾಂಪ್ರದಾಯಿಕವಾದ ಪಾಠಪ್ರವಚನಗಳಂತೂ ನಾಮಾವಶೇಷಗಳಾಗಿವೆ. ಇದಲ್ಲದೆ, ಪರಮಗಂಭೀರವಾದ ದೇವವಾಣಿಯ ಅರ್ಥವಿಶೇಷಗಳನ್ನು, ಇತರ ಮಾನವಭಾಷೆಗಳು ವ್ಯಕ್ತಮಾಡುವ ಸಾಮರ್ಥ್ಯವಿಲ್ಲದವುಗಳಾಗಿವೆ. ಆದರೂ "ಕುರುಡುಗಣ್ಣಿಗಿಂತ ಮೆಳ್ಳುಗಣ್ಣು ಮೇಲೆಂಬ" ಲೋಕಪ್ರವಾದವನ್ನು ಅನುಸರಿಸಿ, ದುರೂಹವಾದ ಶ್ರೀ ಶೈವಸಿದ್ಧಾಂತಪರಿಭಾಷೆಯೆಂಬ ಈ ಶೈವಪ್ರಕರಣಗ್ರಂಥವನ್ನು ಕರ್ಣಾಟಭಾಷೆಯಲ್ಲಿ ಅನುವಾದಮಾಡಲು ಉದ್ಯುಕ್ತನಾಗಿದ್ದೇನೆ. ಮೂಲಗ್ರಂಥದ ಮತ್ತು ಶಾಸ್ತ್ರಗಳ ಘನತೆಯು

ದಿಙ್ಮಾತ್ರದಿಂದಲಾದರೂ ಜನಗಳಿಗೆ ತಿಳಿದುಬರಲು ಇದು ಉಪಯುಕ್ತವಾದೀತೆಂದು ನಂಬಿದ್ದೇನೆ. ಮೊದಲೇ ತಿಳಿಸಿರುವಂತೆ ಯಾವ ವಿದ್ಯೆಯಾದರೂ ಗುರುಮೂಲಕವಾಗಿಯೇ ಲಭಿಸತಕ್ಕದ್ದೇ ಹೊರತು, ಕೇವಲ ಪಾಂಡಿತ್ಯಕ್ಕಾಗಲಿ ಬುದ್ಧಿಶಕ್ತಿಗಾಗಲಿ ನಿಲುಕುವುದಲ್ಲ; ಅದರಿಂದ ಉಪಯೋಗವಾಗುವುದಕ್ಕೆ ಬದಲಾಗಿ ವಿಶೇಷಹಾನಿಯೇ ಪ್ರಾಪ್ತವಾಗುತ್ತದೆಂದು ಇನ್ನೊಮ್ಮೆ ಎಚ್ಚರಿಸಿ ಹೇಳಬೇಕಾಗಿದೆ. ಸಾಂಪ್ರದಾಯಿಕವಾದ ವಿದ್ಯೆಯನ್ನು ನಿರಾಕರಿಸಿದ್ದರಿಂದಲೇ ಆಧುನಿಕಪ್ರಪಂಚವು ದಿಕ್ಕುಕಾಣದ ಅಶಾಂತಿಯಲ್ಲಿ ಮುಳುಗಿರುವುದು. ಈ ನನ್ನ ಪ್ರಯತ್ನವು ಸಂಸ್ಕೃತ ಭಾಷೆಯ ಮತ್ತು ಶಾಸ್ತ್ರಗಳ ಮಾಹಾತ್ಮ್ಯೆಯ ಲೇಶದಲ್ಲಿ ಯಾರಿಗಾದರೂ ಶ್ರದ್ಧೆಯನ್ನು ಉಂಟುಮಾಡಿದರೆ ಅದೇ ಸಾರ್ಥಕ್ಯವೆಂದು ಭಾವಿಸುತ್ತೇನೆ.

ಈ ಅನುವಾದವನ್ನು ಬರೆಯುವುದಕ್ಕೆ ಪ್ರೇರಕರು ಆಗಮರತ್ನ ಮುಂತಾದ ಬಿರುದಾಂಕಿತರಾದ ಬ್ರಹ್ಮಶ್ರೀ ಆಗಮಿಕ ಕೃಷ್ಣದೀಕ್ಷಿತರು. ಇವರು ಮೈಸೂರು ಸರ್ಕಾರದ ಮುಜರಾಯಿ ಇಲಾಖೆಯ ಪ್ರಧಾನ ಆಗಮ ಪಂಡಿತಪದವಿಯನ್ನಲಂಕರಿಸಿದ್ದಾರೆ. ಮೈಸೂರುದೇಶದಲ್ಲಿರುವ ಆಗಮ ಪ್ರಧಾನಗಳಾದ ಅನೇಕ ದೇವಾಲಯಗಳಲ್ಲಿ ಅರ್ಚನಾದಿಕಾರ್ಯಗಳಲ್ಲಿ ನಿಯುಕ್ತರಾಗಿರುವವರ ಉಪಯೋಗಕ್ಕಾಗಿ ಈ ಪರಿಭಾಷೆಯನ್ನು ಕರ್ಣಾಟಭಾಷೆಯಲ್ಲಿ ಅನುವಾದ ಮಾಡಬೇಕೆಂದು ಸೂಚಿಸಿದ್ದರಿಂದ ಯಥಾಮತಿ ಇದನ್ನು ಬರೆದಿರುತ್ತೇನೆ. ಇದರಲ್ಲಿನ ಗುಣದೋಷಗಳನ್ನು ಗುಣಗ್ರಾಹಿಗಳಾದ ಪ್ರಾಜ್ಞರು ವಿವೇಚಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ ವಿದ್ವದ್ವಿನೇಯಃ,

ಶೃಂಗಗಿರಿ ಕವಿ ನರಸಿಂಹಶರ್ಮಾ,

ಅದ್ವೈತಾಶ್ರಮ-ಬೆಂಗಳೂರು.

ಅನುಕ್ರಮಣಿಕಾ

ಉಪೋದ್ಘಾತಪರಿಚ್ಛೇದ

ಪುಟ

ಪ್ರಮಾಣಪರಿಚ್ಛೇದ

ಪ್ರತ್ಯಕ್ಷ ಪ್ರಮಾಣ

ಅನುಮಾನ ಪ್ರಮಾಣ

ಪುಟ

ಶಬ್ದ ಪ್ರಮಾಣ

ಪತಿಪರಿಚ್ಛೇದ

ಪಶುಪರಿಚ್ಛೇದ

ಪಾಶಪರಿಚ್ಛೇದ

ವಿನಿಯೋಗಪರಿಚ್ಛೇದ



ಶ್ರೀ ಶೈವಸಿದ್ಧಾಂತಪರಿಭಾಷಾ

ಶ್ರೀಕವಿರಾಜಶೇಖರಸೂರ್ಯಭಟ್ಟಾರಕವಿರಚಿತಾ

ಶ್ರೀಶೈವಸಿದ್ಧಾಂತಪರಿಭಾಷಾ

ಉಪೋದ್ಘಾತಪರಿಚ್ಛೇದ

೧. ಪರಮಪವಿತ್ರವಾದ ಚ್ಯುತಪುರೀಕ್ಷೇತ್ರವನ್ನೂ, ಅಲ್ಲಿ ವಿರಾಜಿಸುತ್ತಿರುವ ನಾಗಸರೋವರವೆಂಬ ತೀರ್ಥವನ್ನೂ, ಅಲ್ಲಿ ಸನ್ನಿಹಿತನಾಗಿರುವ ಗಜಾಸುರನನ್ನು ಸಂಹರಿಸಿದ ಶ್ರೀಕೃತ್ತಿವಾಸಪರಶಿವನನ್ನೂ, ಮತ್ತು ಶ್ರೀ ಬಾಲಾಂಕುರಾದೇವಿಯನ್ನೂ ಭಕ್ತಿಯಿಂದ ನಮಸ್ಕರಿಸುತ್ತೇನೆ.

೨. ಪರಮಜ್ಯೋತಿಃಸ್ವರೂಪನಾದ ಪರಶಿವನ ಸಾನ್ನಿಧ್ಯವು ಎಲ್ಲರಿಗೂ ಯಾವಾಗಲೂ, ಎಲ್ಲವಿಧದಿಂದಲೂ ಸರ್ವಾರ್ಥಗಳಿಗೂ ಸಾಧನವಾದುದು; ಇಂಥ ಪರಜ್ಯೋತಿಃಸ್ವರೂಪನಾದ ಶ್ರೀಪರಶಿವನಿಗೆ ನಮಸ್ಕಾರವು.

೩. ಶೈವದೀಕ್ಷೆಯನ್ನು ಹೊಂದಿದ ಅಧಿಕಾರಿಪುರುಷರಿಗೆ ಅನಾಯಾಸವಾಗಿ ಶೈವದರ್ಶನದ ಪರಿಚಯವು ಉಂಟಾಗುವಂತೆ ಶೈವಸಿದ್ಧಾಂತಪರಿಭಾಷೆಯನ್ನು ಯುಕ್ತಿಯುಕ್ತವಾಗಿ ಸಂಗ್ರಹಿಸುತ್ತೇನೆ.

"ಅನಾದಿಮಲರಹಿತನಾದ್ದರಿಂದ ಸರ್ವಜ್ಞನೂ ಸರ್ವಕರ್ತೃವೂ ಆದ ಶ್ರೀಶಿವನು, ಅನಾದಿಯಾದ ಮಲದಿಂದ ಸ್ವಸ್ವರೂಪವನ್ನು ಕಳೆದುಕೊಂಡಿರುವ ಜೀವರ ಪಾಶಸಮೂಹವನ್ನು ಕಳೆಯುವನು" ಎಂದು ಕಾಮಿಕಮಹಾತಂತ್ರದ ಮೂಲಸೂತ್ರವು. ಇದರ ಅರ್ಥವೇನೆಂದರೆ:—

"ಭಗವಂತನಾದ ಶ್ರೀಶಿವನು ಸ್ವಾಭಾವಿಕಪ್ರತಿಬಂಧಕವಾದ ಮಲವಿಲ್ಲದವನಾದುದರಿಂದ ಸಕಲವನ್ನೂ ಪ್ರತ್ಯಕ್ಷವಾಗಿಯೇ ತಿಳಿಯುತ್ತಾ ಸರ್ವಜ್ಞನಾಗಿಯೂ, ಸರ್ವಕ್ರಿಯಾಶಕ್ತಿಸಂಪನ್ನನಾಗಿಯೂ ಇರುತ್ತಾ 'ಪತಿ' ಯೆನಿಸಿರುವನು. ಜೀವರು ಅನಾದಿಯಾದ ಪಾಶದಿಂದ ಬದ್ಧರಾಗಿ, ವಿರುದ್ಧಸ್ವಭಾವವನ್ನು ಹೊಂದಿ 'ಪಶು' ಗಳೆನಿಸಿರುವರು. ಪತಿಯಾದ ಶ್ರೀಶಿವನು ಪಶುಗಳಾದ ಜೀವರುಗಳಲ್ಲಿ ದಯೆಯುಳ್ಳವನಾಗಿ, ಅವರಿಗೆ ಬಂಧಕಗಳಾಗಿರುವ

ಮಲ-ಕರ್ಮ-ಮಾಯಾ ಎಂದು ಮೂರು ವಿಧವಾದ ಪಾಶವನ್ನು ಕಳೆದು ತನ್ನ ಸಾನ್ನಿಧ್ಯವು ಅವರಲ್ಲಿ ಅಭಿವ್ಯಕ್ತವಾಗುವಂತೆ ಅನುಗ್ರಹಿಸುತ್ತಾನೆ"—ಎಂದು.

'ಪಶು' ವಾದ ಜೀವನಿಗೆ 'ಪತಿ' ಯ 'ಅನುಗ್ರಹ' ದಿಂದಲೇ ಮೋಕ್ಷವು ದೊರಕುವುದು ; ಜೀವರ ಚೈತನ್ಯವನ್ನು ಅನಾದಿಕಾಲದಿಂದಲೂ ಆವರಿಸಿ (ಮುಚ್ಚಿ) ಕೊಂಡಿರುವ ಮಲದ ಅಧಿಕಾರವು ಕಳೆಯುವವರೆಗೂ ಪತಿಯ ಅನುಗ್ರಹವು ಲಭಿಸುವುದಿಲ್ಲ. ಈ ವಿಷಯವು ಶ್ರೀಮನ್ಮೃಗೇಂದ್ರ-ಸಂಹಿತೆಯಲ್ಲಿ ಹೀಗೆ ಉಕ್ತವಾಗಿದೆ— "ತಮಃಶಕ್ತಿಯ ಅಧಿಕಾರವು ನಿವೃತ್ತವಾದ ಮೇಲೆಯೇ ಲೋಕಬಂಧುವಾದ ಶ್ರೀಶಿವನು ಜೀವನ ಜ್ಞಾನ-ಕ್ರಿಯಾಶಕ್ತಿಗಳು ಅಭಿವ್ಯಕ್ತವಾಗುವಂತೆ ಅನುಗ್ರಹಿಸುವನು"— ಎಂದು. ನೋಟಕ್ಕೆ ಅಡ್ಡಿಯಾಗಿರುವ ಕಣ್ಣಿನ ಪೊರೆಯನ್ನು ನೇತ್ರವೈದ್ಯನು ಕಳೆಯಬೇಕಾದರೆ, ಆ ಪೊರೆಯು ಒಂದು ಪರಿಪಾಕಕ್ಕೆ ಬಂದಿರಬೇಕು ; ಇದರಂತೆ ಜೀವನ ಸ್ವರೂಪಕ್ಕೆ ಆವರಣವಾಗಿರುವ ಮಲವನ್ನು ಈಶ್ವರನು ಕಳೆಯುವುದಕ್ಕೂ, ಈ ಮಲವು ಒಂದು ಪರಿಪಾಕಾವಸ್ಥೆಗೆ ಬಂದಿರಬೇಕು. ಒಂದು ವಸ್ತುವಿನಲ್ಲಿ ಪರಿಣಾಮವು ಬರಬೇಕಾದರೆ ಅದಕ್ಕೆ ಇನ್ನೊಂದರ ಸಂಬಂಧವು ಅವಶ್ಯವು. ನೇತ್ರವೈದ್ಯನು ಔಷಧಾದಿಗಳಿಂದ ಪೊರೆಗೆ ಪರಿಪಾಕವನ್ನು ಉಂಟುಮಾಡುವಂತೆ, ಶ್ರೀ ಶಿವನು ಜೀವರ ಮಲವು ಪರಿಪಾಕಕ್ಕೆ ಬರುವಂತೆ ಜೀವರಿಗೆ ಸಂಸಾರಸಂಬಂಧವನ್ನು ಉಂಟುಮಾಡಿದ್ದಾನೆ. "ಮಾಯಾಮಯವಾದ ಪದಾರ್ಥಗಳಿಂದ ಅನಾದಿಯಾದ ಕರ್ಮದ ಫಲವನ್ನು ಅನುಭವಿಸುವಿಕೆ" ಯೇ ಸಂಸಾರವೆನಿಸುತ್ತದೆ. ಜೀವರಿಗೆ ಸಂಸಾರವು ಸಂಭವಿಸುವುದಕ್ಕಾಗಿ ಶ್ರೀಶಿವನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ನಿಯಮನ, ತಿರೋಧಾನಗಳೆಂಬ ಪಂಚಕೃತ್ಯಗಳನ್ನು ನೆರವೇರಿಸುತ್ತಿರುವನು. ಹೀಗೆ ಪರಮಕರುಣಾಶಾಲಿಯಾದ ಶ್ರೀ ಪರಮೇಶ್ವರನನ್ನು ಸರ್ವರೂ ಉಪಾಸನೆ ಮಾಡಬೇಕು—ಎಂಬುದೇ ಶ್ರೀಗುರುಗಳ ಉಪದೇಶವು.

ಶ್ರೀಶಿವನ ಸಾಮ್ಯವು ಉಪಾಸಕನಲ್ಲಿಯೇ ಸಂಭವಿಸುತ್ತದೆ. ಉಪಾಸಕತ್ವವೆಂದರೆ— ದೀಕ್ಷೆಯನ್ನು ಪಡೆದು ಶುದ್ಧನಾಗಿ, ಶ್ರೀ ಶಿವನ ಪಂಚಕೃತ್ಯಗಳಿಗೆ ಅಧೀನವಾಗಿರುವಿಕೆಯು. ಇದಕ್ಕಾಗಿ ಸಾಧಕರು ಆಚಾರ್ಯತ್ವಸಿದ್ಧಿ

ಯನ್ನು ಸಂಪಾದಿಸಬೇಕು. ಇದೇ ಅಧಿಕಾರಸಂಪತ್ತು. ಈ ಅಧಿಕಾರವು ಜ್ಞಾನಮಾತ್ರದಿಂದಲೇ ಸಾಧ್ಯವಾದುದು. ಆದುದರಿಂದ ಸಾಧಕರು ಶ್ರೀಮತ್ಸಿದ್ಧಾಂತ-ಶಾಸ್ತ್ರವನ್ನು ಆಚಾರ್ಯರ ಮುಖದಿಂದ ಅಧ್ಯಯನಮಾಡಬೇಕು. ಪತಿ, ಪಶು ಮತ್ತು ಪಾಶವೆಂಬ ಈ ಮೂರು ಪದಾರ್ಥಗಳನ್ನು ಅವುಗಳ ವಿನಿಯೋಗಸಹಿತವಾಗಿ ತಿಳಿಯುವುದೇ ಇಲ್ಲಿ 'ಜ್ಞಾನ' ವೆನಿಸುವುದು. ಈ ವಿಷಯವೆಲ್ಲವನ್ನೂ ಕಾಮಿಕಾದಿಸಿದ್ಧಾಂತಗಳಲ್ಲಿಯೇ ಹೇಳಿರುತ್ತದೆ. ಶ್ರೀಶೈವಸಿದ್ಧಾಂತವನ್ನು ರಚಿಸಿರುವ ಶ್ರೀಪರಶಿವನು ಅನಾದಿಪಾಶರಹಿತನಾಗಿ ಸರ್ವಜ್ಞನಾಗಿರುತ್ತಾನೆ. ಇತರ ಶಾಸ್ತ್ರಗಳನ್ನು ರಚಿಸಿರುವ ಮುನಿಗಳು ಪಾಶಬದ್ಧರಾದ್ದರಿಂದ ಸರ್ವಜ್ಞರಲ್ಲ. ಇದಲ್ಲದೆ, ಆ ಮುನಿಗಳ ಜ್ಞಾನವು ಶ್ರೀಪರ-ಶಿವನ ಅಧೀನವಾಗಿರುವುದು, ಮತ್ತು ಅಲ್ಪವೇ ಆಗಿರುತ್ತದೆ. ಒಂದು ವೇಳೆ ಆ ಮುನಿಗಳು ಪರಶಿವನ ಅನುಗ್ರಹದಿಂದ ಸರ್ವಜ್ಞತ್ವವನ್ನು ಹೊಂದಿದವರಾದರೆ, ಆಗ ಅವರ ಮತವು ಶ್ರೀಪರಶಿವನ ಮತವೇ ಆಗುತ್ತದೆ. ಆದಕಾರಣ ಸ್ವತಂತ್ರಪತಿಯಾದ ಶ್ರೀಪರಶಿವನು ರಚಿಸಿರುವ ಶೈವಶಾಸ್ತ್ರವೇ ಸರ್ವಾರ್ಥವನ್ನೂ ತಿಳಿಸಲು ಯೋಗ್ಯವಾಗಿರುವುದರಿಂದ ಸಾಧಕರು ಇದನ್ನೇ ಅಧ್ಯಯನಮಾಡತಕ್ಕದ್ದು. ಶೈವಸಿದ್ಧಾಂತವನ್ನು ಅಧ್ಯಯನಮಾಡದೇ ಇದ್ದರೆ, ಸರ್ವಜ್ಞತ್ವವೂ ಲಭಿಸದು ; ಮತ್ತು ಇತರರನ್ನು ಅನುಗ್ರಹಿಸುವ ಶಕ್ತಿಯೂ ಬರಲಾರದು.

ವೇದವು ನಿತ್ಯವಾದುದರಿಂದ ಸರ್ವಾರ್ಥಪ್ರಕಾಶಕವಾದುದು ; ಹೀಗಿರುವಾಗ ಈಶ್ವರರಚಿತವಾದ ಆಗಮವು ಸರ್ವಾರ್ಥಪ್ರಕಾಶಕವೆಂಬುದು ಹೇಗೆ ? ಅದು ಸರಿಯಲ್ಲ: ಆಗಮದಂತೆ ವೇದವನ್ನೂ ಈಶ್ವರನೇ ರಚಿಸಿದ್ದಾನೆ. ಆದ್ದರಿಂದಲೇ ವೇದವೂ ಸರ್ವಾರ್ಥಪ್ರಕಾಶಕವಾಗಿದೆ. ಹಾಗಾದರೆ ವೇದ ಮತ್ತು ಆಗಮಗಳೆರಡೂ ಸಮಾನಪ್ರಮಾಣವೆಂದಾಗುವುದರಿಂದ ಇವೆರಡರಲ್ಲಿ ಒಂದು ವ್ಯರ್ಥವೆನಿಸುವುದಿಲ್ಲವೆ ಎಂದು ಕೇಳಬಹುದು. ಆದರೂ ವೇದದ ಅರ್ಥವು ಅತ್ಯಂತ ರಹಸ್ಯವಾಗಿದೆ, ಮತ್ತು ನಾನಾವಾದಿಗಳ ವ್ಯಾಖ್ಯಾನಗಳಿಂದ ಸಂಶಯಾಸ್ಪದವಾಗಿದೆ. ಆಗಮವಾದರೋ ಆ ವೇದದ ಅರ್ಥವನ್ನೇ ಸ್ಪಷ್ಟವಾಗಿ ವಿವರಿಸುವುದರಿಂದ ಸಾಧಕರಿಗೆ ಅತ್ಯಂತ ಉಪಯುಕ್ತವಾಗಿದೆ.

ಆದುದರಿಂದಲೇ ಪ್ರಾಜ್ಞರು "ಶೈವಾಗಮವು ವೇದದ ಸಾರವು" ಎಂದು ಹೇಳಿರುತ್ತಾರೆ.

ಆದಕಾರಣ ಶೈವದೀಕ್ಷೆಯನ್ನು ಹೊಂದಿ, ಶೈವಸಿದ್ಧಾಂತವನ್ನು ಗುರುಮೂಲಕವಾಗಿ ಅಧ್ಯಯನಮಾಡಿ, ಆಚಾರ್ಯಪದವಿಯನ್ನು ಸಂಪಾದಿಸಬೇಕು.

ಎಲ್ಲ ಪಾಶಗಳೂ ಕಳೆದುಹೋದಮೇಲೆಯೇ ಆಚಾರ್ಯತ್ವವು ಸಂಭವಿಸುವುದರಿಂದ, ಆಚಾರ್ಯಪದವಿಯನ್ನು ಬಂಧಕವೆಂದು ತಿಳಿಯಬಾರದು. ಆಚಾರ್ಯಸ್ಥಿತಿಯಲ್ಲಿ ಅಧಿಕಾರಮಲವೊಂದು ಇರುತ್ತದೆಯಾದರೂ ಇದು ಅವರ ಸರ್ವಜ್ಞತ್ವಕ್ಕೆ ವಿರೋಧಿಯಾಗಿರುವುದಿಲ್ಲ; ಈ ಕಾರಣದಿಂದಲೇ ಆಚಾರ್ಯತ್ವವನ್ನು 'ಅಪರಮೋಕ್ಷ' ವೆಂದು ಹೇಳುತ್ತಾರೆ. ಆಚಾರ್ಯರು ದೇಹವುಳ್ಳವರೇ ಆದರೂ ಇತರ ಜೀವರುಗಳಂತೆ ಪಶುಗಳೆನಿಸುವುದಿಲ್ಲ. ಏಕೆಂದರೆ, ಪಶುಗಳ ದೇಹವು ಮಾಯೆಯಿಂದ ಹುಟ್ಟಿ ಮೋಹಕವಾಗಿರುವುದು; ಆಚಾರ್ಯರ ದೇಹವಾದರೋ, ಬಿಂದುವಿನಿಂದ ಉತ್ಪನ್ನವಾಗಿ ಬೋಧಕವಾಗಿರುತ್ತದೆ.

ಆಚಾರ್ಯರು ಪತಿಯಾದ ಶ್ರೀಶಿವನ ಸಾಮ್ಯವನ್ನು ಹೊಂದಿರುವರು. ಜೀವರುಗಳನ್ನು ಅನುಗ್ರಹಿಸುವುದಕ್ಕೆ ಯೋಗ್ಯವಾದ ದೇಹವನ್ನು ಶ್ರೀ ಶಿವನು ತನ್ನ ಇಚ್ಛೆಯಿಂದಲೇ ಸ್ವೀಕರಿಸುವನು. ಈ ಶರೀರವು ಬಿಂದುವಿನಿಂದ ಉತ್ಪನ್ನವಾದುದು. ಇಂಥ ಬೈಂದವದೇಹವು ಕರ್ಮಪಾಶವನ್ನು ಕಳೆದುಕೊಂಡು, ಮಾಯೆಯನ್ನು ದಾಟಿ, ಶುದ್ಧನಾದ ಯಾವನೋ ಒಬ್ಬನಿಗೇ ಲಭಿಸುವುದು; ಇಂಥವನೇ ಆಚಾರ್ಯನು. ಈ ರೀತಿಯಲ್ಲಿ ಬೈಂದವ ಶರೀರವು ಈಶ್ವರನಿಗೂ ಆಚಾರ್ಯರಿಗೂ ಸಮವಾಗಿರುವುದು; ಪಶುಗಳಿಗೆ ಅನುಗ್ರಹಮಾಡುವಿಕೆಯೆಂಬ ಕಾರ್ಯವೂ ಇವರೀರ್ವರಿಗೂ ಸಮಾನವಾಗಿದೆ. ಹೀಗೆ ಶ್ರೀಶಿವ ಮತ್ತು ಆಚಾರ್ಯರಿಗೆ ಸಾಮ್ಯವು ಸ್ಪಷ್ಟವು. ಈ ಕಾರಣದಿಂದಲೇ "ಶಿವನೇ ಗುರುವು, ಗುರುವೇ ಶಿವನು"— ಎಂದು ಶಿವ-ಗುರುಗಳ ಅಭೇದವು ಲೋಕದಲ್ಲಿಯೂ ಪ್ರಸಿದ್ಧವಿದೆ.

ಮೇಲೆ ಹೇಳಿದಂತೆ ಆಚಾರ್ಯರಿಗೆ ಶಿವನೊಡನೆ ಸಾಮ್ಯವು ಇರುವುದಾದರೆ, "ಶಿವನು ಆಚಾರ್ಯರನ್ನು ಪ್ರೇರಿಸುತ್ತಾನೆ, ಆಚಾರ್ಯರು ಈಶ್ವರನಿಗೆ ಅಧೀನರು" ಎಂದು ಹೇಳಿರುವುದು ಹೇಗೆ ಸಂಗತವಾಗುವುದು? ಎಂದರೆ: ಆಚಾರ್ಯರು ಈಶ್ವರನ ಅಧೀನರೇ ಆದರೂ ಅವರು ಕಷ್ಟವನ್ನು ಅನುಭವಿಸುವಂತೆ ಪ್ರೇರಿತರಾಗುವುದಿಲ್ಲ; ಮತ್ತೇನೆಂದರೆ, ಶ್ರೀಶಿವನ ಶಕ್ತಿ-ಪಾತವು ಲಭಿಸಿ, ತುರೀಯದೀಕ್ಷೆಯನ್ನು ಹೊಂದಿರುವ ಆಚಾರ್ಯರನ್ನು ಶ್ರೀಶಿವನು ಶುದ್ಧವಾದ ಭೋಗಕ್ಕೆ ವಿರುದ್ಧವಾಗದ, ಪರೋಪಕಾರರೂಪವಾದ ಕರ್ಮಗಳಲ್ಲಿಯೇ ಪ್ರೇರಿಸುತ್ತಾನೆ. ಮತ್ತು ಈ ಕರ್ಮಗಳು ಆಚಾರ್ಯರಿಗೆ ಬಂಧಕಗಳೂ ಆಗುವುದಿಲ್ಲ. ಆಚಾರ್ಯತ್ವರೂಪವಾದ ಅಧಿಕಾರವು ಮುಗಿದ ಕೂಡಲೆ, ದೇಹಪಾತವಾಗಲಾಗಿ, ಆಚಾರ್ಯರಿಗೆ ಶ್ರೀಶಿವನ ಪೂರ್ಣಸಾಮ್ಯವು ಸಿದ್ಧಿಸುತ್ತದೆ. ಹೀಗೆ **ಆಚಾರ್ಯತ್ವವು ಅಪರಮೋಕ್ಷವೆಂದೇ ಸಿದ್ಧಾಂತವು.**

ಸಿದ್ಧಾಂತವನ್ನು ಶ್ರವಣಮಾಡುವ ಮೊದಲು ಇದಕ್ಕೆ ಅಧಿಕಾರವಾದ ಸಾಧಕತ್ವವನ್ನು ಸಂಪಾದಿಸಿಕೊಳ್ಳಬೇಕು. ತೀವ್ರಶಕ್ತಿಯ ಪಾತ(ಲಾಭ)ವು ಉಂಟಾಗಿ ಷಡಧ್ವಶುದ್ಧಿಯು ಲಭಿಸಿ, ಮೂರನೆಯ ದೀಕ್ಷೆಯನ್ನು ಹೊಂದಿದವನೇ ಸಾಧಕನೆನಿಸುವನು: ಇಂಥವನೇ ಸಿದ್ಧಾಂತಜ್ಞಾನವನ್ನು ಸಾಧಿಸಲು ಸಮರ್ಥನಾಗುವನು.

ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯದ ಫಲವಾಗಿ ಯಾವಾಗಲೋ ಯಾವನೋ ಒಬ್ಬನಿಗೆ ಯಾವ ಆಶ್ರಮದಲ್ಲಿರುವಾಗಲೋ ಯಾವುದೋ ಭಾಗ್ಯೋದಯದಿಂದ ಆವರಣರೂಪವಾದ ಮಲವು ಪರಿಪಾಕಕ್ಕೆ ಬರುತ್ತದೆ; ಆಗ ಅಂಥವನಿಗೆ ಮಂದ-ಮಂದತರ ಮೊದಲಾದ ಶಕ್ತಿಪಾತಕ್ಕೆ ತಕ್ಕಂತೆ, ಶಿವಭಕ್ತಿ, ಶ್ರದ್ಧೆ ಮೊದಲಾದುವುಗಳನ್ನು ಉಂಟುಮಾಡುವಂಥ, ಹಿಂದಿನ ಕರ್ಮಗಳನ್ನೆಲ್ಲಾ ಪರಿಪಾಕಕ್ಕೆ ತರುವಂಥ, ಗುರುಶುಶ್ರೂಷೆ, ಗಣೇಶ ಮತ್ತು ಸೂರ್ಯಾದಿಪೂಜೆಗಳು ಸಿದ್ಧಿಸುವುದಕ್ಕಾಗಿ ಯಥಾವಿಧಿಯಾಗಿ ಶಿರಸ್ಸಿನ ಮೇಲೆ ಶಿವಹಸ್ತಾರ್ಪಣರೂಪವಾದ ಸಮಯವೆಂಬ ದೀಕ್ಷೆಯು ಉಂಟಾಗುವುದು; ಇದೇ ಮೊದಲನೆಯ ದೀಕ್ಷೆಯು.

ಅನಂತರ ಅಧಿಕಮಲವು ಪಕ್ವವಾಗಲಾಗಿ, ಮಂದಶಕ್ತಿಪಾತದಿಂದ ಶಿವನಲ್ಲಿ ಅತಿಶಯವಾದ ಭಕ್ತಿಶ್ರದ್ಧೆಯುಂಟಾಗಿ, ಕರ್ಮಾದಿಪಾಶಗಳು ಕ್ಷೀಣಿಸಿ, ಮಂತ್ರಗ್ರಹಣ–ಶಿವಲಿಂಗಾರ್ಚನೆ ಮೊದಲಾದವುಗಳಿಗೆ ಯೋಗ್ಯತೆಯು ದೊರಕುವಂಥ, ಹಿಂದಿನ ಜನ್ಮವು ನಿವೃತ್ತವಾಗಿ, ವಾಗೀಶ್ವರೀಗರ್ಭದಿಂದ ಜನಿಸುವಿಕೆಯೆಂಬ 'ವಿಶೇಷ' ದೀಕ್ಷೆಯು ಲಭಿಸುವುದು. ಇದು ಎರಡನೆಯದು.

ಈ ವಿಶೇಷದೀಕ್ಷೆಯು ಲಭಿಸಲಾಗಿ ಮಲವೆಲ್ಲಾ ಪ್ರಾಯಃ ಕ್ಷೀಣಿಸಿ, ಸ್ವಲ್ಪಮಾತ್ರ ಉಳಿದಿರುವುದು. ಆಗ ತೀವ್ರಶಕ್ತಿಪಾತವು ಉಂಟಾಗಿ, ಮಲ ಮುಂತಾದ ಪಾಶತ್ರಯವನ್ನು ಕತ್ತರಿಸುವಂಥ 'ನಿರ್ವಾಣ' ದೀಕ್ಷೆಯು ಪ್ರವರ್ತಿಸುತ್ತದೆ. ಇದು ಮೂರನೆಯದು. ಈ ಮೂರನೆಯ ದೀಕ್ಷೆಯನ್ನು ಪಡೆದವನೇ ಸಿದ್ಧಾಂತಜ್ಞಾನವನ್ನು ಸಾಧಿಸಲು ಸಮರ್ಥನಾಗುತ್ತಾನೆ. ಇಂಥವನಲ್ಲಿಯೇ ಪಶುತ್ವವು ಕಳೆದು ಶಿವತ್ವವು ಅಭಿವ್ಯಕ್ತವಾಗುವುದು.

ಮೊದಲನೆಯ 'ಸಮಯ' ದೀಕ್ಷೆಯನ್ನು ಮಾತ್ರ ಹೊಂದಿದವನಿಗೆ ಹಿಂದಿನ ಜಾತಿಯ ಸಂಬಂಧವು ಕಳೆದಿರುವುದಿಲ್ಲ. ಆದುದರಿಂದ ಅವನಿಗೆ ಪಶುತ್ವವು ಇರುವುದರಿಂದ ಸಿದ್ಧಾಂತಶ್ರವಣಕ್ಕೆ ಅಧಿಕಾರವಿರುವುದಿಲ್ಲ. 'ವಿಶೇಷ' ದೀಕ್ಷೆಯನ್ನು ಪಡೆದವನಿಗೆ ವಾಗೀಶ್ವರೀಗರ್ಭದಿಂದ ಜನ್ಮವುಂಟಾಗಿ ಹಿಂದಿನ ಜನ್ಮದ ಸಂಬಂಧವು ಕಳೆದಿರುವುದಾದರೂ, ಪಶುತ್ವವು ಪೂರ್ಣವಾಗಿ ನಿವೃತ್ತವಾಗಿರುವುದಿಲ್ಲವಾದುದರಿಂದ ಶಿವತ್ವಕ್ಕೆ ಸಾಮರ್ಥ್ಯವಿರುವುದಿಲ್ಲ. ಬ್ರಾಹ್ಮಣೀಗರ್ಭದಲ್ಲಿ ಹುಟ್ಟಿದ ಮಾತ್ರದಿಂದಲೇ ಬ್ರಾಹ್ಮಣ್ಯವು ಸಿದ್ಧವಾದರೂ, ವೇದಾಧ್ಯಯನ ಮುಂತಾದವುಗಳಿಗೆ ಬೇಕಾದ ಬ್ರಾಹ್ಮಣ್ಯಕ್ಕೆ ಎಂಟುವರ್ಷಗಳ ವಯಸ್ಸುಂಟಾಗಿ ಆಗ ಲಭಿಸುವ ಉಪನಯನಾದಿಸಂಸ್ಕಾರಗಳೂ ಕಾರಣವಾಗುತ್ತವೆ. ಇದರಂತೆಯೇ ವಾಗೀಶ್ವರೀಗರ್ಭದಿಂದ ಜನ್ಮವು ಲಭಿಸಿದರೂ, ಜ್ಞಾನಸಾಧನೆಗೆ ಬೇಕಾದ ಸಾಧಕತ್ವಕ್ಕೆ 'ನಿರ್ವಾಣ'ದೀಕ್ಷೆಯು ಕಾರಣವಾಗಿರುವುದು.

'ನಿರ್ವಾಣ'ದೀಕ್ಷೆಯಿಂದಲೇ ಸಾಧಕನ ಎಲ್ಲಾ ಪಾಶಗಳೂ ಕತ್ತರಿಸಿ ಹೋಗುವುವಾದರೂ, ಶಿವತ್ವವು ಅಭಿವ್ಯಕ್ತವಾಗುವುದಿಲ್ಲ. ಇದಕ್ಕಾಗಿ 'ಅಭಿಷೇಕ' ಸಂಸ್ಕಾರವನ್ನು ಹೊಂದಿ ಆಚಾರ್ಯತ್ವವನ್ನು ಸಂಪಾದಿಸಿ

ಕೊಳ್ಳಬೇಕು. ಶಿವಾರ್ಚನಾಸಹಿತವಾಗಿ ಸಿದ್ಧಾಂತವನ್ನು ಸೇವಿಸುವುದರಿಂದ 'ಅಭಿಷೇಕ' ಸಂಸ್ಕಾರವು ಲಭಿಸುತ್ತದೆ. ರೋಗಿಯಾದವನಿಗೆ ಪಥ್ಯಪೂರ್ವಕವಾದ ಔಷಧಸೇವನೆ ಮಾಡುತ್ತಾ ಅನಂತರ ಉಂಟಾಗುವ ಸ್ನಾನವೇ ಆರೋಗ್ಯಪ್ರಾಪ್ತಿಗೆ ಸಾಧನವಾಗುವಂತೆ, 'ಅಭಿಷೇಕ'ವು ಪರನಿರ್ವಾಣಕ್ಕೆ ದ್ವಾರವೂ, ಅಪರನಿರ್ವಾಣರೂಪವೂ ಆದ ಆಚಾರ್ಯತ್ವಕ್ಕೆ ಸಾಧನವಾಗಿರುತ್ತದೆ.

ಶ್ರೀ ಶೈವಸಿದ್ಧಾಂತಪರಿಭಾಷೆಯಲ್ಲಿ ಉಪೋದ್ಘಾತ ಪರಿಚ್ಛೇದವು ಸಮಾಪ್ತವು.

ಪ್ರಮಾಣಪರಿಚ್ಛೇದ

ಶ್ರೀಶೈವಸಿದ್ಧಾಂತದಲ್ಲಿ ಜ್ಞಾನಪಾದ, ಕ್ರಿಯಾಪಾದ, ಯೋಗಪಾದ, ಚರ್ಯಾಪಾದ ಎಂದು ನಾಲ್ಕು ಪಾದ (ಭಾಗ)ಗಳಿವೆ. ಮೊದಲನೆಯ ಜ್ಞಾನಪಾದದಲ್ಲಿ ಪದಾರ್ಥಗಳನ್ನು ಹೇಳಿದೆ. ಇತರ ಮೂರು ಪಾದಗಳಲ್ಲಿ ಈ ಪದಾರ್ಥಗಳ ವಿನಿಯೋಗಗಳನ್ನೂ ಫಲಗಳನ್ನೂ ನಿರೂಪಿಸಿದೆ. ಪಶು, ಪತಿ ಮತ್ತು ಪಾಶ ಎಂದು ಮೂರೇ ಪದಾರ್ಥಗಳೆಂದು ಶೈವಸಿದ್ಧಾಂತವು; ಇತರ ಮತದವರು ಅಂಗೀಕರಿಸಿರುವ ಪದಾರ್ಥಗಳೆಲ್ಲಾ ಈ ಮೂರರಲ್ಲಿಯೇ ಸೇರಿವೆ, ಬೇರೆಯಲ್ಲ.

ಈ ಪದಾರ್ಥಗಳ ವಿಷಯದಲ್ಲಿ ಶೈವಸಿದ್ಧಾಂತವೇ ಪ್ರಮಾಣವು. ಶೈವ ಸಿದ್ಧಾಂತದಲ್ಲಿ ಪ್ರತ್ಯಕ್ಷ, ಅನುಮಾನ, ಶಬ್ದ ಎಂದು ಮೂರು ಪ್ರಮಾಣ ಗಳನ್ನು ಒಪ್ಪುತ್ತಾರೆ. ಆದರೂ ಪತಿ, ಪಶು, ಪಾಶ ಈ ಪದಾರ್ಥಗಳ ವಿಷಯದಲ್ಲಿ ಶಬ್ದವೊಂದೇ ಪ್ರಮಾಣವು. ಇತರ ಪ್ರಮಾಣಗಳಿಗೂ ಶಬ್ದವೇ ಮೂಲವಾಗಿರುತ್ತಾ ಶಬ್ದವು ಪ್ರಧಾನಪ್ರಮಾಣವೆನಿಸಿರುತ್ತದೆ. ಶ್ರೀಕಂಠಾ-ಚಾರ್ಯರೂ ಇದೇ ಅಭಿಪ್ರಾಯವನ್ನೇ ಹೀಗೆ ಉಪದೇಶಿಸಿರುತ್ತಾರೆ.—

"ಆಪ್ತವಾಕ್ಯದಿಂದ ಈ ಸಿದ್ಧಾಂತವನ್ನು ಶ್ರವಣಮಾಡಬೇಕು; ಯುಕ್ತಿಗಳಿಂದ ಮನನಮಾಡಬೇಕು; ಯೋಗಮಾರ್ಗದಿಂದ ಧ್ಯಾನಿಸ ಬೇಕು: ಶಕ್ತಿಪಾತದಿಂದ ಆತ್ಮಾಭಿವ್ಯಕ್ತಿಯನ್ನು ಹೊಂದುವುದಕ್ಕೆ ಮಾಡ ಬೇಕಾದದ್ದು ಇದನ್ನೇ"— ಎಂದು.

ಇಲ್ಲಿ ಸಿದ್ಧಾಂತವನ್ನೇ ಆಪ್ತವಾಕ್ಯವೆಂದು ಹೇಳಿರುತ್ತಾರೆ. ಯಥಾರ್ಥ ವಾದುದನ್ನು ಉಪದೇಶಿಸುವವನೇ ಆಪ್ತನು. ನಿತ್ಯನಾದ ಪರಮೇಶ್ವರನೂ, ಅವನ ಅನುಗ್ರಹಕ್ಕೆ ಪಾತ್ರರಾದ ಆಚಾರ್ಯಪುರುಷರೂ ಇಲ್ಲಿ ಆಪ್ತರಾಗಿ ದ್ದಾರೆ. ಯೋಗ್ಯ (ಸಮಂಜಸ)ವಾದ ಅರ್ಥವಿಶೇಷವನ್ನು ತಿಳಿಸುವ ಶಕ್ತಿ ಯನ್ನುಳ್ಳ ಪದಗಳ ಸಮೂಹವು ವಾಕ್ಯವೆನಿಸುವುದು. 'ಅನಾದಿಮಲರಹಿತ ನಾಗಿ' ಎಂದು ಮೇಲೆ ಹೇಳಿದ ಮೂಲಸೂತ್ರವು ಇಂಥಾ ವಾಕ್ಯವಾಗಿದೆ. ಪರಮ-ಆಪ್ತನಾದ ಪರಮಾತ್ಮನು ಇಂಥ ವಾಕ್ಯಗಳಿಂದ ಕಾಮಿಕಾದಿ-

ಆಗಮಗಳನ್ನು ರಚಿಸಿದ್ದಾನಾದ್ದರಿಂದ ಈ ಆಗಮಗಳೇ ಪ್ರಮಾಣಗಳಾಗಿವೆ. ಶೈವಸಿದ್ಧಾಂತಕ್ಕೆ ಪೂರ್ವಪಕ್ಷಗಳಾದ ಇತರ ಶಾಸ್ತ್ರಗಳನ್ನೂ ಸಿದ್ಧಾಂತಗಳೆಂದು ಹೇಳುತ್ತಾರಾದರೂ, ಗೋ-ಪಂಕಜಾದಿಪದಗಳಂತೆ ಯೋಗರೂಢಿಯಿಂದ ಶೈವಸಿದ್ಧಾಂತವೇ ಮುಖ್ಯವಾದ ಸಿದ್ಧಾಂತವು. ಶಿವತೇಜಸ್ಸಿನಿಂದ ಬೆಳಗುವ ಜಿತೇಂದ್ರಿಯರಾದ ಮಹಾತ್ಮರು ಈ ಸಿದ್ಧಾಂತವನ್ನೇ ಶ್ರವಣಮಾಡುತ್ತಾರೆ.

ಸಿದ್ಧಾಂತದ ಶ್ರವಣಮಾತ್ರದಿಂದಲೇ ಪುರುಷಾರ್ಥವು ಸಿದ್ಧಿಸುವುದಿಲ್ಲ. ಶ್ರವಣಮಾಡಿದ ಅರ್ಥವನ್ನು ಧ್ಯಾನಾದಿಗಳಿಂದ ಅನುಭವಕ್ಕೆ ತಂದುಕೊಳ್ಳಬೇಕು. ದೃಢವಾದ ಧ್ಯಾನವು ಸಿದ್ಧಿಸಬೇಕಾದರೆ, ಶ್ರವಣಮಾಡಿದ ಪದಾರ್ಥಗಳನ್ನು ಯುಕ್ತಿಗಳಿಂದ ಚಿಂತನೆ ಮಾಡತಕ್ಕದ್ದು; ಇದೇ 'ಮನನವು'. ಇದನ್ನೇ 'ಲಿಂಗಪರಾಮರ್ಶ'ವೆನ್ನುವರು. ಕಾಣಬರದಂತೆ ಮರೆಯಾಗಿರುವ ವಸ್ತುವನ್ನು ಅನುಭವಕ್ಕೆ ಬರುವಂತೆ ಯಾವುದು ಮಾಡುವುದೋ, ಅದೇ 'ಲಿಂಗ'ವೆನಿಸುತ್ತದೆ. ಮನೆಯ ಮೇಲ್ಭಾಗದಿಂದ ಹೊರಡುತ್ತಿರುವ ಧೂಮ (ಹೊಗೆ)ವು ಬೆಂಕಿಯು ಕಾಣಬರದಿದ್ದರೂ ಮನೆಯೊಳಗೆ ಬೆಂಕಿಯಿದೆಯೆಂಬುದನ್ನು ಅನುಭವಕ್ಕೆ ತಂದುಕೊಡುತ್ತದೆಯಲ್ಲವೆ; ಆದುದರಿಂದ ಬೆಂಕಿಗೆ ಧೂಮವು 'ಲಿಂಗ'ವಾಗಿರುತ್ತದೆ. ಲಿಂಗವಾದ ಧೂಮಕ್ಕೂ ಸಾಧ್ಯವಾದ ಬೆಂಕಿಗೂ ನಿಯತವಾದ (ಎಡಬಿಡದೇಇರುವ) ಸಾಹಚರ್ಯವಿರುವುದು; ಆದುದರಿಂದಲೇ ಲಿಂಗದಿಂದ ಸಾಧ್ಯವು ತಿಳಿದುಬರುವುದು. ಲಿಂಗಸಾಧ್ಯಗಳ ಈ ನಿಯತಸಾಹಚರ್ಯವೇ 'ಪರಾಮರ್ಶವು'. ಯುಕ್ತಿಯಿಂದ ಇದು ಸಾಧಿಸಲ್ಪಡುತ್ತದೆ. ಹೇಗೆಂದರೆ—ಬೀದಿಯಲ್ಲಿರುವವನಿಗೆ "ಮನೆಯೊಳಗೆ ಬೆಂಕಿಯಿದೆ" ಎಂಬುದು "ಬೆಂಕಿಯಿಲ್ಲದೆ ಧೂಮವಿರಲಾರದು"—ಎಂಬ ಯುಕ್ತಿಯಿಂದಲೇ ತಿಳಿದುಬರುವುದು. ಈ ಲಿಂಗಪರಾಮರ್ಶವೇ ಮನನವು.

ಶ್ರವಣಕ್ಕೂ ಮನನಕ್ಕೂ ವಿಷಯವು ಒಂದೇ ಆದರೂ ಶ್ರವಣದ ಅನಂತರವೇ ಮನನವು ಸಂಭವಿಸುವುದರಿಂದ, ಶ್ರವಣ-ಮನನಗಳೆರಡೂ ಒಂದಲ್ಲ. ಆಚಾರ್ಯರ ವಾಕ್ಯದಲ್ಲಿ ಶ್ರದ್ಧೆಯಿದ್ದು ಆಗಮದ ಅರ್ಥವನ್ನು ತಿಳಿದಮೇಲೆಯೇ ಮನನವು ಸಂಭವಿಸುವುದರಿಂದ, ಮನನವು (ಅನುಮಾನವು) ಶಬ್ದಕ್ಕೆ ಅಧೀನವೆಂಬುದು ಸ್ಪಷ್ಟವು.

ಈ ಪ್ರಕಾರವಾಗಿ ಮೇಲೆ ಹೇಳಿದ ಶ್ರವಣಮನನಗಳೆಂಬ ಎರಡು ಪ್ರಮಾಣಗಳಿಂದ ಸಿದ್ಧವಾದ ಅರ್ಥದ ಸಾಕ್ಷಾತ್ಕಾರವಿಲ್ಲದಿದ್ದರೆ ಸಾಧಕನಿಗೆ ಎಂದಿಗೂ ನಿವೃತ್ತಿಯುಂಟಾಗುವುದಿಲ್ಲ. ಪರೋಕ್ಷಜ್ಞಾನವು ಇಷ್ಟಾರ್ಥವನ್ನುಂಟುಮಾಡಲಾರದು. ಆದಕಾರಣ ಹೀಗೆ ಶ್ರವಣಮಾಡಿ ಮನನ ಮಾಡಿದ ಅರ್ಥದ ಅಪರೋಕ್ಷಜ್ಞಾನವು ದೊರೆಯುವುದಕ್ಕಾಗಿ, ಪ್ರವಾಹದಂತೆ ಅಖಂಡವಾಗಿ ಚಿಂತನೆಮಾಡುವಿಕೆಯೆಂಬ ಧ್ಯಾನವು ಉಂಟಾಗುತ್ತದೆ. ಇಲ್ಲದಿದ್ದರೆ ಆ ಅರ್ಥದ ಸಂಬಂಧವುಂಟಾಗುವುದಿಲ್ಲ. ಹೀಗೆ ಧ್ಯಾನದ ಪರಿಪಾಕದಿಂದ ಲಭಿಸುವ ಸಾಕ್ಷಾತ್ತಾಗಿಯೇ ವಸ್ತುವನ್ನು ಕಾಣುವಿಕೆಯೇ ಪ್ರತ್ಯಕ್ಷವೆನಿಸುತ್ತದೆ. ಇಂಥ ಪ್ರತ್ಯಕ್ಷವು ಹಾಗೆ ಹೇಳಿದ ಶ್ರವಣಮನನಗಳೆಂಬ ಎರಡು ಪ್ರಮಾಣಗಳ ಅನಂತರವೇ ಉಂಟಾಗುವುದರಿಂದ, ಅವುಗಳಿಗೆ ಅಧೀನವೆಂದು ಸ್ಪಷ್ಟವೇ ಇದೆ.

ಈಗ ಈ ಮೂರು ಪ್ರಮಾಣಗಳ ಸಾಮಾನ್ಯ ಮತ್ತು ವಿಶೇಷಲಕ್ಷಣಗಳನ್ನು ತಿಳಿಸುತ್ತೇವೆ. ಪ್ರಮಾಮಾತ್ರಕ್ಕೆ ಸಂಬಂಧಿಸಿ, ಪ್ರಮೇಯವಾದ ವಿಷಯವನ್ನು ಪ್ರಕಾಶಪಡಿಸುವುದೇ ಪ್ರಮಾಣವು. ಇದು ದೀಕ್ಷೆಯಿಂದ ಕಾಲುಷ್ಯವೆಲ್ಲಾ ಹೋಗಲಾಡಿಸಲ್ಪಟ್ಟಿರುವ ಆತ್ಮಚೈತನ್ಯಶಕ್ತಿಯಲ್ಲಿಯೇ ಸಂಭವಿಸುವುದು. ಪಶ್ವಾತ್ಮಚೈತನ್ಯದಲ್ಲಿ ಅಲ್ಲ: ಪಶ್ವಾತ್ಮಚೈತನ್ಯವು ಮಾಯೆಯಿಂದ ಹುಟ್ಟಿರುವ ಕಲಾದಿಗಳಿಂದ ಅಭಿವ್ಯಕ್ತವಾಗಿರುವುದರಿಂದ ಎಲ್ಲವಿಧದಿಂದಲೂ ಅದು ಭ್ರಾಂತಿರೂಪವೇ ಆಗಿರುತ್ತದೆ. ಏಕೆಂದರೆ,— ಪ್ರಮಾ ಎಂದರೆ ಯಥಾಭೂತವಾಗಿ (ಎಂದರೆ ವಸ್ತುವು ಹೇಗಿದೆಯೋ ಹಾಗೆಯೇ) ವಸ್ತುವನ್ನು ತೋರಿಸುವಿಕೆಯು; ಸಂಶಯ ಅಥವಾ ವಿಪರೀತವಾದ ಜ್ಞಾನಕ್ಕೆ ಇಂಥ ಪ್ರಮಾತ್ವವು ಸಂಭವಿಸುವುದಿಲ್ಲ. ಅಂಥ ಪ್ರಮೆಗೆ ಆಶ್ರಯವಾಗಿರುವಿಕೆಯೇ ಪ್ರಮಾತೃತ್ವವು: ಪ್ರಮೆಗೆ ವಿಷಯವಾಗಿರುವಿಕೆಯೇ ಪ್ರಮೇಯತ್ವವು. ಈ ಕಾರಣದಿಂದ ಶುದ್ಧಾತ್ಮಚೈತನ್ಯದಲ್ಲಿಯೇ ಪ್ರಮಾಣದ ಲಕ್ಷಣವು ಸಂಭವಿಸುವುದರಿಂದ ಇದಕ್ಕೇ ಪ್ರಮಾಣತ್ವವೆಂದು ತಿಳಿಯಬೇಕು.

ಕೆಲವು ಆಗಮಗಳಲ್ಲಿ ಪಶ್ವಾತ್ಮಚೈತನ್ಯಕ್ಕೂ ಪ್ರಮಾಣತ್ವವುಂಟೆಂದು ವ್ಯವಹಾರವಿದೆಯಲ್ಲಾ ಎಂದರೆ; ಅದು ನ್ಯಾಯಶಾಸ್ತ್ರವನ್ನನುಸರಿಸಿ ಲೌಕಿಕ

ಪ್ರಮಾಣದ ವಿಷಯವಾಗಿ ಹೇಳಿದ್ದೆಂದು ತಿಳಿಯತಕ್ಕದ್ದು. ಸಿದ್ಧಾಂತವೊಂದೇ ಸರ್ವವಿಷಯಗಳನ್ನೂ ಸರಿಯಾಗಿ ತಿಳಿಸುವಂಥಾದ್ದು. ಆದಮಾತ್ರದಿಂದ ಪ್ರಮಿತಿಯೇ ಪ್ರಮಾಣವೆಂದಾಗಲಿಲ್ಲ.—'ಕರಣವು ಶಕ್ತಿಗೆ ಅನ್ಯವಲ್ಲ'—ವೆಂಬ ಶ್ರುತಿಯಂತೆ, ಜ್ಞೇಯದ ಕಾರ್ಯದಲ್ಲಿ ಇದು ಆತ್ಮನಿಗೆ ಸಾಧಕತಮವಾಗುತ್ತದೆ.

ಹಾಗಾದರೆ ಕರ್ತೃ ಮತ್ತು ಕರಣಗಳಿಗೆ ಏನಾದರೂ ಫಲವಿರಲೇಬೇಕಾಗುತ್ತದೆ: ಅದಾವುದು?—ಎಂದರೆ, ಕೇಳಿ. ಪರಸಂವಿದ್ರೂಪವಾದ (ಇನ್ನೊಂದರಿಂದ ಪ್ರಕಾಶವಾಗುವಂಥ) ಶಕ್ತಿಯು, ಸ್ವಸಂವಿದ್ರೂಪವಾದ (ಸ್ವಪ್ರಕಾಶ) ಕರ್ತೃವಿನಲ್ಲಿ ತಾದಾತ್ಮ್ಯಸಂಬಂಧದಿಂದ ಇರುತ್ತದೆಂದು ಮಹಾತ್ಮರುಗಳ ಮಾತು. ಶಕ್ತಿಯು ಪರಸಂವಿದ್ರೂಪವೆಂದರೆ, ವಿಷಯಗಳಲ್ಲಿ ಅಭಿಮುಖವಾಗಿ ಪ್ರಕಾಶವಾಗುವಿಕೆಯು. ಅದು ಬೇರೆ ವಸ್ತುವಾಗಿದ್ದಿದ್ದರೆ ಕರ್ತೃವಿನ ಧರ್ಮವೆಂದಾಗದೇ ಹೋಗುತ್ತದೆ. ಮತ್ತು ಇದು ವಿಭು(ವ್ಯಾಪಕ)ವಾದುದರಿಂದ ಕರ್ತೃವಿನಲ್ಲಿಯೂ ವಿಷಯದಲ್ಲಿಯೂ ಎರಡು ಸ್ಥಳಗಳಲ್ಲಿಯೂ ಇರಲು ಸಾಧ್ಯವು. ಹೀಗೆ ಮೊದಲನೆಯ ರೂಪದಿಂದ ಕರಣತ್ವವೂ, ಇನ್ನೊಂದರಿಂದ ಫಲತ್ವವೂ—ಎಂಬುದಾಗಿ ಒಂದೇ ಶಕ್ತಿಗೆ ಎರಡು ರೂಪವನ್ನು ಹೇಳಿದುದರಲ್ಲಿ ಯಾವ ಬಾಧಕವೂ ಇರುವುದಿಲ್ಲ. ಆದರೆ ಆತ್ಮನು ಈ ಶಕ್ತಿಗೆ ಸಂಬಂಧಿಸಿರುವುದರಿಂದ ಆತ್ಮನಿಗೂ ನಾನಾತ್ವವುಂಟಾದೀತೆಂದು ಸಂದೇಹಪಡಬಾರದು—ಏಕೆಂದರೆ ಆತ್ಮನು ಕೇವಲ ಸ್ವಸ್ವರೂಪದಲ್ಲಿರುವುದರಿಂದ ವಿಷಯಾಭಿಮುಖತ್ವವೆಂಬುದು ಆತ್ಮನಿಗಿಲ್ಲ.

ಅಥವಾ ವಿಷಯಗಳ ವ್ಯಾಪಾರವೇ ಆತ್ಮನ ಫಲವೆಂದಾಗಲಿ. ಅಚೇತನಗಳಾದ ವಿಷಯಗಳಿಗೆ ಚೇತನನಾದ ಆತ್ಮನಿಂದ ಪ್ರೇರ್ಯತ್ವವು ನಿಯತವೇ ಆಗಿರುತ್ತದೆ. "ಚೈತನ್ಯವು ದೃಕ್ ಮತ್ತು ಕ್ರಿಯಾರೂಪವು'—ಎಂದು ಮೃಗೇಂದ್ರಶ್ರುತಿಯಲ್ಲಿ ಹೇಳಿರುವುದರಿಂದ, ಜ್ಞಾನ ಮತ್ತು ಕ್ರಿಯಾರೂಪವಾದ ಶಕ್ತಿಗೆ ಕ್ರಿಯೆಯ ಅಂಶದಲ್ಲಿ ಕರಣತ್ವವು ಯುಕ್ತವಾಗುತ್ತದೆ,—ಆದರೆ ಜ್ಞಾನಾಂಶದಲ್ಲಿ ಹೇಗೆ?—ಎಂದರೆ, ಹೇಳುತ್ತೇವೆ. ಅಲ್ಲಿಯೂ ಪ್ರತಿಬಂಧಕ

ವನ್ನು ಕಳೆದು ವಿಷಯವು ಮುಂದಿನ ವ್ಯಾಪಾರಕ್ಕೆ ಅನುಕೂಲವಾಗುವಂತೆ ಆಗುವುದೇ ಫಲವೆಂದು ಹೇಳುವುದು ಸಾಧ್ಯವು.

'ಪ್ರಮಾಕರಣವೇ ಪ್ರಮಾಣವು'—ಎಂಬ ಲಕ್ಷಣದಲ್ಲಿ ದೋಷವೇನು? ಹಾಗಲ್ಲ; ಸಾಧಕಚೈತನ್ಯಕ್ಕೆ ಹೇತುವೂ ವಾಕ್ಯವೂ ಕರಣವೆಂಬ ಪಕ್ಷದಲ್ಲಿ, ಅಲ್ಲಿ ಅತಿವ್ಯಾಪ್ತಿದೋಷವು ಸಂಭವಿಸುತ್ತದೆ. ಈ ಪ್ರಕಾರವಾಗಿ ಶುದ್ಧಾತ್ಮನಿಗೆ ಸಂಬಂಧಿಸಿರುವ ಚಿಚ್ಛಕ್ತಿಯೇ ಪ್ರಮಾಣವೆಂದು ಸಿದ್ಧವು.

ಪ್ರಮಾಣವು ಪ್ರತ್ಯಕ್ಷ, ಅನುಮಾನ, ಶಬ್ದವೆಂದು ಮೂರು ವಿಧವಾಗಿದೆ.

ಪ್ರತ್ಯಕ್ಷಪ್ರಮಾಣವು

ಅದರಲ್ಲಿ ಇತರ ದ್ವಾರವನ್ನು ಅಪೇಕ್ಷಿಸದೇ ಇದ್ದು, ಎಲ್ಲ ವಿಷಯವನ್ನೂ ಪ್ರಕಾಶಪಡಿಸುವಂಥಾದ್ದು ಪ್ರತ್ಯಕ್ಷಪ್ರಮಾಣವು. ಹೇಗೆಂದರೆ ಮುಕ್ತಾತ್ಮನ ಚೈತನ್ಯವು. ಇದು ಶಿವಶಕ್ತಿಯಿಂದ ಮಲಶಕ್ತಿಯ ಪ್ರತಿಬಂಧಕಗಳೆಲ್ಲಾ ಕಳೆದಿರುವುದರಿಂದ ಮೇಲೆ ಮತ್ತು ಕೆಳಗಿರುವ ಸಮಸ್ತ ವಸ್ತುವನ್ನೂ ನೋಡುವಿಕೆಯಲ್ಲಿ ಕಲೆ ಮುಂತಾದ ಯಾವ ದ್ವಾರವನ್ನೂ ಅಪೇಕ್ಷಿಸುವುದಿಲ್ಲ. ಆ ದ್ವಾರಗಳೆಲ್ಲಾ ಮೋಹಕಗಳಾಗಿರುವುದರಿಂದ, ಚೈತನ್ಯದ ಒಂದು ಅಂಶ ವನ್ನು ಮಾತ್ರವನ್ನೇ ಪ್ರಕಾಶಪಡಿಸುವ ಸಾಮರ್ಥ್ಯವುಳ್ಳದ್ದಾದೀತು. ಇದಕ್ಕೆ ನಾದಾದಿಗಳನ್ನು ಅಪೇಕ್ಷಿಸುವ ಅಪರೋಕ್ಷದಲ್ಲಿ ಅವ್ಯಾಪ್ತಿದೋಷವುಂಟಾದೀ ತೆಂದು ಶಂಕಿಸಬೇಕಾಗಿಲ್ಲ; ಏಕೆಂದರೆ, ಇವರಲ್ಲಿ ಕಲಾದಿಗಳೆಲ್ಲಾ ಪರಿಹಾರ ವಾದಮೇಲೆ, ಪಶುಗಳನ್ನು ಅನುಗ್ರಹಿಸುವುದಕ್ಕೆ ಬೇಕಾಗಿದ್ದು ಅನುವೃತ್ತ-ವಾಗುತ್ತಿರುವ ನಾದಾದಿದ್ವಾರಗಳಿಗೆ ಬಂಧಕತ್ವವು ಸಂಭವಿಸುವುದಿಲ್ಲ. ಹಾಗಾದರೆ, ಮಾಯೆಯಂತೆ ಮಹಾಮಾಯೆಗೂ ಪಾಶತ್ವವುಂಟೆಂದು ಆಗಮ ಗಳಲ್ಲಿ ಕೇಳುತ್ತೇವೆ: ಅದರ ಕಾರ್ಯಕ್ಕೆ ಮಾತ್ರ ಬಂಧಕತ್ವವಿಲ್ಲವೆಂಬುದು ಹೇಗೆ? ಸತ್ಯವು: ಸಕಲಾತ್ಮಚೈತನ್ಯದಲ್ಲಿ ಸಂಸಾರಾವಸ್ಥೆಯಲ್ಲಿ ಮಾಯೆಗೆ ಅನುಗ್ರಾಹಕವಾಗಿರುವ ಶಿವಶಕ್ತಿಗೆ ಹೇಗೋ ಹಾಗೆ ಪಾಶತ್ವದ ಉಪಚಾರವು ಸಂಭವಿಸುತ್ತದೆ; ಆದರೂ ದೀಕ್ಷಿತಚೈತನ್ಯದಲ್ಲಿ ಮೋಕ್ಷಾವಸ್ಥೆಯಲ್ಲಿ ಮಾಯೆಯ ನಿಗ್ರಹವಿರುವುದರಿಂದ, ತಾನಾಗಿಯೇ ಶುದ್ಧವಾದ ಭೋಗ

ವನ್ನು ಕೊಡುವ ಭಗವತಿಯಾದ ಮಹಾಮಾಯೆಗೆ ಬಂಧಕತ್ವದ ಕಥೆಗೂ ಅವಕಾಶವಿರುವುದಿಲ್ಲ.

ಮತ್ತೆ, ಮಲವೆಲ್ಲಾ ಕಳೆದು ಪ್ರತ್ಯಕ್ಷಸ್ವರೂಪವಾಗಿರುವ ಮುಕ್ತ-ಚೈತನ್ಯಕ್ಕೆ ಮಹಾಮಾಯಾಕಾರ್ಯದ ಸಹಾಯಾಪೇಕ್ಷೆಯೇತಕ್ಕೆ ?— ಹೇಳುತ್ತೇವೆ. ಸವಿಕಲ್ಪಕ ಮತ್ತು ನಿರ್ವಿಕಲ್ಪಕ ಎಂದು ಪ್ರತ್ಯಕ್ಷವು ಎರಡು ವಿಧವಾಗಿದೆ. ಇದರಲ್ಲಿ ನಿರ್ವಿಕಲ್ಪಕವು ಪರಮಾರ್ಥಭೂತವಾದ ಶುದ್ಧವಸ್ತು ವನ್ನು ಪ್ರಕಾಶಪಡಿಸುತ್ತದೆ. ಉದಾಹರಣೆಗೆ ಪರಮುಕ್ತಚೈತನ್ಯವು. ಇದು ನಿರಧಿಕಾರದೀಕ್ಷೆಯಲ್ಲಿ ಸಕಲಜಗದ್ವ್ಯವಹಾರವನ್ನು ತ್ಯಜಿಸಿರುವುದರಿಂದ, ನಾಮ, ಜಾತಿ ಮುಂತಾದುವುಗಳ ಸಂಬಂಧರೂಪವಾದ ವಿಕಲ್ಪಸಮೂಹ ಗಳನ್ನೆಲ್ಲಾ ಬಿಟ್ಟು, ಎಲ್ಲ ವಸ್ತುಗಳನ್ನು ಅದರದರ ರೂಪದಿಂದಲೇ ಪ್ರಕಾಶ ಪಡಿಸುತ್ತದೆ. ಕಲ್ಪಿತವಾದ ನಾಮರೂಪಗಳ ಸಂಬಂಧವು, ಸಹಜರೂಪದಿಂದ ಬೆಳಗುವ ಸ್ವಭಾವವಾದ ಆ ಚೈತನ್ಯದಲ್ಲಿ ಪ್ರಕಾಶವಾಗುವಹಾಗಿಲ್ಲ. ಸವಿಕಲ್ಪಕವಾದರೋ, ವಿಶೇಷವಿಶಿಷ್ಟವಾಗಿ ಪದಾರ್ಥವನ್ನು ತಿಳಿಸುವ ಜ್ಞಾನವು. ಇದು ಅಪರಮುಕ್ತಚೈತನ್ಯವು. ಸಾಧಿಕಾರದೀಕ್ಷೆಯಲ್ಲಿ ವೈಮಲ್ಯ ವನ್ನು ಪಡೆದಿರುವುದರಿಂದ, "ಈ ಪಶುವು ನಮ್ಮಿಂದ ಅನುಗ್ರಾಹ್ಯವಾಗಿದೆ" —ಎಂಬ ವ್ಯವಹಾರವನ್ನು ಅವಲಂಬಿಸಿರುವ ಈ ಚೈತನ್ಯಕ್ಕೆ, ಪಶುತ್ವಪಾಕದ ತಾರತಮ್ಯ, ದೀಕ್ಷಾಭೇದಪ್ರಕಾರ, ಯೋಜನೀಯವಾದ ಸ್ಥಾನಭೇದ— ಮುಂತಾದ, ನಾಮಜಾತಿಪ್ರಧಾನಗಳಾದ ಅನೇಕ ವಿಕಲ್ಪಗಳು ವಿಷಯ-ವಾಗುತ್ತವೆ. ಜಗದ್ವ್ಯವಹಾರವೂ ಅಧಿಕಾರಕ್ಕೆ ಅಂಗವಾಗಿರುತ್ತದೆ. ಈ ವಿಕಲ್ಪಗಳ ಗ್ರಹಣವು ನಾದಾದಿಗಳ ಸಂಬಂಧವಿಲ್ಲದೆ ಅಸಂಭಾವಿತವು. ನಾದಕ್ಕೆ ವಾಚ್ಯತ್ವಜ್ಞಾನಮಾತ್ರಕ್ಕೆ ಉಪಯೋಗವೆಂದಲ್ಲ: ನಾಮಸಹಿತವಾಗಿ ತಿಳಿದುಬರುವ ಅರ್ಥದಲ್ಲಿಯೇ ಜಾತಿಮುಂತಾದ ಎಲ್ಲ ವಿಕಲ್ಪಗಳ ಗ್ರಹಣಕ್ಕೂ ಅವಕಾಶವುಂಟಾಗುವುದು.

ಸವಿಕಲ್ಪಕತ್ವವು ನಾದಾದಿಗಳ ಅಪೇಕ್ಷೆಯುಳ್ಳದ್ದೆಂದು ಹೇಳಿದ್ದಾಯಿತು; ಇದು ಶಬ್ದಾನುಮಾನಗಳಿಗೂ ಸಮಾನವಾಗಿದೆ; ಮತ್ತೆ ಇವುಗಳಿಗಿಂತಲೂ ಪ್ರತ್ಯಕ್ಷದಲ್ಲಿ ವಿಶೇಷವೇನು? ಹೇಳುತ್ತೇವೆ. ನಾದವು ಪರನಾದ-ಅಪರನಾದ

ವೆಂದು ಎರಡುಪ್ರಕಾರವಿದೆ. ಪರನಾದವೆಂದರೆ ಸಾಧಾರಣವಾದ ಭೌವನತ್ವಾಶ್ರಯವಾದುದು; ಅಪರನಾದವು ಅಸಾಧಾರಣವಾಗಿ ಪುರ್ಯಷ್ಟಕ-ದೇಹಾಶ್ರಯವಾದುದು. ಇವೆರಡರಲ್ಲಿ ಮೊದಲನೆಯದು ವ್ಯಾಪಕವಾದುದರಿಂದ ಪ್ರತ್ಯಕ್ಷಕ್ಕೆ ಅನುಕೂಲವಾದುದು; ಇನ್ನೊಂದು ಪರಿಚ್ಛಿನ್ನವಾದ ಕಾರಣ ಪ್ರಮಾಣಾಂತರಕ್ಕೆ ಅನುಗ್ರಾಹಕವಾಗಿರುತ್ತದೆ.

ಅಪರಮುಕ್ತಚೈತನ್ಯಕ್ಕೆ ಪುರ್ಯಷ್ಟಕವಿಲ್ಲದುದರಿಂದ, ಬುದ್ಧಿವೃತ್ತಿಯ ಸಂಬಂಧರಹಿತವಾದ ಆದಕ್ಕೆ ಹಿಂದೆ ಹೇಳಿದ ವಿಕಲ್ಪಗಳ ಗ್ರಹಣವು ಹೇಗೆ ಸಂಭವಿಸುವುದು? ಹಾಗಲ್ಲ: ದೀಕ್ಷೆಯ ಅನಂತರ ಮಾಯಾಕಾರ್ಯಕ್ಕೆ ವಿರುದ್ಧವಾಗಿ ಮಹಾಮಾಯೆಯಲ್ಲಿಯೇ ಅಪೇಕ್ಷಿತವಾದಂತೆ ಎಲ್ಲ ತತ್ವಗಳ ಉದಯವಾಗುವುದೆಂದು ಕೇಳಲ್ಪಡುತ್ತದೆ. ಈ ರೀತಿಯಲ್ಲಿ—"ಪರಮೇಶ್ವರ ಶಕ್ತಿಯ ಸಹಾಯದಿಂದ, ಮೋಹಕದ್ವಾರದ ಅಪೇಕ್ಷೆಯಿಲ್ಲದೆಯೇ, ಪಶುಗಳ ಅರ್ಥಗಳನ್ನು ತಿಳಿಸುವ ಜ್ಞಾನವು ಪ್ರತ್ಯಕ್ಷವು"—ಎಂದು ಪ್ರತ್ಯಕ್ಷದ ಲಕ್ಷಣವು ಸಿದ್ಧವಾಗುವುದು. ಹೀಗೆಯೇ ಹೇಳಲ್ಪಟ್ಟದೆ—"ಆವರಣವನ್ನು ಕಳೆದುಕೊಂಡಿರುವ ಆತ್ಮನು ಶಿವನೆಂಬ ಸೂರ್ಯನ ಶಕ್ತಿಯೆಂಬ ಕಿರಣದಿಂದ, ಸಾಮರ್ಥ್ಯಹೊಂದಿರುವ ಚೈತನ್ಯವೆಂಬ ಕಣ್ಣಿನಿಂದ, ಶಕ್ತ್ಯಾದಿಸಹಿತನಾದ ಶಿವನನ್ನು ಕಾಣುತ್ತಾನೆ"—ಎಂದು.

ಅನುಮಾನಪ್ರಮಾಣವು*

ಸಿದ್ಧಾಂತದ ಶ್ರವಣವಾದ ಅರ್ಥವನ್ನು ಅಲ್ಲಿ ಹೇಳಿರುವ ಕಾರಣಗಳಿಂದ ಪರೀಕ್ಷಿಸುವಿಕೆಯು ಅನುಮಾನವು. ಉದಾಹರಣೆ: ಶ್ರವಣವನ್ನು ಪೂರೈಸಿದ ಸಾಧಕಚೈತನ್ಯವು. ಸಾಧಕನು—

"ಶೈವಾಗಮಗಳಲ್ಲಿ ಕ್ರಮವಾಗಿ ಪಶು, ಪತಿ, ಪಾಶ ಎಂಬ ಈ ಮೂರು ಪದಾರ್ಥಗಳೇ ಮುಖ್ಯವಾದ ವಿಷಯಗಳು: ಇವುಗಳಲ್ಲಿ ಶಿವನೇ ಪತಿಯು;

---

* ಈ ಪ್ರಕರಣವು ತರ್ಕಶಾಸ್ತ್ರದ ಪರಿಚಯವಿಲ್ಲದೆ ಅರ್ಥವಾಗುವುದು ಕಷ್ಟವಾದ್ದರಿಂದ ಬಲ್ಲವರಿಂದ ಅಧ್ಯಯನಮಾಡಿ ತಿಳಿದುಕೊಳ್ಳತಕ್ಕದ್ದು.

ಅಣುಗಳೇ ಪಶುಗಳು: ಅರ್ಥಪಂಚಕಗಳೇ ಪಾಶಗಳು ಎಂದು ಹೇಳಿದೆ"—ಎಂಬುದಾಗಿ ಯಥಾವಿಧಿಯಾಗಿ ಗುರುಗಳ ಉಪದೇಶರೂಪವಾದ ಈ ಮೂರು ಪದಾರ್ಥಗಳನ್ನು ಪ್ರತಿಪಾದಿಸುವ ಪರಮ ಆಗಮವಾಕ್ಯವನ್ನು ಅಧ್ಯಯನಮಾಡುವವನಾಗಿ, ಕ್ರಮೇಣ ಶ್ರವಣವು ಪರಿಪಾಕಕ್ಕೆ ಬರಲಾಗಿ, ಆದರ ಅನುಭವವು ಸ್ಥಿರವಾಗಲು, ಅನಂತರ ಯುಕ್ತಿಯನ್ನು ಪ್ರತಿಪಾದಿಸುವ ಇತರ ವಾಕ್ಯಗಳನ್ನು ಕಂಡು, ದೇಹಾದಿವಸ್ತುಗಳು ಕಾರ್ಯತ್ವಧರ್ಮವುಳ್ಳವುಗಳು ಎಂದು.—

"ಈ ಕಾರ್ಯಕ್ಕೆ ತಕ್ಕ ಕರ್ತೃವಿರಬೇಕೆಂದು ಅನುಮಾನದಿಂದ ತಿಳಿಯುತ್ತೇವೆ"—ಎಂಬ ಕಾರಿಕೆಯಿಂದಲೂ,

"ಪೃಥಿವ್ಯಾದಿಗಳು ಕಾರ್ಯಗಳು; ಇವಕ್ಕೆ ಕರ್ತೃವು ಪರಮೇಶ್ವರನು: ಇವು ಈ ಕರ್ತೃವಿಗೆ ಉಪಯುಕ್ತವಾಗುವುದಿಲ್ಲ; ಜಡವಾದ್ದರಿಂದ ತನಗಾಗಿಯೂ ಆಗುವುದಿಲ್ಲ; ಕರ್ತೃವಿನ ಗೌರವದಿಂದ ವ್ಯರ್ಥವೂ ಅಲ್ಲ; ಪರಿಶೇಷದಿಂದ ಬೇರೆಯವನಿಗಾಗಿರಬೇಕು; ಈ ಬೇರೆಯಾದವನು ಕ್ಷೇತ್ರಜ್ಞನು" ಎಂದೂ;

"ಜಗತ್ತಿನ ಧರ್ಮದ (ಕಾರ್ಯತ್ವದ) ಯಾವ ಕಾರಣದಿಂದ ಕರ್ತೃವನ್ನು ಅನುಮಾನಮಾಡುತ್ತೇವೋ ಅದರಿಂದಲೇ ಉಪಾದಾನತ್ವವೂ ಸಿದ್ಧಿಸುತ್ತದೆ: ತಂತುಗಳಿಲ್ಲದೆ ಪಟವಿರಲಾರದಲ್ಲವೆ?"—ಎಂಬುದಾಗಿಯೂ, ಅದೇ ಗುರುವಿನಿಂದ ಕೇಳಿ, ಇಲ್ಲಿ ಸಿಗುವ ಕಾರಣಗಳಿಂದ ಪಕ್ಷದಲ್ಲಿರುವ ಈ ಪದಾರ್ಥತ್ರಯವನ್ನೇ ಸಾಧಿಸಲು ಪರೀಕ್ಷಿಸುವನು. ಶ್ರವಣದಿಂದ ನಿಶ್ಚಿತವಾದ ಅರ್ಥದ ಪರೀಕ್ಷೆಯಿಲ್ಲದಿದ್ದರೆ ಪ್ರತ್ಯಕ್ಷವುಂಟಾಗುವುದಿಲ್ಲ.

ಈ ಮೂರು ಅನುಮಾನಗಳಲ್ಲಿಯೂ ಜಗತ್ತು ಪಕ್ಷವು, ಕಾರ್ಯತ್ವವೆಂಬುದು ಹೇತುವು, ಸಕರ್ತೃತ್ವ, ಸಭೋಕ್ತೃತ್ವ ಮತ್ತು ಸೋಪಾದಾನಕತ್ವಗಳು ಸಾಧ್ಯಗಳು. ಹೇಗೆಂದರೆ—ಪ್ರತ್ಯಕ್ಷವಲ್ಲದ ಸಾಧ್ಯಧರ್ಮವುಳ್ಳದ್ದು ಪಕ್ಷತ್ವವು; ಇದು ಜಗತ್ತಿನಲ್ಲಿದೆ. ಅದರಲ್ಲಿರುವುದೆಂದು ಸಾಧಿಸಲ್ಪಡುತ್ತಿರುವ ಕರ್ತೃಭೋಕ್ತೃ ಉಪಾದಾನಗಳ ಸಾಕ್ಷಾತ್ಕಾರವು ಮನನಕಾಲದಲ್ಲಿರುವುದಿಲ್ಲ.

ಪಕ್ಷಧರ್ಮತಾದಿಗಳ ಸಿದ್ಧತ್ವವೇ ಹೇತುತ್ವವು; ಇದು ಕಾರ್ಯತ್ವದಲ್ಲಿ ಇದೆ; ಪಕ್ಷವಾದ ಜಗತ್ತಿನಲ್ಲಿ ಇರುವುದು ನಿಶ್ಚಿತವೇ ಇದೆ. ಹೇತುವಿನ ವ್ಯಾಪ್ತಿಯಿಂದ ತಿಳಿದುಬರುವಿಕೆಯು ಸಾಧ್ಯತ್ವವು. ಇದು ಸಕರ್ತೃಕತ್ವಾದಿಗಳಲ್ಲಿ ಇದೆ. 'ಯಾವುದು ಕಾರ್ಯವೋ ಅದು ಸಕರ್ತೃಕವು'—ಎಂಬ ವ್ಯಾಪ್ತಿಯೆಂಬ ಸ್ವಾಭಾವಿಕಸಂಬಂಧವುಳ್ಳ ಕಾರ್ಯತ್ವದಿಂದ ಇದು ಅನುಮೇಯವಾಗುತ್ತದೆ.

ಎಲ್ಲ ಅನುಮಾನಗಳಲ್ಲಿಯೂ ಹೇತು ಮತ್ತು ಸಾಧ್ಯಗಳ ವ್ಯಾಪ್ತಿ-ಗ್ರಹಣವೇ ಶರಣವಲ್ಲವೆ? ಅದು ಉದಾಹರಣೆಯನ್ನು ಅಪೇಕ್ಷಿಸುತ್ತದೆ. ಆದರೆ ಮೇಲೆ ಹೇಳಿದ ಅನುಮಾನದಲ್ಲಿ ಇದಿಲ್ಲವಲ್ಲ? ಪಕ್ಷವಾಗಿ ತೆಗೆದು ಕೊಂಡಿರುವ ಜಗತ್ತಿಗೆ ಘಟಾದಿಗಳು ಜಗತ್ತಿನ ಏಕದೇಶವಲ್ಲಿರುವುದರಿಂದ ಸಪಕ್ಷವಾಗಲಾರವಲ್ಲವೆ?

ಇದಕ್ಕೆ ಹೇಳುತ್ತೇವೆ—ಈ ಜಗತ್ತು ಲೌಕಿಕ ಪ್ರಮಾಣಕ್ಕೆ ಗೋಚರ ವಾಗುತ್ತಲೂ, ಆಗಮಪ್ರಮಾಣಕ್ಕೆ ವಿಷಯವಾಗಿಯೂ ಎರಡು ವಿಧವಾಗು ತ್ತದೆ. ಇದರಲ್ಲಿ ಮೊದಲನೆಯದಕ್ಕೆ ಸಪಕ್ಷತ್ವವು, ಎರಡನೆಯದಕ್ಕೆ ಪಕ್ಷತ್ವವು ಎಂದು ಯಾವ ದೋಷವೂ ಸಂಭವಿಸುವುದಿಲ್ಲ. ಲೌಕಿಕಪ್ರಮಾಣದಿಂದ ತಿಳಿದುಬಂದುದು ಇತರದೃಷ್ಟಿಯಿಂದ ಭ್ರಾಂತಿಯಾದುದರಿಂದ ದೃಷ್ಟಾಂತ ವಾಗಲಾರದೆಂದು ಶಂಕಿಸಬಾರದು; "ಸ್ವಪ್ನದಲ್ಲಿ ಕಂಡ ಸುಂದರಿಯಂತೆ ಈಕೆಯು ಸುಂದರಳು"—ಎಂದು ಮುಂತಾದ ಸ್ಥಳಗಳಲ್ಲಿ ಅಸತ್ಯವಾದು ದನ್ನೂ ದೃಷ್ಟಾಂತವಾಗಿ ನೋಡಿದ್ದೇವೆ.

ಅನ್ವಯವ್ಯಾಪ್ತಿಯನ್ನು ತೋರಿಸುವುದಕ್ಕಾಗಿ ಪಕ್ಷದ ಏಕದೇಶದಲ್ಲಿಯೇ ಸಪಕ್ಷತ್ವವನ್ನು ಉಪಪಾದನೆಮಾಡುವ ಪ್ರಯಾಸವೇ ಬೇಡ; ಜಗತ್ತಿಗೆ ಬೇರೆಯಾಗಿ ನಿತ್ಯಗಳೆಂದು ತಿಳಿದುಬರುವ ಮಾಯೆ, ಆತ್ಮ, ಮಹೇಶ್ವರ— ಇವರಲ್ಲಿ ಯಾವುದಾದರೊಂದನ್ನು ಸಾಧನೆಮಾಡುವಲ್ಲಿ ವ್ಯತಿರೇಕವ್ಯಾಪ್ತಿ ಯಿಂದ ವಿಪಕ್ಷದೃಷ್ಟಾಂತವನ್ನು ಹೇಳಲು ಸಾಧ್ಯವಿದೆಯಲ್ಲ?—ಎಂದರೆ, ಸತ್ಯವು. ಇದು ವ್ಯಸ್ತಾನುಮಾನದಲ್ಲಿ ಸಂಭವಿಸುತ್ತದೆ. ಸಮಸ್ತಾನುಮಾನ-ದಲ್ಲಿಯಾದರೋ, ಯುಕ್ತವಾಗುವುದಿಲ್ಲ. ಹೇಗೆಂದರೆ—"ಜಗತ್ತು ಕರ್ತೃ, ಭೋಕ್ತೃ ಉಪಾದಾನಗಳನ್ನುಳ್ಳದ್ದು; ಕಾರ್ಯವಾದ್ದರಿಂದ"— ಎಂಬಲ್ಲಿ

'ಯಾವುದು ಕಾರ್ಯವೋ ಅದು ಕರ್ತ್ರಾದಿಗಳುಳ್ಳದ್ದು 'ಘಟಾದಿಗಳಂತೆ'– ಎಂದು ಅನ್ವಯವ್ಯಾಪ್ತಿಯನ್ನು ಅಂಗೀಕರಿಸದಿದ್ದರೆ, ಹೇತುವು ದೃಷ್ಟಾಂತ ರಹಿತವಾಗುತ್ತದೆ. 'ಯಾವುದು ಕರ್ತ್ರಾದಿವುಳ್ಳದ್ದಲ್ಲವೋ ಅದು ಕಾರ್ಯ-ವಲ್ಲ–ಇದರಂತೆ, ಎಂಬ ವ್ಯತಿರೇಕವ್ಯಾಪ್ತಿಯಲ್ಲಿ ಸಾಧ್ಯಭೂತವಾದ ಈಶ್ವರ, ಆತ್ಮ, ಮಾಯೆಗಳು ಉದಾಹರಣೆಯಾಗುವಂತಿಲ್ಲ. ಆದಕಾರಣ ಈ ಹೇತುವು ಕೇವಲಾನ್ವಯಿಯು.

ವ್ಯಸ್ತ ವಿಷಯದಲ್ಲಿಯೂ ಅನುಮಾನಪ್ರಯೋಗವನ್ನು ಹೇಳುತ್ತೇವೆ.—

"ಜಗತ್ತು ಸಕರ್ತೃಕವು, ಕಾರ್ಯವಾದ್ದರಿಂದ ಯಾವುದು ಕಾರ್ಯವೋ ಅದು ಸಕರ್ತೃಕವೇ ಆಗಿರುತ್ತದೆ; ಘಟದಂತೆ; ಯಾವುದು ಅಕರ್ತೃಕವೋ ಅದು ಕಾರ್ಯವೂ ಅಲ್ಲ: ಆತ್ಮಸಮೂಹವು ಅಥವಾ ಮಾಯೆಯು ಹೇಗೋ ಹಾಗೆ."

"ಜಗತ್ತು ಸಭೋಕ್ತೃಕವು, ಕಾರ್ಯವಾದ್ದರಿಂದ; ಯಾವುದು ಕಾರ್ಯವೋ ಅದು ಸಭೋಕ್ತೃಕವು, ಘಟದಂತೆ. ಯಾವುದು ಅಭೋಕ್ತೃಕವೋ ಅದು ಈಶ್ವರ ಅಥವಾ ಮಾಯೆಯಂತೆ ಕಾರ್ಯವೂ ಅಲ್ಲ."

"ಜಗತ್ತು ಸೋಪಾದಾನಕವು, ಕಾರ್ಯವಾದ್ದರಿಂದ: ಯಾವುದು ಕಾರ್ಯವೋ ಅದು ಸೋಪಾದಾನಕವು, ಕುಡ್ಯದಂತೆ; ಯಾವುದು ಉಪಾದಾನರಹಿತವೋ ಅದು ಈಶ್ವರ ಅಥವಾ ಮಾಯೆಯಂತೆ ಕಾರ್ಯವೂ ಅಲ್ಲ. ಇಲ್ಲಿ ಹೇಳಿರುವ ಮೂರು ಹೇತುಗಳಿಗೂ ಎರಡುವಿಧದೃಷ್ಟಾಂತಗಳೂ ಸಂಭವಿಸುವುದರಿಂದ ಅನ್ವಯವ್ಯತಿರೇಕಿಗಳು. ಈ ಮೂರು ಹೇತುಗಳೇ ಲೌಕಿಕದೃಷ್ಟಾಂತವನ್ನು ಒಡಂಬಡದೆ ಇದ್ದರೆ ಕೇವಲವ್ಯತಿರೇಕಿಗಳಾಗುತ್ತವೆ. ಹೀಗೆ ಮೇಲೆ ಹೇಳಿದ ಪ್ರಕಾರವಾಗಿ ಅಬಾಧಿತಗಳಾದ ಇನ್ನೂ ಇತರ ಸಾಧನಗಳಿಂದ ಯಥಾಸಂಭವವಾಗಿ ಪತಿಮುಂತಾದ ಮೂರು ಪದಾರ್ಥ ಗಳಲ್ಲಿಯೇ ಸೇರಿರುವ ಇತರ ಪದಾರ್ಥಗಳನ್ನೂ ವಿಚಕ್ಷಣರಾದವರು ಪರೀಕ್ಷಿಸುತ್ತಾರೆ.

ಇಲ್ಲಿಯೂ ಕೊಂಚ ಬರೆಯುತ್ತೇವೆ:—

"ಶಿವನು ಶಕ್ತಿಯುಳ್ಳವನು, ವಸ್ತುವಾದ್ದರಿಂದ"; ಇದು ಕೇವಲಾನ್ವಯಿಯು; ಎಲ್ಲ ವಸ್ತುವೂ ಎರಡು ರೂಪವುಳ್ಳದ್ದಾಗುತ್ತದೆ.

"ಶಂಭುವು ಅನಾದಿಮುಕ್ತನು, ಮೂರು ಕಾಲದಲ್ಲೂ ಸ್ವತಂತ್ರನಾದ್ದರಿಂದ"—ಇದು ಕೇವಲ ವ್ಯತಿರೇಕಿಯು; ಬೇರೆಕಡೆಯಲ್ಲಿ ಈ ಎರಡು ಧರ್ಮಗಳೂ ಇರುವುದಿಲ್ಲ.

"ಈಶ್ವರನು ಶಕ್ತಿಯೊಂದನ್ನೇ ಕರಣವಾಗುಳ್ಳವನು, ಸಂಕಲ್ಪಮಾತ್ರದಿಂದಲೇ ಕರ್ತೃವಾದ್ದರಿಂದ"—ಇದು ಅನ್ವಯವ್ಯತಿರೇಕಿಯು. ಪರಮುಕ್ತ ಅಪರಮುಕ್ತರಲ್ಲಿ ಇದರ ಅಭಾವವಿರುವುದು.

"ಪತಿಯು ಸರ್ವಜ್ಞನು, ಸರ್ವಕರ್ತೃವಾದ್ದರಿಂದ"—ಇದೂ ಹಿಂದಿನಂತೆಯೇ; ಮುಕ್ತಾಮುಕ್ತರೀರ್ವರೂ ಎರಡರಲ್ಲಿಯೂ ದೃಷ್ಟಾಂತವಾಗುತ್ತಾರೆ.

"ಜಗತ್ಕರ್ತೃವು ನಿತ್ಯವಿಭುವು, ಕಾಲದೇಶಪರಿಚ್ಛೇದವಿಲ್ಲದ್ದರಿಂದ"—ಹಿಂದಿನಂತೆ: ಭೋಕ್ತೃಭೋಗ್ಯಗಳು ಎರಡರಲ್ಲಿಯೂ ದೃಷ್ಟಾಂತವಾಗುವುವು.

"ಶಿವಶಕ್ತಿಯು ಚಿದ್ರೂಪವಾದದ್ದು, ಚಿದ್ಧರ್ಮವಾದ್ದರಿಂದ"; ಅನ್ವಯದಲ್ಲಿ ಇನ್ನೊಂದು ಚೈತನ್ಯಧರ್ಮದಂತೆ; ವ್ಯತಿರೇಕದಲ್ಲಿ ಜಡಧರ್ಮದಂತೆ.

"ಶಿವಶಕ್ತಿಯು ಶಿವಸಂಬಂಧವುಳ್ಳದ್ದು, ಶಿವನಿಗೆ ಬೇರೆಯಾಗಿದ್ದೂ ಅಭಿನ್ನವಾದ್ದರಿಂದ; ಯಾವುದು ಯಾವುದರಿಂದ ಬೇರೆಯಾಗಿದ್ದು ಅಭಿನ್ನವಾಗಿರುವುದೋ ಅದು ಅದರಲ್ಲಿ ಸಂಬಂಧಿಸಿರುತ್ತದೆ; ಹೇಗೆಂದರೆ, ಆತ್ಮಚಿಚ್ಛಕ್ತಿಯು ಹೇಗೋ ಹಾಗೆ. ಯಾವುದು ಹೀಗಿರುವುದಿಲ್ಲವೋ ಅದು ಹಾಗಿರುವುದಿಲ್ಲ; ಶರೀರಾದಿಗಳಂತೆ."

"ಮಹಾಮಾಯೆಯು ಸಾಕ್ಷಾತ್ತಾಗಿ ಪರಮೇಶ್ವರನಿಂದ ಅಧಿಷ್ಠಿತವಾದದ್ದು, ಪರಮೇಶ್ವರನ ಶರೀರಾದಿಗಳಿಗೆ ಉಪಾದಾನವಾದ್ದರಿಂದ"—ಇದು ಕೇವಲ ವ್ಯತಿರೇಕಿಯು—ಮಾಯೆ ಮೊದಲಾದವುಗಳಲ್ಲಿ ಈ ಎರಡು ಧರ್ಮಗಳೂ ಇಲ್ಲವು.

"ಆತ್ಮರು ಚೇತನರು, ಜ್ಞಾನ ಮತ್ತು ಕ್ರಿಯಾಶಕ್ತಿಯುಳ್ಳವರಾದ್ದರಿಂದ"—ಅನ್ವಯದಲ್ಲಿ ಶಿವನಂತೆ; ವ್ಯತಿರೇಕದಲ್ಲಿ ಮಾಯಾದಿಗಳಂತೆ.

"ಮುಕ್ತಾತ್ಮನು ಶಿವಸಮನು, ಶುದ್ಧಚೈತನ್ಯನಾದ್ದರಿಂದ; ಯಾರು ಹೀಗಲ್ಲವೋ, ಅವನು ಹಾಗಲ್ಲ; ಬದ್ಧಾತ್ಮನಂತೆ."

"ಪಶುವು ಪಾಶವುಳ್ಳವನು, ಚೇತನನಾಗಿ ಪರತಂತ್ರನಾದ್ದರಿಂದ."

"ಜ್ಞಾನಕೇವಲನು ಮಲಮಾತ್ರವುಳ್ಳವನು, ಪಶುವಾಗಿದ್ದು ಜ್ಞಾನಾದಿಗಳಿಂದ ಕ್ಷೀಣವಾದ ಕರ್ಮವುಳ್ಳದ್ದರಿಂದ."

"ಲಯಕೇವಲನು ಮಲಕರ್ಮಗಳನ್ನುಳ್ಳವನು, ಪ್ರಲಯದಲ್ಲಿ ಉಪ-ಸಂಹಾರವಾಗಿರುವ ಕಲಾದಿಗಳನ್ನುಳ್ಳವನಾದ್ದರಿಂದ."

"ಸಕಲನು ಮಲ ಕರ್ಮ ಮತ್ತು ಮಾಯೆಯನ್ನುಳ್ಳವನು, ಸುಖಾದಿ ವೇದನೆಯುಳ್ಳವನಾದ್ದರಿಂದ."

"ಪಾಶಗಳು ಜಡಗಳು, ಪರಿಣಾಮವುಳ್ಳದ್ದರಿಂದ."

"ಮಲವು ಪಾಶಮೂಲವು, ಚೈತನ್ಯವನ್ನು ಆವರಿಸುವುದರಿಂದ."

"ಮಲಶಕ್ತಿಗಳು ಅನಿತ್ಯಗಳು, ಜಡವಾಗಿದ್ದು ಅನೇಕಗಳಾದ್ದರಿಂದ."

"ಆತ್ಮಮಲಗಳ ಸಂಬಂಧವು ಅನಾದಿಯಾದದ್ದು: ಕಾರಣವು ಕಾಣಬರದೇ ಇರುವುದರಿಂದ."

"ಕರ್ಮಗಳು ಭೋಗ್ಯಗಳು, ಬುದ್ಧಿನಿಷ್ಠವಾದ್ದರಿಂದ."

"ಮಾಯೆಯು ನಿತ್ಯವಾದದ್ದು, ಪರಮೋಪಾದಾನವಾದ್ದರಿಂದ, ಮಹಾಮಾಯೆಯಂತೆ."

"ಕಲಾದಿಗಳು ಮೋಹಕಗಳು, ಮಾಯಾಕಾರ್ಯಗಳಾದ್ದರಿಂದ."

"ಎಲ್ಲ ಕಾರ್ಯಗಳೂ ಸದ್ಭೂತಗಳು: ಲಯ ಮತ್ತು ಸ್ಥಿತಿಗಳಲ್ಲಿ ಶಕ್ತಿವ್ಯಕ್ತಿತ್ವದಿಂದ ಉಪಾದಾನಾಶ್ರಯವಾದ್ದರಿಂದ."—ಇವೇ ಮೊದಲಾದವುಗಳು.

ಈ ಮೇಲೆ ಹೇಳಿದ ಅನುಮಾನಗಳಲ್ಲಿ ಶ್ರವಣನಿಶ್ಚಿತತ್ವವು ಸಮಾನವಾದ್ದರಿಂದ ಹೇತುಸಾಧ್ಯಗಳೆರಡೂ ಒಂದೇ ಆಗುತ್ತವೆಯಲ್ಲವೆ? ಹಾಗಲ್ಲ. ಹೇತುಗಳು ಮನನಕ್ಕೆ ಮೊದಲೇ ನಿಶ್ಚಿತಗಳಾಗಿರುವುದರಿಂದ ಧ್ಯಾನ-ವಿಷಯತ್ವವೆಂಬ ವಿಶೇಷವು ಸಂಭವಿಸುತ್ತದೆ. ಸಾಧ್ಯಾರ್ಥದ ಪರಾಮರ್ಶವೇ ಅನುಮಾನವೆಂದಾದರೆ, ಫಲಭೂತವಾದ ಯಾವುದೋ ಅನುಮಿತಿಯು ಹೇಳಲ್ಪಡಬೇಕಾಗುತ್ತದೆಯಲ್ಲವೆ? ಎಂದರೆ; ಹಾಗೆ ಹೇಳಲಾಗದು. ಅದೇ ಪ್ರಮಾಣರೂಪವಾದ್ದರಿಂದ, ಪ್ರಮಾಕರಣತ್ವವನ್ನು ಹೇಳಿರುವುದಿಲ್ಲ. ಆದರೂ ಹೇಳುತ್ತೇವೆ. ಹೇತುಯುಕ್ತವಾಗಿದೆಯೆಂದು ಸಾಧ್ಯವು ಪರಾಮೃಷ್ಟವಾಗುವಾಗ, ಆ ಪರಾಮರ್ಶಕ್ಕೆ ಮುಂದೆ ಸಂಭವಿಸುವ ಧ್ಯಾನಕ್ಕೆ ಉಪ-ಯುಕ್ತವಾದ ಒಂದು ಪರಿಪಾಕವು ಉಂಟಾಗುತ್ತದೆ; ಇದೇ ಫಲವು. ಆಗ ಸಾಧ್ಯವಾದ ಅರ್ಥವೂ ಸಿದ್ಧವೆನಿಸುತ್ತದೆ: ಅಸಿದ್ಧವಾದ ಅರ್ಥದಲ್ಲಿ ಧ್ಯಾನವು ಸಂಭವಿಸಲಾರದು.

ವಸ್ತುವು ಸಾಧ್ಯಾವಸ್ಥೆಯಲ್ಲಿ ಸಂಶಯಾಸ್ಪದವೆಂದು ತಿಳಿದುಬರುವುದು; ಸಂಶಯವಿಲ್ಲದಿದ್ದರೆ, ಅದರ ಸಾಧನೆಗಾಗಿ ಹೇತುವನ್ನು ಹುಡುಕುವುದು ಯುಕ್ತವಾಗದು. ಲೋಕದಲ್ಲಿ ಬೆಂಕಿ ಮುಂತಾದುವುಗಳಲ್ಲಿ ಸಂಶಯವುಂಟಾದಾಗಲೇ ಅದರ ಹೇತುವಾದ ಧೂಮಾದಿಗಳನ್ನು ಹುಡುಕುವರು; ಇದರಂತೆ ಇಲ್ಲಿಯೂ "ಪತಿಯು ಇದ್ದಾನೆ" ಎಂಬ ಭಗವದ್ವಾಕ್ಯವನ್ನು ಕೇಳಿದ ಅನಂತರದಲ್ಲಿ, ಅದರಲ್ಲಿ ಸಂಶಯವಿಲ್ಲವಾದುದರಿಂದ, ಜಗತ್ಕಾರ್ಯತ್ವ ಹೇತುವಿನಿಂದ ಕರ್ತೃಭೂತನಾದ ಅದರ ಪತಿಯನ್ನು ಅರಸುವುದು ವ್ಯರ್ಥವೆನಿಸುವುದು. ಹಾಗಲ್ಲದೆ, ಪತಿಪರಾಮರ್ಶವು ಸಂದಿಗ್ಧವೇ ಆದರೆ, ಲೌಕಿಕಸಮಾನವಾಗುವುದು; ಹೇಳುತ್ತೇವೆ. ನಿರ್ಮಲರಾದ ಶಿಷ್ಯರಿಗೆ ತಮ್ಮ ಆಚಾರ್ಯರ ವಚನಗಳಲ್ಲಿ ನಂಬಿಕೆಯಿಲ್ಲವೆಂಬುದಿಲ್ಲ. ಆದರೂ "ನಾವು ಉಪದೇಶಿಸಿದ ಪದಾರ್ಥಗಳು ನಾವು ಹೇಳಿರುವ ಹೇತುಗಳಿಂದಲೇ ಯಥೋಚಿತವಾಗಿ ಪರೀಕ್ಷಿಸಲ್ಪಡಲಿ"—ಎಂದು ಆಚಾರ್ಯರಿಂದಲೇ ಆಜ್ಞಪ್ತರಾಗಿ ಸಾಧಕರು, ಶ್ರುತವಾದ ಅರ್ಥಗಳಲ್ಲಿ ಸಂಶಯವಿಲ್ಲವಾದರೂ, ಕೂಡಲೆ ಸಾಕ್ಷಾತ್ಕಾರವಿಲ್ಲದುದರಿಂದ, ಅದಕ್ಕೆ ಸಾಧನವಾದ ಅನುಮಾನವನ್ನು

ಮಾಡುತ್ತಾರೆ. ಹೀಗೆ ಶ್ರವಣದಿಂದ ನಿಶ್ಚಿತವಾದ ಅರ್ಥದ ಹೇತುಗಳಿಂದ ಪರಾಮರ್ಶವು ಅನುಮಾನವು.

ಇಂತು ಅನುಮಾನವು ವ್ಯಾಖ್ಯಾತವಾದುದು.

ಶಬ್ದ ಪ್ರಮಾಣವು

ಗುರೂಪದಿಷ್ಟವಾಗಿ ತನಗೆ ಲಬ್ಧವಾಗಿರುವ ಆಗಮವಾಕ್ಯದ ಅರ್ಥ-ವಿಷಯಕವಾದ ಜ್ಞಾನವು ಶಬ್ದಪ್ರಮಾಣವು. ಸಾಧಕಚೈತನ್ಯವು ನಿರ್ವಾಣ-ದೀಕ್ಷೆಯನ್ನು ಪಡೆದು ಸಮಸ್ತವಸ್ತುಜಿಜ್ಞಾಸೆಯಿಂದ ಬಿಡಲ್ಪಟ್ಟದ್ದಾಗುತ್ತದೆ. ಶ್ರವಣಕ್ಕಾಗಿ ಬಂದಿರುವ ಇಂಥವನಿಗೆ ಗುರುವು ಶಿವಾಜ್ಞಾನುಸಾರವಾಗಿ ತನ್ನ ಮುಖದಿಂದ ಆವಿರ್ಭವಿಸಿರುವ ಪರನಾದಮಯವಾದ ಆಗಮವಾಕ್ಯವನ್ನು ಶ್ರೋತ್ರೇಂದ್ರಿಯದ ಮೂಲಕವಾಗಿ ಒಳಗೆ ಪ್ರವೇಶಮಾಡಿಸಿ, ಅಲ್ಲಿರುವ ಪರನಾದಬಿಂದುವರ್ಣರೂಪವಾದ ವಾಕ್ಯವನ್ನು ಎಬ್ಬಿಸುತ್ತಾನೆ. ಅನಂತರ ಆ ಶಿಷ್ಯನು ತನ್ನ ವಾಕ್ಯವನ್ನು ಆ ಆಗಮವಾಕ್ಯದೊಡನೆ ಪರಿಶೀಲಿಸುವ ಮಾಹಾತ್ಮ್ಯಯಿಂದ ಒಂದುಗೂಡಿಸಿ, ಅದರಲ್ಲಿ ಪ್ರತಿಪಾದಿತವಾಗಿರುವ ಅರ್ಥಗಳಲ್ಲಿ ಕ್ರಮವಾಗಿ ಆತ್ಮಚೈತನ್ಯವನ್ನು ಆರೂಢವಾಗಿ ಮಾಡುತ್ತಾನೆ. ಹೀಗೆ ಅಂಥ ಆಗಮವಾಕ್ಯಾರೂಢವಾದ ಆತ್ಮಚೈತನ್ಯವು ಶಬ್ದಪ್ರಮಾಣ ವೆಂದೂ ಶ್ರವಣವೆಂದೂ ಹೇಳಲ್ಪಡುತ್ತದೆ.

ಈ ಲಕ್ಷಣಕ್ಕೆ ಅನುಮಾನದಲ್ಲಿ ಅತಿವ್ಯಾಪ್ತಿಯುಂಟಾಗುವುದೆಂದು ಶಂಕಿಸಬಾರದು. ಅನುಮಾತೃಚೈತನ್ಯವು ಹೇತುವಿನಿಂದ ಆರೂಢವಾಗಿರು ವುದರಿಂದ ವಾಕ್ಯಮಾತ್ರದಿಂದ ಆರೂಢವಾದುದಲ್ಲ. ಆಗಮಗಳಲ್ಲಿಯೂ ಹೇತುಪ್ರಯೋಗವು ಕಂಡುಬರುವುದಷ್ಟೆ! ಹೀಗಿರುವಲ್ಲಿ ಶ್ರೋತೃಚೈತನ್ಯವು ಹೇತುವಿನಿಂದ ಆರೂಢವಲ್ಲವೆಂಬುದು ಹೇಗೆ? ಸತ್ಯವು: ಎರಡಕ್ಕೂ ಎರಡು ಕಡೆಗಳಲ್ಲಿಯೂ ಸಂಬಂಧವಿರುವುದಾದರೂ, ಶ್ರವಣದಲ್ಲಿ ವಾಕ್ಯಕ್ಕೆ ಪ್ರಾಧಾನ್ಯವು, ಮನನದಲ್ಲಿ ಹೇತುವಿಗೆ—ಎಂಬುದಾಗಿ ಶಬ್ದ ಮತ್ತು ಅನುಮಾನಕ್ಕೆ ಇಷ್ಟು ಭೇದವುಂಟು. ಆದಕಾರಣ ವಾಕ್ಯಾರ್ಥಮಾತ್ರವನ್ನೇ ಗಮನಿಸುವುದರಲ್ಲಿ ನಿರತರಾಗಿರುವ ಶ್ರೋತೃಚೈತನ್ಯಕ್ಕೇ ಇದು ಲಕ್ಷಣವು.

ಇಲ್ಲಿ ಬುದ್ಧಿಯಲ್ಲಿರುವ ಹೇತು ಮತ್ತು ವಾಕ್ಯಗಳಿಗೆ ಚೈತನ್ಯ-ವಿಷಯತ್ವವನ್ನು ಹೇಳಿದಹಾಗೆಯೇ ಆಯಿತಲ್ಲವೆ? ಹೀಗಾದಮೇಲೆ ಆ ವಿಷಯುಕವಾದ ಚೈತನ್ಯಕ್ಕೆ ಎರಡರಲ್ಲಿಯೂ ಸ್ಮರಣರೂಪತ್ವವನ್ನು ಒಡಂಬಡ ಬೇಕಲ್ಲವೆ? ಎಂದರೆ ಹಾಗಲ್ಲ. ಬುದ್ಧಿತತ್ವದಲ್ಲಿರುವ ಹಿಂದಿನ ವಾಸನಾ-ಸಮೂಹವನ್ನು ನಿಃಶೇಷವಾಗಿ ನಾಶಮಾಡುವುದರಲ್ಲಿ ಜಾಗರೂಕವಾಗಿರುವ ಪರನಾದದ ಸಾಮೀಪ್ಯದಿಂದ ಉತ್ಕೃಷ್ಟವಾದ ಅಪರನಾದ ವಿಶಿಷ್ಟವಾದ್ದರಿಂದ ಯಾವಾಗಲೂ ಎಲ್ಲ ವಿಷಯದ ಅನುಭವರೂಪವಾಗಿರುತ್ತದೆ. ಹಿಂದೆ ಆಪ್ತವಾಕ್ಯಕ್ಕೆ ಪ್ರಾಮಾಣ್ಯವು ಹೇಳಲ್ಪಟ್ಟಿತು: ಈಗ ಆತ್ಮಚೈತನ್ಯಕ್ಕೆ ಹೇಳಿದೆ ಯೆಂದು ವಿರೋಧವಿದೆಯಲ್ಲ?—ಎಂದರೆ, ಸತ್ಯವು. ಪ್ರಮಾಣವು ಉಪಕಾರ್ಯ ಮತ್ತು ಉಪಕಾರಕವೆಂದು ಎರಡು ಪ್ರಕಾರವು. ಅದರಲ್ಲಿ ಉಪಕಾರ್ಯವು ಕಳೆಯಲ್ಪಡಬೇಕಾದ ಪಾಶವನ್ನುಳ್ಳದ್ದಾಗಿ ಅನುಗ್ರಾಹ್ಯವಾದ ಆತ್ಮ-ಚೈತನ್ಯವು. ಉಪಕಾರಕವಾದರೋ, ಆ ಪಾಶವನ್ನು ಕಳೆಯುವುದಕ್ಕಾಗಿ ಪ್ರವೃತ್ತವಾದ್ದರಿಂದ ಅನುಗ್ರಾಹಕವಾದ ಈಶ್ವರ ಚೈತನ್ಯವೇ ಆಗಿದೆ. ಆದುದರಿಂದ ಅದಕ್ಕೇನೇ ಶುದ್ಧಚೈತನ್ಯವಾದ್ದರಿಂದ ಪ್ರಾಮಾಣ್ಯವು ಸಿದ್ಧವಾದ ಮೇಲೆ, ಅದರಿಂದ ಅಧಿಷ್ಠಿತವಾದ ಆಗಮವಾಕ್ಯಕ್ಕೆ ಅದರ ಅಭೇದದ ಉಪಚಾರವು ಹಿಂದೆ ತೋರಿಸಲ್ಪಟ್ಟಿತು. ಈಗಲಾದರೋ ಈ ಈಶ್ವರ ಚೈತನ್ಯದ ಉಪಾಸಕತ್ವೇನ ಶ್ರವಣರೂಪವಾದ ಸಾಧಕಚೈತನ್ಯವನ್ನು ಪ್ರಮಾಣವೆಂದು ಸೂಚಿಸಲ್ಪಡುತ್ತದೆಯೆಂದು ಸಮಾಧಾನಮಾಡಿಕೊಳ್ಳ ತಕ್ಕದ್ದು. ಈ ವಿಧವಾದ ಶ್ರವಣವು ಅನೇಕಾರ್ಥಗಳನ್ನು ಪ್ರತಿಪಾದಿಸುವ ಅನೇಕ ವಾಕ್ಯಗಳ ಕ್ರಮವನ್ನು ಅನುಸರಿಸುವುದರಿಂದ ಬಹುಕಾಲದ ಮೇಲೆಯೇ ಸಿದ್ಧಿಹೊಂದುತ್ತದೆ. ಶ್ರವಣ ಸಿದ್ಧವಾದಮೇಲೆಯೇ ಮನನಕ್ಕೆ ಅವಕಾಶವು. ಅದು ಸಿದ್ಧವಾಗಲು ಅನೇಕ ಸಾಧ್ಯಗಳಿರುವುದರಿಂದ ಬಹು-ಕಾಲವಾಗಿ, ಅನಂತರ ಧ್ಯಾನವು ಉಂಟಾಗುವುದು. ಧ್ಯಾನತ್ವವೆಂದರೆ ಆತ್ಮಚೈತನ್ಯದ ಮನನಸಿದ್ಧವಾದ ವಸ್ತುವಿನಲ್ಲಿ ಒಂದಾಶ್ರಯದಲ್ಲಿಯೇ ಪ್ರಕಾಶವಾಗುವಿಕೆ. ಈ ಧ್ಯಾನವೇ ಗ್ರಾಹ್ಯಗ್ರಾಹಕಗಳ ಸಾಮೀಪ್ಯಸ್ವಭಾವ ದಿಂದ ಯೋಗವೆನ್ನಲ್ಪಡುತ್ತದೆ. ಈ ಯೋಗವೂ ಸಾಲಂಬ ಮತ್ತು ನಿರಾಲಂಬವೆಂದು ಎರಡು ವಿಧವು. ಮೊದಲನೆಯದು ಸವಿಕಲ್ಪಕಸಾಕ್ಷಾ-

ತ್ಕಾರಕ್ಕೆ ಹೇತುವಾದ ಸಕಲಧ್ಯಾನವು. ಎರಡನೆಯದು ನಿರ್ವಿಕಲ್ಪಕ-ಪ್ರತ್ಯಕ್ಷವನ್ನುಂಟುಮಾಡುವ ನಿಷ್ಕಲಧ್ಯಾನವು. ಇದು ಬೇರೆ ಪ್ರಮಾಣವೆಂದು ಹೇಳುವುದೇ ಯುಕ್ತವಾಗುತ್ತದೆ; ಆದರೂ ಪ್ರತ್ಯಕ್ಷಕ್ಕೆ ಸಮೀಪವಾದ್ದರಿಂದ ಅದರಲ್ಲಿಯೇ ಸೇರಿದುದೆಂದು ಭಾವಿಸಿದ ಆಚಾರ್ಯರುಗಳಿಂದ ಬೇರೆಯಾಗಿ ಗಣಿಸಲ್ಪಟ್ಟಿಲ್ಲ. ಈ ಕಾರಣದಿಂದಲೇ ಧ್ಯಾನಿಗಳಿಗೂ ಆಚಾರ್ಯತ್ವವು ಕಂಡು ಬರುತ್ತದೆ.

ಮತ್ತೆ ಒಂದೇ ಆದ ಶಕ್ತಿಗೆ ಉಪಜೀವ್ಯ-ಉಪಜೀವಕ ಎಂದು ಅನೇಕ ರೀತಿಯಲ್ಲಿ ಇರುವಿಕೆಯು ಹೇಗೆ ಸಂಗತವಾಗುವುದು ? ಎಂದರೆ ಹೇಳುತ್ತೇವೆ —ಸಹಜವಾಗಿ ನಿರೋಧಕವಾದ ನೀಹಾರವು ಆ ಶಕ್ತಿಯದೇ ಆಗಿದೆ: ಮತ್ತು ಅದನ್ನು ಪರಿಹರಿಸುವ ಪರಿಪಾಕವೂ ಆಶ್ಚರ್ಯಕರವೆಂದೇ ಹೇಳಲ್ಪಟ್ಟಿದೆ. ಆ ಪರಿಪಾಕಕ್ಕೆ ಅನುಗುಣವಾಗಿ ಅಂತಃಕರಣದ ವೃತ್ತಿಗಳೂ ವಿಚಿತ್ರವಾಗಿವೆ. ಆದುದರಿಂದ ಅಂಥ ಅಂತಃಕರಣದಿಂದ ಅವಿಚ್ಛಿನ್ನವಾಗಿರುವ ಚಿಚ್ಛಕ್ತಿಗೆ ಅನೇಕ ವಿಧದಲ್ಲಿ ಇರುವಿಕೆಯಲ್ಲಿ ಯಾವ ಅಯುಕ್ತತೆಯೂ ಇರುವುದಿಲ್ಲ. ಹೀಗಾಗುವ ಪಕ್ಷದಲ್ಲಿ ಮಲದ ಅಪಾಕದಶೆಗಿಂತಲೂ ಪಾಕದಶೆಯಲ್ಲಿ ವಿಶೇಷ ವೇನು? ಎಂದು ಸಂಶಯಪಡಲಾಗದು. ನಿವೃತ್ತ್ಯುನ್ಮುಖವಾದ ಚೈತನ್ಯಕ್ಕೆ, ಪ್ರವೃತ್ತ್ಯುನ್ಮುಖವಾದ ಚೈತನ್ಯಕ್ಕೆ ಹೇಗೋ ಹಾಗೆ, ಸಂಶಯ-ವಿಪರ್ಯಯ, ಸ್ಮೃತಿರೂಪವಿರುವುದಿಲ್ಲ. ಆದುದರಿಂದಲೇ ಪಶ್ವಾತ್ಯಾದಿಪ್ರತ್ಯಕ್ಷಾದಿಗಳು ಪ್ರಮಾಣಗಳಲ್ಲವೆಂದು ಸಿದ್ಧಾಂತವು.

ಇಂಥ ಪ್ರತ್ಯಕ್ಷಾದಿಗಳಲ್ಲಿಯೂ ಸಂಶಯಾದಿರಹಿತವಾದ ಯಥಾರ್ಥಾನುಭವವು ಸಂಭವಿಸುವುದು; ಇವುಗಳಿಗೆ ಪ್ರಾಮಾಣ್ಯದ ತಿರಸ್ಕಾರವು ಏಕೆ?-ಎಂದರೆ; ಧೈರ್ಯದಿಂದ ಕೇಳಬೇಕು! ಪಶ್ವಾತ್ಯರ ಪ್ರಮಾಣಗಳಲ್ಲಿ ಪ್ರತ್ಯಕ್ಷವೆಂದರೆ ಅಂತಃಕರಣಸಂಬಂಧವುಳ್ಳ ಚೈತನ್ಯಕ್ಕೆ ಚಕ್ಷುರಾದಿ ಇಂದ್ರಿಯಗಳ ಮೂಲಕವೇ ಬಾಹ್ಯಾರ್ಥಗಳ ಗ್ರಹಣವು. ಬಾಹ್ಯಾರ್ಥಗಳು ಪೃಥಿವೀಮೊದಲಾದ ಪಂಚಭೂತಗಳ ಪರಿಣಾಮಗಳಾದ ಸ್ಥಾವರಜಂಗಮಗಳ ಸಮೂಹವು. ಇಲ್ಲಿ ಇವುಗಳನ್ನು ನೋಡತಕ್ಕವರಿಗೆ ಯಾರಿಗೂ ಯಾವ ವಿಷಯದಲ್ಲಿಯೂ ಒಂದೇಪ್ರಕಾರವಾದ ಜ್ಞಾನವು ಸಂಭವಿಸುವುದಿಲ್ಲ; ನೋಡಿ.

-ಎಲ್ಲ ಪದಾರ್ಥಗಳೂ ಸತ್ಯವೆಂದು ಮೀಮಾಂಸಕರು ಹೊಗಳುತ್ತಾರೆ; ಉತ್ತರಮೀಮಾಂಸಕರು ಅಸತ್ಯಗಳೆಂದು ಹೇಳುತ್ತಾರೆ. ನೈಯಾಯಿಕರು ಇವುಗಳಲ್ಲಿ ಕೆಲವು ಸತ್ಯಗಳು, ಕೆಲವು ಅಸತ್ಯಗಳು ಎನ್ನುವರು; ಎಲ್ಲ ವಸ್ತುಗಳೂ ಎರಡು ವಿಧಗಳಾಗಿವೆ ಎಂದು ಜೈನರು ಹೇಳುವರು. ಕ್ಷಣಿಕಗಳೆಂದು ಬೌದ್ಧರು—ಈರೀತಿಯಲ್ಲಿ ಹಲವಾರು ವಾದಿಗಳು ಜಗತ್ತನ್ನು ಬೇರೆ ಬೇರೆ ವಿಧವಾಗಿ ತಿಳಿದಿದ್ದಾರೆ. ಇವರುಗಳ ಇಂದ್ರಿಯಗಳು ಭ್ರಾಂತಿಯನ್ನುಂಟು ಮಾಡತಕ್ಕವು. ಏಕೆಂದರೆ ಪರಸ್ಪರ ವಿರುದ್ಧವಾಗಿ ಪದಾರ್ಥಗಳನ್ನು ತೋರಿಸುತ್ತದೆ. ಅದರಿಂದ ತಿಳಿದುಬರುವ ಸತ್ವಾದಿಹೇತುಗಳಿಂದ ಅನುಮಾನ ಮಾಡಲ್ಪಡುವ ಜಗದ್ಧರ್ಮಗಳಾದ ಅಕರ್ತೃಕತ್ವ, ಅವಿದ್ಯಾಕರ್ತೃಕತ್ವ, ಅಣುಕಾರ್ಯತ್ವ, ಅನಿರ್ವಚನೀಯತ್ವ, ಆಶಯಜನ್ಯತ್ವ—ಇವೇ ಮೊದಲಾದವುಗಳೂ ವಿರುದ್ಧಗಳು. ಈ ಅನುಮಾನದಿಂದ ತಿಳಿದುಬಂದ ಅರ್ಥವನ್ನು ಉಪಾಸನೆಮಾಡಲು ಪ್ರವೃತ್ತಗಳಾಗಿರುವ ಅವರುಗಳ ಆಗಮಗಳೂ ಸಹ ಹಾಗೆಯೇ—ಎಂದು. ಪ್ರತ್ಯಕ್ಷ-ಅನುಮಾನ-ಶಬ್ದವೆಂದು ಹೇಳಲ್ಪಡುವ, ಇವುಗಳಲ್ಲಿಯೇ ಅಂತರ್ಭೂತಗಳಾಗಿರಲು ಯೋಗ್ಯಗಳಾದ ಇತರ ಉಪಮಾನಾರ್ಥಾಪತ್ತಿ ಮುಂತಾದ ಮೋಹಕವ್ಯಂಜಕಗಳ ಅಪೇಕ್ಷೆಯುಳ್ಳದ್ದರಿಂದ ಸ್ವಪ್ನಸಮಾನಗಳಾದ ಪಶ್ವಾತ್ಮರ ಜ್ಞಾನಗಳಿಗೆ ಪ್ರಾಮಾಣ್ಯವನ್ನು ಹೇಳುವುದು ಸಾಕು!

ಹಾಗಾದರೆ ಶುದ್ಧೇಂದ್ರಿಯದ ದ್ವಾರವನ್ನುಳ್ಳ ಸಾಧಕಚೈತನ್ಯಕ್ಕೆ ಬಾಹ್ಯಾರ್ಥಗಳ ವಿಷಯದಲ್ಲಿ ಪ್ರತ್ಯಕ್ಷತ್ವವನ್ನು ಒಡಂಬಡಬಹುದಲ್ಲವೆ;—ಎಂದರೆ, ಅದು ಸರಿಯಲ್ಲ. ಅವನ ಇಂದ್ರಿಯಗಳಿಗೆ ಶ್ರವಣಾದಿಕಾಲದಲ್ಲಿ ಮೋಹಕೇಂದ್ರಿಯದ ಜಯದಲ್ಲಿ ಮಾತ್ರ ಸಾಮರ್ಥ್ಯವಿರುವುದರಿಂದ, ಬಾಹ್ಯಾರ್ಥಗಳನ್ನು ಸ್ಪಷ್ಟಪಡಿಸಲು ಪ್ರೌಢತ್ವವು ಉಂಟಾಗಿರುವುದಿಲ್ಲ. ಮತ್ತೆ ಮೋಹಕದೇಹವಿರುವವರೆಗೂ ಬೋಧಕದೇಹವು ಉಂಟಾಗಲಾರದು ಎಂದು ಕೇಳಬಾರದು; ಸರ್ಪದ ಪೊರೆಯ ದೃಷ್ಟಾಂತದಂತೆ, ಹೊರಗಿನ ಕಂಚುಕವು ಪರಿಣಾಮಹೊಂದುವ ಕಾಲದಲ್ಲಿಯೇ ಒಳಗಿನ ಕಂಚುಕದ ಹುಟ್ಟುವಿಕೆಯನ್ನು ಹೇಳುವುದು ಸುಲಭವೇ ಆಗಿದೆ. ಈರೀತಿಯಾಗಿ ನಿತ್ಯ, ನಿರ್ಮಲ,

ನಿರತಿಶಯ, ವಿಶ್ವಾತ್ಮಗೋಚರವಾದ ಈಶ್ವರ ಚೈತನ್ಯವು ವ್ಯವಸ್ಥಿತವಾದುದು; ಆತನ ಅನುಗ್ರಹದಿಂದ ನಿರ್ಮಲವಾಗಿ ಮಾಡಲ್ಪಟ್ಟ ಮತ್ತು ನಿರ್ಮಲಮಾಡಲ್ಪಡುವ ಆತ್ಮಚೈತನ್ಯವು ನಮಗೆ ಪ್ರಮಾಣವು ಎಂದು ಪ್ರಮಾಣಲಕ್ಷಣವು.

ಶ್ರೀಶೈವಸಿದ್ಧಾಂತಪರಿಭಾಷೆಯಲ್ಲಿ ಪ್ರಮಾಣಪರಿಚ್ಛೇದವು
ಸಮಾಪ್ತವು.

ಪತಿಪರಿಚ್ಛೇದ

ಈಗ ಹಿಂದೆ ಲಕ್ಷಣವತ್ತಾಗಿ ನಿರೂಪಿತವಾದ ಪ್ರಮಾಣಗಳಿಂದ ತಿಳಿದುಬರುವ ಪದಾರ್ಥಗಳನ್ನು ನಿರೂಪಿಸುತ್ತೇವೆ. ಇವು ಪತಿ, ಪಶು, ಪಾಶ ಎಂದು ಮೂರು ವಿಧವಾಗಿವೆ. ಅವುಗಳಲ್ಲಿ ಪತಿಯು ಶಿವನೆಂದು ಹೇಳಲ್ಪಡುತ್ತಾನೆ. ಇಲ್ಲಿ ಶಿವತ್ವವೆಂದರೆ ಸರ್ವವಿಷಯಗಳ ಸಂಬಂಧವಾದ ಜ್ಞಾನ, ಕ್ರಿಯಾ ಮತ್ತು ಶಕ್ತಿಯಿಂದ ಯುಕ್ತವಾಗಿರುವಿಕೆಯು. ಈ ಲಕ್ಷಣವು ತಾಮ್ರದಲ್ಲಿನ ಕಿಲುಬಿನಂತೆ ಪಶುವಿಗೂ ಆವೃತವಾಗಿ ಇರುತ್ತದೆ; ಆದರೂ ಆ ಕಿಲುಬಿಗೆ ಸಮಾನವಾದ ಮಲದಿಂದ ಅಡಗಿಹೋಗಿರುವುದರಿಂದ ಇಲ್ಲದೇಇರುವುದಕ್ಕೇ ಸಮಾನವಾಗಿರುತ್ತದಾಗಿ ಈ ಲಕ್ಷಣಕ್ಕೆ ಇಲ್ಲಿ ಅತಿವ್ಯಾಪ್ತಿಯಿಲ್ಲ. ಅಥವಾ ಸ್ವಾತಂತ್ರ್ಯವೇ ಪತಿಯ ಅಸಾಧಾರಣವಾದ ಧರ್ಮವು. ಇದು ಅನಾದಿಕಾಲದಿಂದಲೂ ಸಂಬಂಧಹೊಂದಿರುವ ಜಡಸಮಾನವೂ, ಜಡಸ್ವರೂಪವೂ ಆಗಿರುವ ಪಶು ಮತ್ತು ಪಾಶಗಳಿಗೆ ಅಸಂಭಾವಿತವು. ಸ್ವಾತಂತ್ರ್ಯವೆಂದರೆ ಇತರ ಯಾವುದರಿಂದಲೂ ಪ್ರೇರಿತವಾಗದೇ ಇದ್ದು ಸರ್ವವನ್ನೂ ಪ್ರೇರಿಸುವ ಸಾಮರ್ಥ್ಯವು. ಇದು ಪಶು ಮತ್ತು ಪಾಶಗಳನ್ನು ಪ್ರೇರಿಸುವ ಪರಮೈಶ್ವರ್ಯ-ಸ್ವರೂಪವು ಯಾವಾಗಲೂ ಅಭಿವ್ಯಕ್ತವಾಗಿರುವ ಪತಿಯಲ್ಲಿಯೇ ಪ್ರಸಿದ್ಧವು.

ಪರಮಶಿವ ಮತ್ತು ಆತ್ಮಶಿವನೆಂದು ಪತಿಯು ಎರಡುವಿಧವಾಗಿದ್ದಾನೆ. ಅವರಲ್ಲಿ ಪರಮಶಿವನು ಸ್ವಾಭಾವಿಕವಾಗಿಯೇ ಸ್ವಾತಂತ್ರ್ಯಶಾಲಿಯು; ಅವನಿಗೆ ಅನುಗ್ರಹಮಾಡುವ ಬೇರೊಬ್ಬನನ್ನು ಅಂಗೀಕರಿಸಿದರೆ, ಅನವಸ್ಥಾ ದೋಷವು ಪ್ರಾಪ್ತವಾಗುತ್ತದೆ. ಇವನು ಒಬ್ಬನೇ ಆಗಿ, ಅನಾದಿಸಿದ್ಧವಾದ ಪಂಚಕೃತ್ಯಗಳನ್ನು ನೆರವೇರಿಸುತ್ತಾ ಪಂಚಮಂತ್ರಶರೀರನಾಗಿ, ಆಚಾರ್ಯಾದಿ-ಗಳಿಂದ ಧ್ಯಾನಮಾಡಲ್ಪಡತಕ್ಕವನು. ಈತನ ಅನುಗ್ರಹದಿಂದ ಸ್ವಾತಂತ್ರ್ಯವನ್ನು ಪಡೆದ ಅನೇಕ ಆತ್ಮಶಿವರುಗಳ ಮಧ್ಯದಲ್ಲಿ, ಲಯವಂತರಿಗೆ ಸ್ವಾರ್ಥ-ನಿಷ್ಕಾರಾದಕಾರಣ ಅಧಿಕಾರಬಿಟ್ಟಿರುವುದರಿಂದ, ಮೂರ್ತಿಕಲ್ಪನೆಯಲ್ಲಿ ಪ್ರಯೋಜನವಿರುವುದಿಲ್ಲ. ಭೋಗವುಳ್ಳವರಿಗೂ ಮತ್ತು ಅಧಿಕಾರವುಳ್ಳವರಿಗೂ ಬೈಂದವದೇಹಸಂಬಂಧವಿರುವುದು. ಮಂತ್ರಗಳೂ ಸಹ ಶಿವನಲ್ಲಿ

ತಾದಾತ್ಮ್ಯಸಂಬಂಧದಿಂದ ಇರುವ ಶಕ್ತಿಗಳೇ ಆಗಿವೆ. ಇವುಗಳಿಂದಲೇ ಈಶಾನಾದಿಹೆಸರುಗಳಿಂದ ಹೇಳಲ್ಪಡುವ ಈತನ ಶಿರಸ್ಸೇ ಮೊದಲಾದ ಆಕಾರವುಳ್ಳ ಮೂರ್ತಿಯು ಪರಿಕಲ್ಪಿಸಲ್ಪಡುವುದು. ಹೇಗೆಂದರೆ ನಿತ್ಯ-ನಿರ್ಮಲ ನಿರತಿಶಯಚೈತನ್ಯಯುಕ್ತನಾದ ಶಿವನು ನಿರ್ವಿಕಾರನಾದ್ದರಿಂದ, ಈತನಿಗೆ ಅನಿತ್ಯವೂ ಮಲಯುಕ್ತವೂ ಸಾತಿಶಯವೂ ಆದ ಜಡಶರೀರದ ಭಾವನೆಯು ಯುಕ್ತವಾಗುವುದಿಲ್ಲ. ಆದುದರಿಂದ ತನ್ನ ಸಂಬಂಧವುಳ್ಳ ಶಕ್ತಿಮಯವಾದ ತೇಜಸ್ಸೇ ಅಶರೀರನಾದ ಶಿವನ ಶರೀರವೆಂದು ಭಾವನೆ ಮಾಡುತ್ತಾ, ಸಾಧಕರು ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ: ಅವರಿಗೆ ಈ ಭಾವನೆಯಿಲ್ಲದೆ ಕಾರ್ಯಸಿದ್ಧಿಯಾಗದು. ಈ ಶಕ್ತಿಯು ವಸ್ತುತಃ ಒಂದೇ ಆದರೂ, ಜ್ಞೇಯವಾದ ಕಾರ್ಯದ ಉಪಾಧಿಭೇದದಿಂದ ಜ್ಞಾನ ಮತ್ತು ಕ್ರಿಯಾಭೇದವನ್ನು ಹೊಂದುತ್ತದೆ. ಈ ಪ್ರಕಾರವಾಗಿ ಪ್ರಯೋಜಕಭೇದದ ಅನಂತತ್ವದಿಂದ ಆನಂತ್ಯವನ್ನು ಹೊಂದಿರುವ ಈ ಶಕ್ತಿಗಳಲ್ಲಿ, ಮೊದಲನೆಯದರಿಂದ ಬೇರ್ಪಡದ ಎರಡನೆಯ ಶಕ್ತಿಯು ಜಗತ್ತಿನ ಉತ್ಪತ್ತಿಮೊದಲಾದ ವ್ಯಾಪಾರಪಂಚಕವಶದಿಂದ ಐದುವಿಧವಾದ ಭೇದವನ್ನು ಹೊಂದುತ್ತದೆ. ಆದುದರಿಂದಲೇ ಭೇದಗಳು ಮನನ ಮತ್ತು ತ್ರಾಣರೂಪಗಳಾದ್ದರಿಂದ 'ಮಂತ್ರಗಳು' ಎಂದು ಹೊಗಳಲ್ಪಡುತ್ತವೆ. ಹೀಗೆ ಪಂಚ-ಮಂತ್ರಶರೀರನಾದ ಈಶ್ವರನು ಅನಂತನೇ ಮೊದಲಾದ ಅಧಿಕಾರಿಗಳಲ್ಲಿ ಸನ್ನಿಹಿತನಾಗಿರುತ್ತಾ ಅಧಿಕಾರಿಯೆನಿಸುತ್ತಾನೆ.

ಅಧಿಕಾರಿಗಳು ಯಾರು ಯಾರು ಎಂದರೆ, ಹೇಳುತ್ತೇವೆ. ಸಾಕ್ಷಾ-ತ್ತಾಗಿಯೋ ಪರಂಪರೆಯಿಂದಲೋ ಪರಮೇಶ್ವರನಿಂದ ಸಿದ್ಧಾಂತವನ್ನು ಪಡೆದು ಸರ್ವಜ್ಞತ್ವಾದಿಗುಣಶಾಲಿಗಳಾಗಿ ಮಲಪರಿಪಾಕವು ಪೂರ್ಣವಾಗಿದ್ದಾಗ್ಯೂ ಅಧಿಕಾರಮಲವು ಉಳಿದಿರುವುದರಿಂದ, ಪಶುಗಳಿಗೆ ಅನುಗ್ರಹ ಮಾಡುವ ಅಧಿಕಾರಕ್ಕಾಗಿ ಅಭಿಷೇಕಸಹಿತವಾದ ದೀಕ್ಷೆಯಲ್ಲಿ ಯಾರು ದೀಕ್ಷೆ ಹೊಂದಿರುತ್ತಾರೋ, ಇವರೇ ಅಧಿಕಾರಿಗಳು, ಅಪರಪತಿಗಳು, ಆತ್ಮ-ಶಿವಾಚಾರ್ಯರು ಎಂದು ಕರೆಯಲ್ಪಡುತ್ತಾರೆ. ಇಂಥ ಅಧಿಕಾರಿಗಳಲ್ಲಿ, ಸಾಕ್ಷಾತ್ತಾಗಿ ಈಶ್ವರನಿಂದಲೇ ಸೃಷ್ಟಿಯ ಆದಿಯಲ್ಲಿ ವಿಜ್ಞಾನಕೇವಲಾವಸ್ಥೆ

ಯಲ್ಲಿ ಅನುಗ್ರಹಿಸಲ್ಪಟ್ಟ ಮಂತ್ರೇಶ್ವರತ್ವದಲ್ಲಿ ವಿನಿಯೋಜಿತರಾಗಿ ಈಶ್ವರ-ತತ್ವದಲ್ಲಿ ವಾಸಮಾಡುವ ಅನಂತ ಮೊದಲಾದ ಎಂಟು ಮಂದಿಗಳು ಪ್ರಸಿದ್ಧರಾಗಿದ್ದಾರೆ.

ಹಾಗೆಯೇ ಶುದ್ಧವಿದ್ಯೆಯಲ್ಲಿ ಮಂತ್ರತ್ವದಲ್ಲಿ ನಿಯುಕ್ತರಾದ ಏಳು ಕೋಟಿ ಮಂದಿಗಳೂ; ಇದರಂತೆಯೇ ಪ್ರಳಯಕೇವಲಾವಸ್ಥೆಯಲ್ಲಿ ನಿರ್ಮಲಗೊಳಿಸಲ್ಪಟ್ಟ ಮಂತ್ರೇಶ್ವರತ್ವದಲ್ಲಿ ನಿಯುಕ್ತರಾದ ಕಲಾಮುಂತಾದ ಪೃಥಿವೀವರೆಗಿನ ತತ್ವಪಂಕ್ತಿಯಲ್ಲಿರುವ ಮಂಡಲಿಮೊದಲಾದ ನೂರಹದಿ-ನೆಂಟು ಮಂದಿಗಳೂ; ಪರಂಪರೆಯಿಂದ ಸಕಲಾವಸ್ಥೆಯಲ್ಲಿ ಅನಂತಾದಿಗಳ ಮೂಲಕವಾಗಿ ಅನುಗ್ರಹಿಸಲ್ಪಟ್ಟ ಬ್ರಹ್ಮಾಂಡಾಧಿಪತ್ಯದಲ್ಲಿ ಇರಿಸಲ್ಪಟ್ಟ ಶ್ರೀಕಂಠಮೊದಲಾದ ಅನೇಕಮಂದಿ ರುದ್ರರೂ, ಹೀಗೆಯೇ ಅವರ ಮೂಲಕವಾಗಿ ಅನುಗ್ರಹಿಸಲ್ಪಟ್ಟ ಕೆಲವು ದೇವತೆಗಳೂ; ಇವರಿಂದ ಅನುಗೃಹೀತರಾದ ಕೆಲವು ಮಂದಿ ಮನುಷ್ಯರೂ ಅಧಿಕಾರಿಗಳಾಗಿದ್ದಾರೆ. ಇದನ್ನೆಲ್ಲಾ ಗುರುಪಾರಂಪರ್ಯವನ್ನು ಪ್ರತಿಪಾದಿಸುವ ಗ್ರಂಥಗಳಿಂದ ತಿಳಿಯತಕ್ಕದ್ದು.

ರುದ್ರರೇ ಮೊದಲಾದವರೆಲ್ಲರೂ ಸಕಲಾವಸ್ಥೆಯಲ್ಲಿ ನಾಲ್ಕು ವಿಧವಾದ ಶಕ್ತಿಪಾತಕ್ಕೆ ತಕ್ಕಂತೆ ಅನುಗೃಹೀತರಾಗುತ್ತಾರೆ. ಸ್ಥಿತಿಕಾಲದಲ್ಲಿಯೇ ಇವರುಗಳ ಮಲಪಾಕವು ಉಂಟಾಗುತ್ತದೆ. ಇಲ್ಲಿಯೇ ಮುಕ್ತಿಬೀಜವನ್ನು ಹೊಂದಿದವರಿಗೇನೇ ಕ್ರಮವಾಗಿ ಮುಕ್ತಿಯು ಸಂಭವಿಸುತ್ತದೆ. ಸ್ಥಿತಿಯ ಕೊನೆಯಲ್ಲಾಗಲಿ, ಪ್ರಳಯದಲ್ಲಾಗಲಿ ಅನುಗೃಹೀತರಾದವರಲ್ಲಿ ಅಧಿಕಾರಿಗಳಿರುವುದಿಲ್ಲ; ಏಕೆಂದರೆ, ಆಗ ಮಲಪಾಕವನ್ನು ಪಡೆದವರಿಗೆ ಆಗಲೇ ಪರಮೋಕ್ಷವು ಲಭಿಸುತ್ತದೆ. ಆದಕಾರಣ ಆ ಎಲ್ಲ ಅಧಿಕಾರಿಗಳಿಗೂ ಪತಿ ಪದಾರ್ಥದಲ್ಲಿಯೇ ಅಂತರ್ಭಾವವುಂಟಾಗುವುದು; ಸರ್ವಜ್ಞತ್ವಾದಿಗಳು ಇವರಿಗೆಲ್ಲಾ ಸಮಾನವಾಗಿದ್ದು, ಪತಿಯ ಕಾರ್ಯಗಳಲ್ಲಿ ಸಮರ್ಥರಾಗುತ್ತಾರೆ.

ಮುಂದೆ ಹೇಳುವ ಲಕ್ಷಣಗಳನ್ನುಳ್ಳ ಪಶುಗಳಲ್ಲಿ ಪಕ್ವ ಮತ್ತು ಅಪಕ್ವ ಮಲಗಳುಳ್ಳ ಎರಡುಗುಂಪುಗಳಿಗೂ ಕ್ರಮವಾಗಿ ಶುದ್ಧ ಮತ್ತು ಅಶುದ್ಧ ಭೋಗ

ವುಂಟಾಗುವುದಕ್ಕಾಗಿ, ಬಿಂದು ಮತ್ತು ಮಾಯೆಯಿಂದ ಉತ್ಪನ್ನಗಳಾದ ದೇಹ, ಇಂದ್ರಿಯ, ಭುವನಗಳೊಡನೆ ಸಂಬಂಧವುಂಟಾಗುವಿಕೆಯೆಂಬ **ಸೃಷ್ಟಿಯೂ**; ಅಲ್ಲಿ ಭೋಗರೂಪವಾದ **ಸ್ಥಿತಿಯೂ**, ಅನಂತರ ವಿಶ್ರಾಂತಿಗಾಗಿ ಆ ಭೋಗದಿಂದ ಬಿಡುಗಡೆಯ ರೂಪವಾದ **ಸಂಹಾರವೂ**; ಆ ಭೋಗಗಳಲ್ಲಿ ಹೇಯತಾಜ್ಞಾನವು ಬರದಂತೆ ತಡೆಯುವಿಕೆಯರೂಪವಾದ **ತಿರೋಧಾನವೂ**; ಹಾಗೆಯೇ ಜ್ಞಾನವನ್ನುಂಟುಮಾಡುವಿಕೆಯ ಮೂಲಕವಾಗಿ ಸ್ವಾತಂತ್ರ್ಯವನ್ನು ಹೊಂದಿಸಿಕೊಡುವಂಥ **ಅನುಗ್ರಹವೂ**—ಈ ರೂಪವಾಗಿ ಅಧಿಕಾರವು ಐದು ವಿಧವಾಗಿರುವುದು. ಈ ಪಂಚಕೃತ್ಯರೂಪವಾದ ಅಧಿಕಾರವು ಅನಾದಿಮುಕ್ತನಾದ ಈಶ್ವರನಿಗೆ ಅಸಾಧಾರಣವಾಗಿರುತ್ತಾ, ಶುದ್ಧರಾದವರಲ್ಲಿ ಸಾಕ್ಷಾತ್ತಾಗಿ ಸಂಭವಿಸುತ್ತದೆ; ಅಶುದ್ಧರಲ್ಲಿ ಅನಂತಾದಿಗಳ ಮೂಲಕವಾಗಿಯೇ ಸಂಭವಿಸುತ್ತದೆ. ಹೀಗೆ ಇದು ಪತಿಯ ಅಧಿಕಾರಕ್ಕೆ ಮೊದಲನೆಯ ಅವಸರವು.

ಎರಡನೆಯದು ಭೋಗಾವಸರವು. ಈ ಲೋಕದಲ್ಲಿ ಯಾರೋ ಕೆಲವರು ಯಾವುದೋ ಯೋಗ್ಯತಾತಿಶಯದಿಂದ ಅಧಿಕಾರದಿಂದ ಉತ್ತೀರ್ಣರಾಗಿ ಶಬ್ದಭೋಗಬಂದರಲ್ಲಿಯೇ ಆಸಕ್ತಿಯುಳ್ಳವರಾಗಿ ಶಕ್ತಿಸದಾಶಿವತತ್ತ್ವವನ್ನು ಆಶ್ರಯಿಸಿಕೊಂಡು ಆತ್ಮಶಿವರು ಎಂದು ಆಗಮಗಳಲ್ಲಿ ಕೇಳುತ್ತೇವಷ್ಟೆ; ಇವರೇ ಭೋಗಿಗಳು. ಇವರುಗಳಲ್ಲಿ ಸಾನ್ನಿಧ್ಯಹೊಂದಿರುವ ಪರಶಿವನೂ ಭೋಗೀ ಎನ್ನಿಸುತ್ತಾನೆ.

ಲಯಾವಸರವು ಮೂರನೆಯದು. ಇದು ಆತ್ಮಶಿವರಿಗೆ ಕಾಲಕ್ರಮದಲ್ಲಿ ಭೋಗದಿಂದ ಉತ್ತೀರ್ಣರಾಗಿ, ಆತ್ಯಂತಿಕಪಾಶವಿಶ್ಲೇಷ—ಆತ್ಯಂತಿಕಪರಿಪೂರ್ಣಸ್ವರೂಪಾವಿಷ್ಕಾರರೂಪವಾದ್ದರಿಂದ ಪರಮೋಕ್ಷವೆಂಬ ಶಬ್ದದಿಂದ ಹೇಳಲ್ಪಡುತ್ತದೆ. ಹಿಂದಿನ ಎರಡು ಅವಸರಗಳೂ, ಪಶುತ್ವದೃಷ್ಟಿಯಿಂದ ಮೋಕ್ಷವೆನಿಸುವುವಾದರೂ, ಬಂಧಕಗಳೆಂದೇ ನಿಶ್ಚಯಿಸಿ, ಗುರುಗಳಿಂದ ಸ್ವೇಷ್ಟಸಿದ್ಧಿಗಾಗಿ ಈಶ್ವರನು ಆರಾಧಿಸಲ್ಪಡುತ್ತಾನೆ. ಈ ರೀತಿಯಾಗಿ ಆತ್ಮಶಿವರ ಭೇದೋಪಾಧಿಯಿಂದ ಭೇದತ್ರಯವುಳ್ಳದ್ದಾಗಿ, ಇತರಪ್ರಕರಣಗಳಲ್ಲಿ

ಶಕ್ತ, ಉದ್ಯುಕ್ತ ಪ್ರವೃತ್ತ ಎಂದೂ; ನಿಷ್ಕಲ, ಸಕಲನಿಷ್ಕಲ, ಸಕಲ ಎಂದೂ ; ಶಿವ, ಸದಾಶಿವ, ಮಹೇಶ್ವರ ಎಂದೂ—ನಾನಾವಿಧಶಬ್ದಗಳಿಂದ ವ್ಯವಹರಿಸಲ್ಪಡುತ್ತಾನೆ.

ಪರಶಿವನಿಗೆ ಈ ಲಯಾದಿಭೇದತ್ರಯವು ಪರಿಗ್ರಹಶಕ್ತ್ಯುಪಾಧಿವಶ ದಿಂದ ಆದುದೆಂದು ಕೇಳುತ್ತೇವೆ; ಇದು ಆತ್ಮಶಿವೋಪಾಧಿಕೃತವೆಂಬುದು ಹೇಗೆ?—ಎಂದರೆ, ಹೌದು! ಈಶ್ವರನ ಪರಿಗ್ರಹಶಕ್ತಿಯೆಂದರೆ,—ಪರಾ, ಮಹಾಮಾಯಾ, ಕುಂಡಲಿನೀ, ಬಿಂದು—ಮುಂತಾದ ಶಬ್ದಗಳಿಂದ ಹೇಳಲ್ಪಡುವ ಶುದ್ಧಜಗತ್ತಿಗೆ ಉಪಾದಾನವಾದ ಶಿವತತ್ವವೇ. ಅದರ ಕಾರ್ಯವಾದ ಶಕ್ತಿಮೊದಲಾದ ನಾಲ್ಕು ತತ್ವಗಳಲ್ಲಿ ಕ್ರಮವಾಗಿ ಸ್ಥೂಲ ಮತ್ತು ಸೂಕ್ಷ್ಮ ಭೋಗಗಳಿಗೆ ಯೋಗ್ಯರಾದ ಶುದ್ಧಾತ್ಮರು ವ್ಯವಸ್ಥಿತರಾಗಿರು ತ್ತಾರೆ. ಅವರ ದೇಹ ಮತ್ತು ಕರಣಗಳೂ ಸಹ ಅದರಿಂದ ಉತ್ಪನ್ನವಾದವು ಗಳೇ ಆಗಿವೆ. ಆದಕಾರಣ, ಅಂಥ ಬಿಂದುವಿನ ಕಾರ್ಯಗಳಿಗೂ ಅಣು- ಶಿವರಿಗೂ ಅಂಗಾಂಗಿಭಾವಸಂಬಂಧವಾದ ಅಭೇದವ್ಯವಹಾರವಿರುವುದರಿಂದ ಪರಮಶಿವಭೇದಕತ್ವದಲ್ಲಿ ಸಾಧಾರಣ್ಯವನ್ನು ಹೇಳುವುದು ದೋಷವಲ್ಲ. ಆದುದರಿಂದ ತನ್ನ ಶಕ್ತಿಯಲ್ಲಿ ಯಾವಾಗಲೂ ಅಧಿಷ್ಠೇಯವಾದ ಬಿಂದುವಿನ ಅಶ್ವುಬ್ಧಾಂಶದಲ್ಲಿ ಸ್ಥೂಲಸೂಕ್ಷ್ಮಭಾಗಗಳಲ್ಲಿ ಕ್ರಮವಾಗಿ ಲಕ್ಷಿಸಲ್ಪಡುವ ಮೂರು ಪ್ರಕಾರಗಳಾದ ಅಣುವರ್ಗಗಳಿಂದ ಪ್ರತ್ಯೇಕವಾಗಿ ಉಪಲಕ್ಷ್ಯ- ಮಾಣನಾದ ನಿತ್ಯವಿಭುವಾದ ಶಂಭುವಿನ ಸಾನ್ನಿಧ್ಯವು ಯಾವಾಗಲೂ ಎಲ್ಲ ಕಡೆಯಲ್ಲಿಯೂ ಇರುತ್ತದಾದಕಾರಣ, ಶಂಭುವೂ ಮೂರುವಿಧವಾಗಿ ಭಿನ್ನ ನಾಗುತ್ತಾನೆಂದು ನಿಷ್ಕರ್ಷೆಯು.

ಬಿಂದುವೆಂಬ ಆ ಶಿವತತ್ವವು ಪರಮಶಿವನಿಗಿಂತಲೂ ಬೇರೆಯಾದ ತತ್ವವೇ ಆದರೂ, ಅವನ ಶಕ್ತಿಯೆಂದು ಹೇಗೆ ಒಡಂಬಡಲಾಗುವುದು— ಎಂದರೆ; ಕೇಳಿರಿ. ಪರಮಶಿವನು ಕರಣಭೂತವಾದ ತನಗೆ ಸಂಬಂಧ ಪಟ್ಟಿರುವ ಚಿಚ್ಛಕ್ತಿಯಿಂದ ಸ್ವಯಂ ಕರ್ತೃವಾಗಿರುವನು; ಈ ಶಿವತ್ವವು ಶುದ್ಧಜಗತ್ತಿನ ಉಪಾದಾನಕ್ಕಾಗಿ ನಿತ್ಯವಾದ ಪರಮೋಪಾದಾನವನ್ನು ಪರಿ

ಗ್ರಹಿಸುತ್ತದೆ. ಅನಂತರ ಆ ಶಕ್ತಿಪರಿಗೃಹೀತವಾಗಿ, ಅದರಿಂದ ವ್ಯಾಪಿಸಲ್ಪಟ್ಟು, ಅದರೊಡನೆ ಅಭೇದೋಪಚಾರದಿಂದ ಶಕ್ತಿಸಂಜ್ಞೆಯನ್ನು ಪಡೆಯುತ್ತದೆ. ಅಥವಾ ಶಕ್ತಿತತ್ವವೊದಲಾದ ಕಾರ್ಯಶಕ್ತಿಗಳ ಸಮಾಹಾರಾತ್ಮಕವಾದುದರಿಂದ ಶಕ್ತಿಸಂಜ್ಞೆಯುಳ್ಳದ್ದೆಂದು ತಿಳಿಯತಕ್ಕದ್ದು. ಉಪಾದಾನವಾಗಿ ಜಡವಾಗಿರುವಕಾರಣ, ಶಕ್ತಿಗೆ ಕರ್ತೃವಿನ ಅಧಿಷ್ಠಾನವಿಲ್ಲದೆಯೇ ಕಾರ್ಯಪರಿಣಾಮವು ಸಂಭವಿಸುವುದಿಲ್ಲ. ಅದರ ಕಾರ್ಯವೂ ಶಬ್ದ ಮತ್ತು ಅರ್ಥವೆಂದು ಎರಡು ವಿಧವಾಗಿದೆ. ಅದರಲ್ಲಿ ಮೊದಲನೆಯ ಶಬ್ದರೂಪವು ನಾದ, ಬಿಂದು, ವರ್ಣ—ಎಂದು ಮೂರು ಪ್ರಕಾರವಾಗಿದೆ; ಅರ್ಥಭುವನವೂ ಸಹ ಕಲಾ, ತತ್ವ, ಭುವನ—ಎಂಬುದಾಗಿ ಮೂರು ವಿಧವಾಗಿದೆ. ಈ ಶಬ್ದ ಮತ್ತು ಅರ್ಥಗಳಿಗೆ ಎಂದಿಗೂ ವ್ಯತ್ಯಾಸವಿಲ್ಲ. ಹೇಗೆಂದರೆ—

ಚಂದ್ರಕಿರಣಗಳಿಂದ ಕ್ಷುಬ್ಧವಾದ ಸಮುದ್ರದಲ್ಲಿ ತರಂಗರೇಖೆಯಂತೆ ಶಿವಶಕ್ತಿಕ್ಷೋಭಿತವಾದ ಬಿಂದುವಿನಿಂದ ಶಾಂತಿಯೆಂಬ ಸೂಕ್ಷ್ಮವಾದ ಯಾವುದೋಒಂದು ಕಲೆಯು ಉತ್ಪನ್ನವಾಗುವುದು. ಈ ಕಲೆಯಲ್ಲಿ ವಿದ್ಯಾ, ಪ್ರತಿಷ್ಠಾ, ನಿವೃತ್ತಿಯೆಂಬ ಹಿಂದುಹಿಂದಿನದಕ್ಕಿಂತಲೂ ಸ್ಥೂಲಾಕಾರಗಳಾದ ಮೂರು ಕಲೆಗಳು ಒಂದರಮುಂದೊಂದು ಹುಟ್ಟುವುವು. ಆಗ ಅದೇ ಬಿಂದುವಿನಿಂದ ಶಕ್ತಿಯೆಂಬ ತತ್ವವು, ಕರ್ತೃವಿನ ವ್ಯಾಪಾರಮಾತ್ರದಿಂದಲೇ ಶಾಂತಿಮತ್ತಾಗಿ ಉತ್ಪನ್ನವಾಗುತ್ತದೆ. ಅದರಿಂದ, ಸಾದಾಖ್ಯ, ಈಶ್ವರ, ಶುದ್ಧವಿದ್ಯೆಗಳೆಂಬ ಮೂರು ತತ್ವಗಳು, ಕರ್ತೃವಿನ ಜ್ಞಾನಕ್ರಿಯಾಸಾಮ್ಯದಿಂದಲೂ, ಕ್ರಿಯಾಧಿಕ್ಯದಿಂದಲೂ, ಜ್ಞಾನಾಧಿಕ್ಯದಿಂದಲೂ ಯಥಾಕ್ರಮವಾಗಿ ಜನಿಸುವುವು. ಹೀಗೆ ಕಲೆಗಳಿಗೆ ತತ್ವಾಧಾರವಾಗಿ ವಿನಿಯೋಗವು; ತತ್ವಗಳಿಗೆ ಭುವನಾಧಾರವಾಗಿಯೂ ಮತ್ತೂ ಶಬ್ದಾಧಾರವಾಗಿಯೂ—ವಿನಿಯೋಗವು—ಎಂದು ಭೇದವು. ಪರಮೋಪಾದಾನವಾದ ಇದಕ್ಕೆ, ಕಲಾತತ್ವಾತ್ಮಕವಾದ ಕಾರ್ಯವರ್ಗಗಳೆರಡರ ದೃಷ್ಟಿಯಿಂದ ಶಾಂತ್ಯತೀತ ಕಲೆಯೆಂದೂ ಶಿವತತ್ವವೆಂದೂ ಎರಡು ಹೆಸರುಗಳು ಉಂಟಾಗಿವೆ.

ಇಲ್ಲಿ ಶಕ್ತಿತತ್ವವು ಶಾಂತ್ಯತೀತಕಲೆಯಲ್ಲಿಯೇ ವ್ಯವಸ್ಥಿತವಾಗಿರುತ್ತದೆ; ಶಾಂತಿಕಲೆಯಲ್ಲಿ ಸಾದಾಖ್ಯೆಮೊದಲಾದ ಮೂರೂ ಇರುತ್ತವೆ. ವಿದ್ಯೆ ಮೊದ

ಲಾದ ಕಲೆಗಳು ಮಾಯಾಕಾರ್ಯಗಳಾದ ತತ್ವಗಳಿಗೆ ಆಧಾರಗಳೆಂಬುದನ್ನು ಮುಂದೆ ತಿಳಿಸುತ್ತೇವೆ. ಪರಮಕಾರಣವಾದ ವ್ಯೋಮಾಕಾರವಾದ ಶಿವ-ತತ್ವದಲ್ಲಿ ಎಲ್ಲ ಶಬ್ದಗಳಿಗೂ ಮೂಲಕಾರಣವೂ ಅತ್ಯಂತ ಸೂಕ್ಷ್ಮವೂ ಆದ ನಾದವು ಅಭಿವ್ಯಕ್ತವಾಗಿರುತ್ತದೆಂದು ಗುರುಗಳಿಂದ ಅನುಭವಿಸಲ್ಪಡುವುದು; ಆದುದರಿಂದಲೇ ಇದಕ್ಕೆ '**ಪರಾ**' ಎಂದು ಸಂಜ್ಞೆಯು. ಇದರಿಂದ ಶಕ್ತಿ-ತತ್ವವು ಆವಿರ್ಭವಿಸುವ ಕಾಲದಲ್ಲಿ ಎಲ್ಲ ಶಬ್ದಗಳ ಸಮುದಾಯರೂಪವಾದ ಸ್ಫೋಟವು ಕ್ಲಿನ್ನವಾಗಿ ಅಭಿವ್ಯಕ್ತವಾಗುತ್ತದೆ. ಇದರಿಂದ ಮಿಶ್ರಿತವಾದ ಶಕ್ತಿತತ್ವವು ಪರಬಿಂದು ಎಂದು ಸಂಜ್ಞೆಯುಳ್ಳದ್ದಾಗುವುದು. ಅನಂತರ ಧ್ವನಿಯು ಸಾದಾಖ್ಯದಿಂದ ಉತ್ಪನ್ನವಾಗಿ, ದಟ್ಟವಾಗಿ ಅಭಿವ್ಯಕ್ತವಾಗುವ ಕಾರಣ ಸ್ಥೂಲವಾಗಿ ಅನುಭವಗೋಚರವಾಗುತ್ತದೆ. ಆದುದರಿಂದ ಇದು **ಅಪರನಾದವೆನ್ನಲ್ಪಡುವುದು.** ಆಮೇಲೆ ಇದರಿಂದಲೇ ತತ್ವಾವಲಿಂಗನೆಯಿಂದ ವರ್ಣಸಮುದಾಯಾತ್ಮಕವಾದ ಅಕ್ಷರಬಿಂದುವು ಉಂಟಾಗುವುದು. ಇದೇ **ಅಪರಬಿಂದುವು.** ಇದರಿಂದ ಈಶ್ವರತತ್ವಾಶ್ರಯಿಗಳಾದ ಸೂಕ್ಷ್ಮವರ್ಣಗಳೂ; ಇವುಗಳಿಂದ ಶುದ್ಧವಿದ್ಯಾತತ್ವಾಶ್ರಯಿಗಳಾದ ಸ್ಥೂಲವರ್ಣಗಳೂ ಕ್ರಮವಾಗಿ ಉತ್ಪನ್ನವಾಗುತ್ತವೆ. ಇವೇ ಕಾರ್ಯತತ್ವಚತುಷ್ಟಯಾಶ್ರಯಗಳಾದ ನಾಲ್ಕು ವಿಧಗಳಾದ ಶಬ್ದಗಳು ಕ್ರಮವಾಗಿ **ಪರಾ, ಪಶ್ಯಂತೀ, ಮಧ್ಯಮಾ, ವೈಖರೀ,** ಎಂದು ನಾಲ್ಕು ಮಾತುಗಳ ರೂಪದಿಂದ ಪ್ರತ್ಯಾತ್ಮಶರೀರದಲ್ಲಿಯೂ ಕರ್ಮಾನುಸಾರವಾಗಿ ಅಭಿವ್ಯಕ್ತವಾಗಿ, ಸಮಸ್ತವಸ್ತುಗಳಿಗೂ ವಾಚಕಗಳಾಗುತ್ತವೆಂದು ತಿಳಿಯತಕ್ಕದ್ದು.

ಮತ್ತು ಆ ಶಕ್ತಿಯಲ್ಲಿ ಸೂಕ್ಷ್ಮಭೋಗಕ್ಕಾಗಿ ಅನಾಶ್ರಿತವೇ ಮೊದಲಾದ ಹದಿನೈದು ಭುವನಗಳೂ; ಸಾದಾಖ್ಯದಲ್ಲಿ ಸ್ಥೂಲಭೋಗಕ್ಕಾಗಿ ಸಾದಾಖ್ಯವೆಂಬ ಒಂದು ಭುವನವೂ; ಈಶ್ವರನಲ್ಲಿ ಸೂಕ್ಷ್ಮಭೋಗಾಧಿಕಾರಗಳಿಂದ ಅನಂತಾದಿಸಂಜ್ಞೆಗಳನ್ನುಳ್ಳ ಎಂಟುಭುವನಗಳೂ; ವಿದ್ಯೆಯಲ್ಲಿ ಸ್ಥೂಲಭೋಗಾಧಿಕಾರಗಳಿಂದ ಮನೋನ್ಮನ್ಯಾದಿ ಒಂಭತ್ತು ಭುವನಗಳೂ— ವ್ಯವಸ್ಥಿತಗಳಾಗಿರುತ್ತವೆ. ಮತ್ತು ಇವುಗಳಲ್ಲಿರುವ ಆ ಆ ಮಹಾತ್ಮರುಗಳು, ತತ್ವ ಮತ್ತು ಭುವನ ಈ ಎರಡು ರೂಪಗಳಿಂದಲೂ ಸೂಕ್ಷ್ಮ ಮತ್ತು

ಸ್ಥೂಲದೇಹಗಳಿಂದಲೂ, ಅಂಥ ಅಂಥ ಅನ್ಯಾದೃಶಗಳಾದ ಸೌಂದರ್ಯ, ಸ್ರಕ್, ಚಂದನ, ವನಿತಾದಿ ನಿರತಿಶಯಭೋಗಗಳಿಂದಲೂ ಸಂಪನ್ನರಾಗಿಯೂ ಮತ್ತು ಸ್ವಾತ್ಮಾನಂದಾನುಭವಶಾಲಿಗಳಾಗಿಯೂ ಇರುತ್ತಾರೆಂದು ಹೆಚ್ಚು ಹೇಳತಕ್ಕದ್ದೇನಿದೆ.

ಶ್ರೀಶೈವಸಿದ್ಧಾಂತಪರಿಭಾಷೆಯಲ್ಲಿ ಪತಿಪರಿಚ್ಛೇದವು ಸಮಾಪ್ತವು.

ಪಶುಪರಿಚ್ಛೇದ

ಪಶ್ವಾತ್ಮರು ಅನಂತರು ಚೇತನರು, ಪಾಶದಿಂದ ತಡೆಗಟ್ಟಿದ ಚೈತನ್ಯವುಳ್ಳವರು, ಪರಾಧೀನರು, ಪತಿಯ ಪ್ರವೃತ್ತಿಗೆ ವಿಷಯರಾದವರು, ಪತಿಯಿಂದ ಅನುಗ್ರಾಹ್ಯರು, ನಿತ್ಯರು, ವ್ಯಾಪಕರು—ಇತ್ಯಾದಿ ಲಕ್ಷಣವುಳ್ಳವರಾಗಿದ್ದಾರೆ. ಇವರು ಜ್ಞಾನಾಕಲ, ಪ್ರಳಯಾಕಲ, ಸಕಲ—ಎಂದು ಮೂರು ಪ್ರಕಾರವಾಗಿದ್ದಾರೆ. ಇವರುಗಳಲ್ಲಿ ಇವರ ಪಾರತಂತ್ರ್ಯಕ್ಕೆ ಕಾರಣವಾದ ಮಲ, ಕರ್ಮ ಮತ್ತು ಮಾಯೆಗಳೆಂಬ ಮೂರುಪಾಶಗಳಲ್ಲಿ ಕ್ರಮವಾಗಿ ಒಂದು, ಎರಡು ಮತ್ತು ಮೂರರ ಸಂಬಂಧವಿರುತ್ತದೆ. ಹೇಗೆಂದರೆ — ಇವರಲ್ಲಿ ಯಾರು ಕೆಲವರು ಸಾಮಾನ್ಯಶಾಸ್ತ್ರದಿಂದ ತಿಳಿದುಬಂದ ಜ್ಞಾನ, ಯೋಗ ಮತ್ತು ಸನ್ಯಾಸಗಳೆಂಬ ಉಪಾಯಗಳಿಂದಲೋ ಭೋಗದಿಂದಲೋ ಕ್ಷೀಣವಾದ ಸರ್ವಕರ್ಮಗಳನ್ನುಳ್ಳವರಾಗಿ ಆ ಕರ್ಮಭೋಗಸಾಧನಗಳಾದ ಮಾಯಾಕಾರ್ಯಗಳಾಗಿ ಮಾಯೇಯಗಳೆನಿಸುವ, ಸ್ಥೂಲ ಮತ್ತು ಸೂಕ್ಷ್ಮದೇಹಗಳಿಂದ ಆತ್ಯಂತಿಕವಾದ ಬಿಡುಗಡೆಯನ್ನು ಹೊಂದಿ ಕೇವಲರಾಗಿರುತ್ತಾರೋ, ಮಲವು ಪರಿಪಾಕವಾಗದ ಕಾರಣ ಪರಾಪರಮೋಕ್ಷಗಳನ್ನು ಪಡೆಯದೆ ಮಾಯೆಗೆ ಮೀರಿ ಶುದ್ಧವಿದ್ಯೆಯಲ್ಲಿ ಇರುತ್ತಾರೆಂದು ಕೇಳಲ್ಪಡುವ ಇವರೇ ಜ್ಞಾನಾಕಲರು. ಇವರು ಮಲವೆಂಬ ಒಂದೇ ಪಾಶದಿಂದ ಬದ್ಧರಾಗಿ, ಇತರ ಎರಡು ಪಾಶಗಳಿಂದಲೂ ಉತ್ತೀರ್ಣರಾಗಿರುತ್ತಾರೆ. ಇವರಲ್ಲಿಯೇ ಕೆಲವರು ಸೃಷ್ಟಿಯ ಆದಿಯಲ್ಲಿಯೇ ಮಲಪರಿಪಾಕದ ತಾರ-ತಮ್ಯದಿಂದ ಪತಿಯಿಂದಲೇ ಸಾಕ್ಷಾತ್ತಾಗಿ ಅನುಗ್ರಹಿಸಲ್ಪಟ್ಟು, ಮಂತ್ರ-ಮಂತ್ರಮಹೇಶ್ವರ ಮುಂತಾದ ಹಿಂದೆಯೇ ಹೇಳಿದ ಶುದ್ಧಮಾರ್ಗದಲ್ಲಿ ಭೋಗ ಮತ್ತು ಅಧಿಕಾರಗಳಲ್ಲಿ ವಿನಿಯುಕ್ತರಾಗುತ್ತಾರೆ. ಉಳಿದವರು ಮಲ ಪರಿಪಾಕವಾಗುವ ಪರ್ಯಂತವೂ ದಟ್ಟವಾದ ಆವರಣದಿಂದ ಏನನ್ನೂ ತಿಳಿಯದವರಾಗಿ ವಿಜ್ಞಾನ ಕೇವಲಾವಸ್ಥೆಯಲ್ಲಿಯೇ ಇರುತ್ತಾರೆ—ಎಂದು ಆಚಾರ್ಯರುಗಳು ತಿಳಿದಿರುವರು. ವಿಜ್ಞಾನಕೇವಲರಿಗೂ ಆತ್ಮತ್ವಸಾಧಾರಣವಾದ ವಿಭುತ್ವವಿರುವುದರಿಂದ ಒಂದು ಪ್ರದೇಶಮಾತ್ರದಲ್ಲಿ ಇರುವಿಕೆಯೆಂಬುದು ಸಂಭವಿಸುವುದಿಲ್ಲ. ಆದರೂ, ನಿಷ್ಕರ್ಮತ್ವದಿಂದ ಕಳೆದು

ಹೋದ ಗ್ರಂಥಿಕಾರ್ಯಗಳನ್ನುಳ್ಳ, ಮತ್ತು ಕಾಲಕ್ರಮದಲ್ಲಿ ಹೊಂದಲ್ಪಡುವ ಬಿಂದುಕಾರ್ಯಗಳನ್ನುಳ್ಳವರಿಗೆ ಅದರ ಮಧ್ಯಸ್ಥತ್ವವು ಔಪಚಾರಿಕವಾಗಿ ಯುಕ್ತವಾಗುತ್ತದೆ.

ಆತ್ಮರಿಗೆ ಕೈವಲ್ಯವೇ ಶ್ರೇಯಸ್ಸೆಂದು ಸರ್ವತಂತ್ರಸಿದ್ಧವಲ್ಲವೆ?, ಹೀಗಾದರೆ ಕೈವಲ್ಯದಲ್ಲಿಯೂ ಪಶುತ್ವವು ಸಮಾಪ್ತವಾಗಿಲ್ಲವೆಂಬುದು ಹೇಗೆ? ಎಂದರೆ ಹಾಗಲ್ಲ. ಅದು ಸಿದ್ಧಾಂತವನ್ನು ಬಿಟ್ಟು ಇತರ ಎಲ್ಲ ತಂತ್ರಗಳಲ್ಲಿ ಪ್ರಸಿದ್ಧವಾದದು. ಸಿದ್ಧಾಂತದಲ್ಲಾದರೋ, ಸ್ವರೂಪವ್ಯಕ್ತಿಯೇ ಆತ್ಮರಿಗೆ ಮುಕ್ತಿಯೆಂದು ತಿಳಿದುಬರುತ್ತದೆ. ಈ ಸ್ವರೂಪವು ಸರ್ವಜ್ಞತ್ವಾದಿರೂಪ ವಾದ ಶಿವತ್ವವೆಂದು ಹಿಂದೆಯೇ ಹೇಳಿರುತ್ತದೆ. ಇದು ಕೈವಲ್ಯಾವಸ್ಥೆಯಲ್ಲಿ ಇರುವುದಿಲ್ಲ; ಆಗಲೂ ಸ್ವರೂಪಾವಾರಕವಾದ ಪಾಶವು ನಿವೃತ್ತವಾಗಿರು ವುದಿಲ್ಲ. ಆಗ ಅದು ನಿವೃತ್ತವಾಗಿದ್ದಿದ್ದರೆ ಸ್ವರೂಪವು ಪ್ರಕಾಶವಾಗ ಬೇಕಾಗಿತ್ತು. ಮತಾಂತರಗಳ ಮುಕ್ತಿಸ್ಥಿತಿಯಲ್ಲಿ ಸಾರ್ವಜ್ಞ್ಯದ ಪ್ರಕಾಶವು ಕೇಳಲ್ಪಡುವುದಿಲ್ಲ. ಹೇಗೆಂದರೆ, ವೇದಾಂತಮತದಲ್ಲಿ ಸಚ್ಚಿದಾನಂದರೂಪ ನಾದ ಆತ್ಮನನ್ನು ಹೊರತು ಬೇರೆ ಯಾವ ವಸ್ತುವನ್ನೂ ಒಡಂಬಡುವುದಿಲ್ಲ. ವಿಷಯುವೇ ಇಲ್ಲದುದರಿಂದ ಧರ್ಮಿ ಮತ್ತು ಧರ್ಮರೂಪವಾದ ಸ್ವಸಂ- ವಿತ್ ಪರಸಂವಿತ್ ಎಂಬ ಭೇದವು ಕೂಡುವುದಿಲ್ಲ. ಎಲ್ಲ ಧರ್ಮಿಯ ಧರ್ಮವೂ ಎಲ್ಲೆಡೆಯಲ್ಲಿಯೂ ತನಗೆ ಬೇರೆಯಾದ ವಿಷಯಗಳಲ್ಲಿಯೇ ಪ್ರಕಾಶವಾಗುತ್ತದೆ; ಹೇಗೆಂದರೆ ಅಗ್ನಿಯ ಉಷ್ಣತ್ವಾದಿಗಳು ಕಟ್ಟಿಗೆಯಲ್ಲಿ ಪ್ರಕಾಶವಾಗುವುದು. ಕಲ್ಪಿತವಾದ ವಿಷಯುವಿರುವುದೆಂದು ಹೇಳುವುದಾದರೆ, ಅದರ ಉಪಾಧಿಕವಾದ ಆತ್ಮಧರ್ಮಕ್ಕೆ ವಸ್ತುತ್ವವಿಲ್ಲವಾಗುವುದು. ಹಾಗೆಯೇ ಆಗಲಿ—ಎಂದು ಹೇಳಲಾಗದು. ಧರ್ಮವು ಕಲ್ಪಿತವೆಂದಾದರೆ ಧರ್ಮಿಯೂ ಹಾಗೆಯೇ ಆಗಲೆಂದಾಗುತ್ತದೆ. ವಸ್ತುವಿಗೆ ದ್ವೈರೂಪ್ಯವಿರಲಾರದೆಂದು ಹೇಳಲಾಗದು; ಇದು ನಿಷ್ಪ್ರಯೋಜನವಾಗಿದ್ದು, ವಿವೇಚನೆಮಾಡಬೇಕಾದ ವಿಷಯುವಾಗುತ್ತದೆ ಮತ್ತು ವಸ್ತುವು ಸತ್ತಾಮಾತ್ರವಾದ್ದರಿಂದ, ಸಾಧ್ಯತ್ವವೇ ಇಲ್ಲವಾಗುವುದು. ಹೀಗಲ್ಲದೆ ಬೇರೆ ಜ್ಞಾತೃವಿಲ್ಲದುದರಿಂದ ವಸ್ತುವಿಗೆ ಸಾಧ್ಯತ್ವ ವಿಲ್ಲವೆನ್ನುವುದಾದರೆ, ಅದು ಸಮಂಜಸವು; ಆಗ ಅದು ಉಪಾಸ್ಯವೆಂದು

ಕೇಳಲ್ಪಡುವುದು ಅರ್ಥವಿಲ್ಲದ್ದೆನಿಸುವುದು. ಒಂದೇ ವಸ್ತುವಿಗೆ ಉಪಾಸ್ಯೋಪಾಸಕಭಾವವು ಸಂಗತವಾಗುವುದಿಲ್ಲ. ಸಂಬಂಧವು ಎರಡು ವಸ್ತುಗಳನ್ನು ಆಶ್ರಯಿಸಿರುತ್ತದೆ. ಒಂದೇ ವಸ್ತುವಿಗೂ ಔಪಾಧಿಕವಾಗಿ ದ್ವೈರೂಪ್ಯವುಂಟೆಂದು ಅಭಿಪ್ರಾಯಪಡುವಿಯೋ? ಆಗ ಆ ಉಪಾಧಿಯು ಸತ್ಯವಾದರೆ ಅದ್ವೈತಹಾನಿಯಾಗುತ್ತದೆ; ಅಸತ್ಯವಾದರೆ, ಅದನ್ನು ಕಳೆಯುವುದಕ್ಕಾಗಿರುವ ಉಪಾಸನೆಯೂ ಅಸತ್ಯವೇ ಆಗುವುದು. ಅಸತ್ಯವಾದ ಕ್ರಿಯೆಯಿಂದ ಸತ್ಯವಾದ ಫಲವು ದೊರಕುತ್ತದೆಯೆ! ಆದಕಾರಣ ಉಪಾಸ್ಯ ಮತ್ತು ಉಪಾಸಕರಾಗಿರುವ ಶಿವ ಮತ್ತು ಜೀವರಿಗೆ ಭೇದಕಾರಣವನ್ನು ಯಾವುದನ್ನಾದರೂ ಸತ್ಯವಾದುದನ್ನೇ ಅಂಗೀಕರಿಸಬೇಕು. ಆ ಎರಡು ವಿಧ ಚೇತನಗಳಿಗೂ ಅದೇ ವಿಷಯವೂ ಆಗುತ್ತದೆ. ಆದುದರಿಂದ ಅದರ ವಿಷಯಕವಾದ ಜ್ಞಾತೃತ್ವಶಕ್ತಿರೂಪವಾದ ಆತ್ಮನ ಸ್ವರೂಪವನ್ನು ಮುಕ್ತಿಯಲ್ಲಿ ಒಪ್ಪದೇ ಇರುವ ಪರಮತದವರಿಂದ ಅದನ್ನು ಆವರಿಸಿರುವ ಅನಾದಿಮಲವೆಂಬ ಏನಾದರೂ ಯಾವಾಗಲಾದರೂ ಕೇಳಲ್ಪಟ್ಟದೆಯೇ ಎಂದು ಸಿದ್ಧಾಂತಿಗಳ ಅಭಿಪ್ರಾಯವು. ಹೀಗೆ ವೇದಾಂತಿಗಳ ಕೈವಲ್ಯವು ವಿಜ್ಞಾನಕೈವಲ್ಯವೆಂದು ನಿಶ್ಚಿತವಾದುದು.

ಸಾಂಖ್ಯಮತದಲ್ಲಿಯೂ ಇದರಂತೆಯೇ ಪ್ರಯತ್ನವಿಶೇಷದಿಂದ ಸಂಪಾದಿಸಿದ ಪ್ರಕೃತಿಪುರುಷರ ವಿವೇಕರೂಪವಾದ ಖ್ಯಾತಿಯಿಂದ ಕರ್ಮಕ್ಷಯವು ಉಂಟಾಗಲಾಗಿ, ಅದರ ಉಪಶಮರೂಪವಾದ ಕೈವಲ್ಯವು ಹೊಂದಲ್ಪಡುತ್ತದೆಂದು ಪ್ರವಾದವಿದೆ. ಈ ಪ್ರಶಮವು ಪಶ್ವವಸ್ಥಾರೂಪವೇ ಸರಿ. ಏಕೆಂದರೆ ಇಲ್ಲಿ ಸ್ವನಿಷ್ಠನಾದ ಪುರುಷನಿಗೆ ಯಾವ ವಸ್ತುವಾದರೂ ಪ್ರಕಾಶವಾಗುವುದೆಂದು ಎಲ್ಲಿಯೂ ಕೇಳಲ್ಪಡುತ್ತಿಲ್ಲ. ಇವರಿಂದಲೂ ಸರ್ವಜ್ಞತ್ವವು ಸದೇಹಕೈವಲ್ಯವೆಂದೇ ಅಂಗೀಕರಿಸಲ್ಪಟ್ಟದೆಯಲ್ಲವೆ!—ಎಂದರೆ, ಹಾಗಾದರೆ ಹೇಳಬೇಕು; ಮತ್ತೆ ಇದನ್ನು ಅನಂತರ ಏಕೆ ಪರಿತ್ಯಜಿಸುತ್ತಾರೆ? ಇದಕ್ಕಿಂತಲೂ ಬೇರೆಯಾದ ಪರಮಪುರುಷಾರ್ಥವು ಇನ್ನಾವುದೂ ಇರುವುದಿಲ್ಲ; ಇದೇ ಪರಿಪೂರ್ಣಚೈತನ್ಯರೂಪವಾದ್ದರಿಂದ ಪುರುಷಾರ್ಥವಾಗಿರುತ್ತದೆ. ವ್ಯಂಜಕ-ಪರಿತ್ಯಾಗದಿಂದ ಇದರ ಪರಿತ್ಯಾಗವೆಂದು ಹೇಳಿದರೆ, ಆಗ ಅದರ ಅಧೀನದಿಂದ

ವ್ಯಜ್ಯಮಾನವಾದ ಜ್ಞಾನವು ಸರ್ವಾರ್ಥವನ್ನೂ ವಿಷಯೀಕರಿಸಲಾರದು. ಇದಕ್ಕೆ ಆವಾರಕವಾದುದು ಅವಶ್ಯವಾಗಿರಬೇಕಾಗಿ, ಅದು ಪರಿಕ್ಷೀಣವಾಗುವುದೆಂದು ಸಿದ್ಧವಾದುದೇ ನಮಗೆ ಸಮ್ಮತವಾಗಿದೆ. ಈ ಪ್ರಕಾರವಾಗಿ ಇತರ ಕರ್ಮಕ್ಷಯವಾದಿಗಳ ಕೈವಲ್ಯವು ಪಶುತ್ವಾವಸ್ಥೆಯೇ ಆಗಿರುತ್ತದೆ.

ಪ್ರಳಯಕೇವಲತ್ವವು ಯಾವುದು? ಹೇಳುತ್ತೇವೆ. ದಯಾಮಯನಾದ ಈಶ್ವರನು, ಬಹುಕಾಲ ಸಂಸಾರಾನುಭವದಿಂದ ಖೇದಗೊಂಡಿರುವ ಆತ್ಮರುಗಳ ವಿಶ್ರಾಂತಿಗಾಗಿಯೂ, ಕರ್ಮದ ಪರಿಪಾಕಕ್ಕಾಗಿಯೂ, ಅಸಂಖ್ಯಾತಕಾರ್ಯಪರಂಪರೆಗಳಿಂದ ಕ್ಷೀಣವಾದ ಶಕ್ತಿಯನ್ನುಳ್ಳ ಮಾಯೆಯ ಶಕ್ತಿವೃದ್ಧಿಗಾಗಿಯೂ ಸಹ, ಮಾಯೆಯಲ್ಲಿಯೇ ಎಲ್ಲ ಕಾರ್ಯಗಳನ್ನೂ ಉಪಸಂಹಾರಮಾಡಿಕೊಂಡು ಇರುತ್ತಾನೆ. ಆ ಸಮಯದಲ್ಲಿ ಆತ್ಮರುಗಳು ಇನ್ನೂ ಕ್ಷೀಣವಾಗದೇ ಇರುವ ಮಲ ಮತ್ತು ಕರ್ಮವೆಂಬ ಎರಡು ಪಾಶ-ಗಳನ್ನುಳ್ಳವರಾಗಿ, ಉಪಸಂಹಾರವಾಗಿರುವ ಕಲೆ ಮೊದಲಾದ ಭೋಗಸಾಧನೆಗಳನ್ನುಳ್ಳವರಾಗಿ, ಮಾಯೆಯ ಮಧ್ಯದಲ್ಲಿಯೇ ಮತ್ತೆ ಸೃಷ್ಟಿಯು ಆರಂಭವಾಗುವವರೆಗೂ ಇರುತ್ತಾರೆ. ಇವರೇ ಪ್ರಳಯಕೇವಲರು. ಇವರ ಕರ್ಮಕ್ಷಯವಾಗದೇ ಇದ್ದರೂ, ಪ್ರಳಯದಿಂದಲೇ ಹೋಗಲಾಡಿಸಲ್ಪಟ್ಟ ಕಲೆ ಮುಂತಾದುವುಗಳಿಂದ ಕೈವಲ್ಯವು ಸಂಭವಿಸುವುದು. ಇವರ ಮಧ್ಯದಲ್ಲಿ ಯಾರ ಮಲ ಮತ್ತು ಕರ್ಮಗಳು ಪಕ್ವವಾಗುತ್ತವೋ ಅವರು ಕೂಡಲೆ ಸಾಕ್ಷಾತ್ತಾಗಿ ಪರಮೇಶ್ವರನಿಂದಲೇ ಪರಮೋಕ್ಷವನ್ನು ಹೊಂದಿಸಲ್ಪಡುತ್ತಾರೆ. ಆ ಕಾಲದಲ್ಲಿ ಅಧಿಕಾರಕ್ಕೆ ಅವಕಾಶವಿರುವುದಿಲ್ಲ.

ಆ ಸಮಯದಲ್ಲಿ ಸಾಧನವಿಲ್ಲದುದರಿಂದ ಭೋಗವಿಲ್ಲದ ಆತ್ಮರ ಮಲ ಪರಿಪಾಕವು ಹೇಗೆ ಉಂಟಾಗುತ್ತದೆ? ಮಲಪರಿಪಾಕವು ಭೋಗದಿಂದಲೇ ಆಗತಕ್ಕದ್ದೆಂದು ಹಿಂದೆ ಹೇಳಿದೆಯಷ್ಟೆ!—ಎಂದರೆ; ಹಾಗಲ್ಲ. ಮಾಯೆಯ ಸಂಬಂಧದಿಂದ ಉಂಟಾಗುವ ಸುಖಾದಿಅನುಭವರೂಪವಾದ ಭೋಗವು ಅನಾದಿಪರಂಪರೆಯಿಂದಲೇ ಕ್ಷೀಣಿಸುತ್ತದೆ. ಆಗ ಮಲವೆಂಬ ದ್ರವ್ಯಕ್ಕೆ ಬೇರೆ ದ್ರವ್ಯದ ಸಂಬಂಧವಿಲ್ಲವೆಂದು ಶಂಕಿಸಲಾಗದು; ಪ್ರಳಯಕಾಲದಲ್ಲಿಯೂ

ಮಾಯೆಯೆಂಬ ದ್ರವ್ಯವು ಶಕ್ತಿರೂಪದಲ್ಲಿ ಇದ್ದೇ ಇರುತ್ತದೆ. ಅಥವಾ ಶಿವ-ತೇಜಸ್ಸಿನ ಸಂಬಂಧವೇ ಆಗ ಮಲಪಾಕಕ್ಕೆ ಕಾರಣವು. ಶಿವತೇಜಸ್ಸಿನ ಸಂಬಂಧವು ಯಾವಾಗಲೂ ಇಲ್ಲದ್ದಲ್ಲ. ಹಾಗಾದರೇ ಎಲ್ಲ ಕಡೆಯಲ್ಲಿಯೂ ಎಲ್ಲ ಆತ್ಮರಲ್ಲಿಯೂ ಒಂದೇಕಾಲದಲ್ಲಿ ಮಲಪಾಕವಾಗಲಿ ಎಂದು ಶಂಕಿಸಬಾರದು. ಪ್ರತಿಜೀವನಲ್ಲಿಯೂ ಇರುವ ಅಂಥ ಮಲಶಕ್ತಿಗಳು ವಿಚಿತ್ರವಾಗಿರುತ್ತವೆಂದು ತಿಳಿದುಬರುತ್ತದೆ. ಕರ್ಮಗಳಿಗಾದರೋ ಮಲಶಕ್ತಿಯ ಪಾಕವೇ ಪಾಕವು. ಮಲವು ಎಲ್ಲ ಪಾಶಕ್ಕೂ ಮೂಲವಾದುದು. ಕೆಲವು ಕಡೆಯಲ್ಲಿ ಮಲವು ಕ್ಷಯಿಸದೇ ಇದ್ದರೂ ಶಿವತೇಜಸ್ಸಿನಿಂದಲೇ ಕರ್ಮಪಾಕವುಂಟಾಯಿತೆಂದು ಸಾಮ್ಯವುಂಟಾದ ಫಲದಿಂದ ತಿಳಿಯಬೇಕು. ಪಕ್ವವಾದ ಕರ್ಮಗಳೂ ಕೂಡ ಭೋಗದಿಂದಲೇ ಕ್ಷಯಿಸುವುದನ್ನು ಸ್ಥಿತಿಕಾಲದಲ್ಲಿ ನೋಡುತ್ತೇವೆ. ಹೀಗಿರುವಾಗ ಭೋಗವಿಲ್ಲದ ಪ್ರಳಯಕಾಲದಲ್ಲಿ ಅವುಗಳ ಕ್ಷಯವು ಉಂಟಾಗುವುದು ಹೇಗೆ? ಸತ್ಯವು. ವಿಚಿತ್ರಗಳೂ ಅನಂತಗಳೂ ಆಗಿರುವ ಕರ್ಮ-ಸಂತತಿಗಳ ಪಾಕವು ಕ್ರಮವಾಗಿಯೂ ಒಟ್ಟಾಗಿಯೂ ಎರಡುವಿಧದಿಂದಲೂ ಸಂಭವಿಸುತ್ತದೆ. ಅವುಗಳಲ್ಲಿ ಕ್ರಮವಾಗಿ ಪಕ್ವವಾಗತಕ್ಕವುಗಳು ದೇಹ ಸಂಬಂಧವುಂಟಾಗಿ ಭೋಗದಿಂದಲೇ ಕ್ಷಯಿಸುತ್ತದೆ; ಒಟ್ಟಾಗಿ ಪಕ್ವವಾದವು ಎಲ್ಲವೂ ಶಿವಾನುಗ್ರಹದಿಂದಲೇ ಕ್ಷೀಣಿಸುತ್ತವೆಂದು ಸರ್ವವೂ ರಮ್ಯವಾಗಿದೆ.

ಮಲಕರ್ಮಮಾಯೆಗಳು ಪಕ್ವವಾಗದ ಸಕಲರ ವಾರ್ತೆಯೇನು?— ಎಂದರೆ; ಕೇಳಿರಿ. ಬೆಳಗಾಗುವ (ಪುನಃ ಸೃಷ್ಟಿಯಾಗುವ) ವರೆಗೂ ಹೀಗೆ ಸಮ್ಮೂರ್ಛಾವಸ್ಥೆಯಲ್ಲಿಯೇ ಇದ್ದು ವಿಶ್ರಾಂತಿಗೊಂಡು, ಮತ್ತೆ ಭೋಗಕ್ಕೆ ತಕ್ಕ ಸ್ಥಿತಿಯನ್ನು ಪಡೆದಿರುವ ಆತ್ಮರುಗಳನ್ನು ಪರ್ಯಾಲೋಚಿಸಿ ಭಗವಾನ್ ಪರಮಕಾರುಣಿಕನಾದ ಶಿವನು ಅನಂತೇಶ್ವರನಲ್ಲಿ ಇಟ್ಟಿದ್ದ ತನ್ನ ಶಕ್ತಿಯಿಂದಲೇ ಮುಂದೆ ಹೇಳುವ ಮಾಯಾತತ್ವವನ್ನು ಕ್ಷೋಭೆಗೊಳಿಸಿ, ಅಶುದ್ಧಮಾರ್ಗದ ಸೃಷ್ಟಿಯನ್ನು ಆರಂಭಿಸುವನು. ಅನಂತರ ಭೋಗಕ್ಕೆ ಬೇಕಾದ ಕಲೆ ಮುಂತಾದ ಸಾಧನಸಾಮಗ್ರಿಯುಳ್ಳವರಾಗಿ ಈ ಸಕಲರೆಂಬ ಮೂರನೆಯ ಆತ್ಮರು ಹಿಂದಿನಂತೆಯೇ ಪಶುಗಳೇ ಆಗುತ್ತಾರೆ. ಆಗ ಇವರಿಗೆ ಮಲ ಕರ್ಮ ಮಾಯೆ—ಎಂಬ ಪಾಶತ್ರಯಗಳೂ ಇರುತ್ತವೆ. ಈ ಸೃಷ್ಟಿಯ ಆರಂಭ

ಕಾಲದಲ್ಲಿ ಪರಿಪಕ್ವವಾದ ಮಲ ಮತ್ತು ಕರ್ಮಗಳನ್ನುಳ್ಳ ಮಂಡಲಿ ಮೊದಲಾದವರು ಮಾಯಾಗರ್ಭಾಧಿಕಾರಕ್ಕಾಗಿ ಪರಮೇಶ್ವರನಿಂದಲೇ ಸಾಕ್ಷಾತ್ತಾಗಿ ಅಪರಮಂತ್ರೇಶ್ವರತ್ವದಲ್ಲಿ ಅನುಗ್ರಹಿಸಲ್ಪಟ್ಟವರಾದಾಗ್ಯೂ, ಅನಂತೇಶ್ವರನಿಂದ ಆತಿವಾಹಿಕದೇಹವನ್ನು ಹೊಂದಿಸಲ್ಪಟ್ಟು ಸಕಲರಾಗಿ ಕಾಣಬರುತ್ತಾರೆ. ಆದರೆ ಇವರನ್ನು ಅವರಂತೆ ಪಶುಗಳೆಂದು ತಿಳಿಯಬಾರದು. ಇವರು ಆತ್ಮಶಿವರೇ ಎಂದು ಹಿಂದೆಯೇ ಹೇಳಿರುತ್ತದೆ.

ಅಧಿಕಾರಿಗಳಿಗೆಲ್ಲರಿಗೂ ಬೈಂದವದೇಹಸಂಬಂಧವು ಹಿಂದೆ ವರ್ಣಿತವಾಗಿದೆ; ಈಗ ಮತ್ತೇಕೆ ಮಾಯೇಯದೇಹವುಂಟಾಗಿರುವಿಕೆಯು ಹೇಳಲ್ಪಡುತ್ತಿದೆ? ಇವರಿಗೆ ಅನುಗ್ರಹಕಾಲದಲ್ಲಿಯೇ ಬೈಂದವದೇಹವು ಹುಟ್ಟುತ್ತದೆಂದು ನಿಶ್ಚಿತವಾಗಿ ತಿಳಿದುಬರುತ್ತದೆ. ಆದರೆ ಅದು ಅತ್ಯಂತಸೂಕ್ಷ್ಮವಾಗಿರುವುದರಿಂದ, ಅದು ಒಳಗೆ ಇರುವುದಾದರೂ, ಎಲ್ಲ ಪಶುಸಮೂಹದ ಅಧಿಕಾರಕ್ಕೆ ಬೇಕಾದ ಸ್ಥೂಲವಾದ ಮಾಯೇಯದೇಹವನ್ನು ಆಶ್ರಯವಾಗಿ ಅಪೇಕ್ಷಿಸುತ್ತದೆ. ಆದೂ ಬೋಧಕಸಂಬಂಧದ ಬಲದಿಂದ ಮೋಹಕತ್ವವನ್ನು ಬಿಟ್ಟು ಬೋಧಕವೇ ಆಗಿ ಅದರೊಡನೆ ಏಕೀಭವಿಸಿಯೇ ತೋರಿಬರುತ್ತದಾಗಿ ಯಾವ ದೋಷವೂ ಇರುವುದಿಲ್ಲ. ಇದೇ ನ್ಯಾಯವು ಸಂಪೂರ್ಣವಾಗಿ ಅನುಗೃಹೀತರಾಗಿರುವ ಅಧಿಕಾರ್ಯಮಂತ್ರರಿಗೂ ಸಮಾನವು.

ಇವರಲ್ಲಿ ಇನ್ನು ಕೆಲವರು ಮಲವು ಪಕ್ವವಾಗದಿದ್ದಾಗ್ಯೂ ಪಾಪಕರ್ಮವೆಲ್ಲಾ ಕ್ಷಯಿಸಿ, ಪುಣ್ಯಶಾಲಿಗಳಾಗಿ ಅನಂತವೂ ಅನೇಕವೂ ಆದ ಚೈತನ್ಯದ ಉತ್ಕರ್ಷಕ್ಕೆ ಕಾರಣಗಳಾದ ಶರೀರಾದಿಗಳಿಂದ ಸಂಪನ್ನರಾಗಿಮಾಡಲ್ಪಟ್ಟು ಅಂಗುಷ್ಠಮಾತ್ರ ಮೊದಲಾಗಿ ಕಾಲಾನಲಾಂತದವರೆಗಿನ ಲೋಕಗಳಲ್ಲಿ ಅಧಿಪತಿಗಳಾಗಿ ಪಶುಗಳ ನಿಯಾಮಕರಾಗಿ ಸ್ಥಾಪಿಸಲ್ಪಟ್ಟಿರುತ್ತಾರೆ. ಇತರರು ಮೇಲೆ ಹೇಳಿದ ಮೂರು ವಿಧ ಪಾಶಗಳಿಗೂ ಅಧೀನರಾಗಿ, ತಮ್ಮ ತಮ್ಮ ಕರ್ಮಗಳಿಗೆ ಅನುಗುಣಗಳಾದ ದೇಹಾದಿಗಳನ್ನು ಪಡೆದು ಅಲ್ಪಜ್ಞಾನವುಳ್ಳವರಾಗಿ ನಾನಾಜನ್ಮಗಳಲ್ಲಿ ಅಲೆಯುತ್ತಾ ಸುಖಾದ್ಯನುಭವರೂಪವಾದ ಭೋಗಗಳಲ್ಲಿ ಪ್ರೇರಿಸಲ್ಪಡುತ್ತಾರೆ. ಇವರೇ ಸಂಸಾರಿಗಳೆಂದೂ ಸಕಲರೆಂದೂ ಹೇಳಲ್ಪಡುತ್ತಾರೆ.

ಶ್ರೀಶೈವಸಿದ್ಧಾಂತಪರಿಭಾಷೆಯಲ್ಲಿ ಪಶುಪರಿಚ್ಛೇದವು ಸಮಾಪ್ತವು.

ಪಾಶಪರಿಚ್ಛೇದ

ಸಕಲಾತ್ಮರಿಗೆ ಸಂಸಾರಕ್ಕೆ ಕಾರಣಗಳಾದ ಪಾಶಗಳು ಯಾವುವು? ಎಂದರೆ, ಹೇಳುತ್ತೇವೆ. ಜಡಗಳೂ, ಚೇತನದಿಂದ ಪ್ರೇರಿಸಲ್ಪಡತಕ್ಕವುಗಳೂ ಚೇತನಕ್ಕೆ ಉಪಯುಕ್ತವಾದುವೂ, ಚೇತನಕ್ಕೆ ಬಂಧಕಗಳೂ, ಪರಿಣಾಮ ಹೊಂದುವಂಥವುಗಳೂ ಇವೇ ಮೊದಲಾದ ಸ್ವರೂಪವುಳ್ಳ ಪಾಶಗಳು ಮಲ, ಕರ್ಮ ಮತ್ತು ಮಾಯೆಯೆಂದು ಮೂರು ಪ್ರಕಾರವಾಗಿವೆ: ಇವುಗಳಲ್ಲಿ ಮೊದಲನೆಯದಾದ ಮಲವು ಮೂಲಮೃತ್ಯು, ನೀಹಾರ, ಅಂಜನ, ಪಶುತ್ವ, ಅವಿದ್ಯಾ—ಇವೇ ಮೊದಲಾದ ಅನೇಕಶಬ್ದಗಳಿಂದ ಹೇಳಲ್ಪಡುತ್ತಾ, ನಿತ್ಯವೂ, ಪ್ರತಿಆತ್ಮಚೈತನ್ಯವನ್ನೂ ಆವರಿಸುವ ಅನೇಕಶಕ್ತಿಯುಳ್ಳದ್ದೂ ಆಗಿ, ಅನಾದಿಗಳಾದ ಪಶುಗಳಿಗೆ ಪರಬಂಧವೆಂದು ಎಣಿಸಲ್ಪಟ್ಟಿದೆ. ಇತರ ಪಾಶಗಳಿಗೆ ಇದೇ ಮೂಲವಾಗಿದೆ.

ಈ ಮಲದಿಂದ ಮರೆಸಿದ ಚೈತನ್ಯನಾಗಿ ಪಶುವು ಯಾವ ಅರ್ಥವನ್ನೂ ಗ್ರಹಿಸಲು ಸಮರ್ಥನಾಗುವುದಿಲ್ಲವೆಂದು, ಪತಿಯಿಂದಲೇ ಮಲದ ಒಂದಂಶವನ್ನು ಕಳೆಯುವುದಕ್ಕಾಗಿ ಮಾಯಾಕಾರ್ಯಗಳಾದ ಅರ್ಥಗಳಿಂದ ಸಂಬಂಧಿಸಲ್ಪಡುತ್ತಾನೆ. ಇದರಿಂದ ಸ್ವಲ್ಪ ಅಭಿವ್ಯಕ್ತವಾದ ಚೈತನ್ಯವುಳ್ಳವನಾದರೂ, ಯಾವ ವಸ್ತುವನ್ನೂ ಯಥಾರ್ಥವಾಗಿ ಗ್ರಹಿಸುವುದಿಲ್ಲ. ಈ ಕಾರಣದಿಂದ ಮೋಹ, ಮದ, ರಾಗ, ವಿಷಾದ, ಶೋಷ, ವೈಚಿತ್ರ್ಯ, ಹರ್ಷ ಎಂಬ ಇತರಮಲಗಳಿಂದ ಯುಕ್ತನಾಗುತ್ತಾನೆ. ಇವುಗಳ ಸಂಬಂಧದಿಂದ ಕಷ್ಟಗಳಾದ ಕರ್ಮಗಳನ್ನು ಮಾಡುತ್ತಾನೆ. ಈ ಕರ್ಮಗಳ ಫಲಭೋಗಕ್ಕಾಗಿ ಮತ್ತೆ ಶರೀರಾದಿಗಳಿಂದ ಕೂಡುತ್ತಾನೆ. ಹೀಗಾಗಿ ಬೀಜಾಂಕುರನ್ಯಾಯದಂತೆ ನಿರಂತರವೂ ಕರ್ಮ ಮತ್ತು ಶರೀರಗಳ ಪರಂಪರೆಯಿಂದ ಎಂದೆಂದಿಗೂ ಬಿಡುಗಡೆಹೊಂದುವುದಿಲ್ಲ. ಈ ರೀತಿಯಲ್ಲಿ ಮಲವು ಎಲ್ಲ ಪಾಶಗಳಿಗೂ ಮೂಲವಾಗಿದೆಯೆಂಬುದು ಸ್ಪಷ್ಟವು. ಹೀಗೆ ಪಾಶ್ಯತ್ವಸ್ಥಿತಿಯನ್ನು ಹೊಂದಿದ ಈ ಜೀವನು ಕಾಲಕ್ರಮದಲ್ಲಿ ದೊರೆಯುವ ಮಲ-ಪಾಕಕ್ಕೆ ಅನುಗುಣವಾದ ದೀಕ್ಷೆಯಿಂದ ಶೋಧ್ಯತ್ವ, ಶುದ್ಧಿಯ ಅನಂತರವೇ

ಸಿದ್ಧಾಂತದಿಂದ ಬೋಧ್ಯತ್ವ ಎಂಬ ಈ ಎರಡು ಅವಸ್ಥೆಗಳನ್ನೂ ಅನುಭವಿಸುತ್ತಾನೆ. ಜೀವನ ಈ ವಿಧವಾದ ಪಾರತಂತ್ರ್ಯವೇ ಅನಾದಿಸಿದ್ಧವಾದ ಈ ಪಾಶದ ಮೂಲವನ್ನು ಅನುಭವಸಿದ್ಧಮಾಡಿಕೊಡುತ್ತದೆ. ಹೀಗಿಲ್ಲದಿದ್ದರೆ ಒಂದು ಚೇತನವು ಬೇರೆ ಚೇತನದಿಂದ ಪ್ರೇರಿಸಲ್ಪಡುವಿಕೆಯೆಂಬುದು ಅಸಂಗತವೇ ಸರಿ.

ವ್ಯಾಪಕನಾದ ಜೀವನಿಗೆ ಬೇರೆದ್ರವ್ಯದಿಂದ ಆಚ್ಛಾದನೆ (ಮುಚ್ಚುವಿಕೆ) ಯೆಂದು ಹೇಳುವುದೇ ಅಸಂಗತವೆಂದು ಹೇಳಿದರೆ, ಹಾಗಲ್ಲ. ಅದನ್ನು ಆಚ್ಛಾದಿಸುವ ದ್ರವ್ಯವೂ ವ್ಯಾಪಕವೇ ಆಗಿರುತ್ತದೆ. ಇದಲ್ಲದೆ ಅದರ ಆಚ್ಛಾದನೆಯೂ ಸಹ ಮಣಿಪಾವಕನ್ಯಾಯದಂತೆ (ಎಂದರೆ ಮಣಿಯಿಂದ ಪಾವಕ (ಅಗ್ನಿ) ಯ ದಾಹಕಶಕ್ತಿಯು ತಡೆಯಲ್ಪಡುವಂತೆ) ಅದರ ಶಕ್ತಿಯನ್ನು ತಡೆಯುವ ಸನ್ನಿಧಿವಿಶೇಷಮಾತ್ರವೇ ಆಗಿರುತ್ತದೆ. ಹೀಗಲ್ಲದೆ ಸಂಪೂರ್ಣವಾಗಿ ಆವರಿಸಿಕೊಳ್ಳುವಿಕೆಯಲ್ಲ. ಚೇತನ್ಯವೇ ಜಡವನ್ನು ಆವರಿಸುವಂಥಾದ್ದು. ಹೀಗಾದ್ದರಿಂದಲೇ ಈ ಮಲವು ಒಂದೇ ಆದರೂ ಅನೇಕರಾದ ಆತ್ಮರ ಶಕ್ತಿಯನ್ನು ತಡೆಯಬಲ್ಲದು.

ಹೀಗಾಗುವಪಕ್ಷದಲ್ಲಿ ಆತ್ಮರಿಗೆ ಎಂದಿಗೂ ಮುಕ್ತಿಯೇ ಇಲ್ಲವೆಂದಾಗುವುದಷ್ಟೆ. ನಿತ್ಯವೂ ವ್ಯಾಪಕವೂ ಆದ ಮಲದ ಸಂಬಂಧವು ಎಂದಿಗೂ ತಪ್ಪಿದ್ದೇ ಅಲ್ಲವಾಗುವುದಲ್ಲವೆ? ಎಂದರೆ; ಆದರೂ ಆ ಶಕ್ತಿಯನ್ನು ಪ್ರತಿ-ಸಂಹಾರಮಾಡುವ ಲೀಲೆಯುಲ್ಲಿ ಪತಿಶಕ್ತಿಯು ಯಾವಾಗಲೂ ಜಾಗರೂಕವಾಗಿರುತ್ತದೆ. ಇದರಲ್ಲಿ ಯುಕ್ತಿವಿರೋಧವೇನೂ ಇರುವುದಿಲ್ಲ. ಆ ಮಲಶಕ್ತಿಗಳೆಲ್ಲಾ ಜಡಗಳೂ, ಅನೇಕಗಳೂ ಆಗಿ ಅನಿತ್ಯಗಳೆಂದು ನಿಶ್ಚಿತವಾಗಿರುವುದರಿಂದ, ವಿಚಿತ್ರವಾಗಿ ಕ್ರಮವಾಗಿಯೂ ಒಟ್ಟಿಗೇನೂ ಪರಿಪಾಕಹೊಂದುವ ಮಲಶಕ್ತಿಗಳು, ಮಂತ್ರಾದಿಗಳಿಂದ ವಿಷಶಕ್ತಿಗಳಂತೆ ನಿವಾರಿಸಲ್ಪಡತಕ್ಕವುಗಳಾಗಿ ಆಚಾರ್ಯರುಗಳಿಂದ ಅನುಭೂಯಮಾನವಾಗುತ್ತವೆ.

ಪತಿಯ ಶಕ್ತಿಯು ಪಾಶಗಳಿಗೆ ಅನುಗ್ರಾಹಕಗಳೂ ಆಗುತ್ತವೆ; ಈ ಕಾರಣದಿಂದ ಪತಿಶಕ್ತಿಯು ರೋಧಕವೆಂಬ ನಾಲ್ಕನೆಯ ಪಾಶವೆಂದು

ಆಗಮಗಳಲ್ಲಿ ಘಂಟಾಘೋಷವಾಗಿ ಹೇಳಲ್ಪಟ್ಟಿದೆ; ಹೀಗಿರುವಾಗ ಇದು ನೀಹಾರಶಕ್ತಿಯನ್ನು ಕಳೆಯುವುದೆಂತು? ಸತ್ಯ, ಪಶುವನ್ನು ಅನುಗ್ರಹಿಸು ವುದಕ್ಕಾಗಿಯೇ ಅದು ಪಾಶಕ್ಕೆ ಅನುಗ್ರಾಹಕವಾಗಿರುತ್ತದೆ. ಲೋಕದಲ್ಲಿಯೂ ಸಹ ರೋಗಿಗೆ ವೈದ್ಯನು ಮಾಡುವ ತೀಕ್ಷ್ಣ-ಔಷಧಾದಿಗಳ ಪ್ರಯೋಗವು ಆರೋಗ್ಯವನ್ನು ಸಂಪಾದಿಸಿಕೊಡುವುದಾಗಿ ನೋಡಿದ್ದೇವೆ. ಮತ್ತು ಇದರಲ್ಲಿ ಒಂದಾನೊಂದು ರಹಸ್ಯವು ಕಾಣಬರುತ್ತದೆ. ಆ ಪಾರಮೇಶ್ವರೀಶಕ್ತಿಯು, ಅವಿಕಾರಿಯೂ, ಅನಾದಿಯೂ ಅನಂತವೂ ನಿರಂತರವೂ ಪ್ರವರ್ತಿಸು ವಂಥದ್ದೂ ಆಗಿದ್ದು ನಿರಂತರವಾಗಿ ವ್ಯಾಪಕವಾದುದರಿಂದ ಜಡಚೇತನ ಗಳೆರಡರಲ್ಲಿಯೂ ಸಮವಾಗಿಯೇ ಎಲ್ಲ ಅವಸ್ಥೆಗಳ ಪರಿಣಾಮಗಳಲ್ಲಿಯೂ ಆಯಾ ಧರ್ಮಗಳನ್ನು ಅನುಸರಿಸಿಕೊಂಡೇ ಇರುತ್ತದೆ. ಆದಕಾರಣ ಯಾವಾಗ ಯಾವವಸ್ತುವಿನ ಯಾವಧರ್ಮವು ಪ್ರವೃತ್ತಿಗೆ ಯೋಗ್ಯವಾಗು ತ್ತದೋ, ಅಲ್ಲಿ ಅದನ್ನು ಪ್ರೇರಿಸುತ್ತದೆ; ಯಾವುದೂ ನಿವೃತ್ತಿಗೆ ಯೋಗ್ಯ ವಾಗುತ್ತದೋ, ಅದನ್ನು ನಿವರ್ತಿಸುತ್ತದೆ. ಸರ್ವಜ್ಞನಾದ ಪರಶಿವನು ಎಲ್ಲ ವಿಧದಿಂದಲೂ ಎಲ್ಲವಿಷಯಗಳಲ್ಲಿಯೂ ತಟಸ್ಥವಾಗಿರುವುದೇ ನ್ಯಾಯವಾಗಿದೆ. ಆದುದರಿಂದ ಪರಿಪಾಕಕ್ಕೆ ಬರುವುದಕ್ಕೆ ಮುಂಚೆ ಪಶುಗಳಲ್ಲಿ ಪ್ರವೃತ್ತ ವಾಗಿರುವ ಆಚ್ಛಾದನರೂಪವಾದ ಮಲಧರ್ಮವನ್ನು ಪರಿಪಾಕವುಂಟಾದ ಮೇಲೆ ಪತಿಶಕ್ತಿಯು ನಿವರ್ತಿಸುವುದೆಂಬಲ್ಲಿ ಯಾವ ದೋಷವೂ ಇರುವು ದಿಲ್ಲ. ಪಶುಚೈತನ್ಯದಂತೆ ಪತಿಚೈತನ್ಯವು ಪಾಶದಿಂದ ತಡೆಯಲ್ಪಡುವುದಿಲ್ಲ ವೆಂಬುದು ಹೇಗೆ? ಚೆನ್ನಾಗಿದೆ! ತಾಮ್ರ ಮತ್ತು ಸ್ಫಟಿಕಗಳಿಗೆ ಕಿಲುಬು ಮತ್ತು ಸ್ವಚ್ಛತೆಯನ್ನು ಯಾರಾದರೂ ಮಾಡಿದರೆಂದಾದೀತು! ಇದರಂತೆಯೇ ಸ್ವಭಾವವಾಗಿಯೇ ನಿರ್ಮಲನಾದವನು ಶಂಭುವು; ಸ್ವಭಾವಮಲಿನರಾದವರು ಜೀವರು, ಸ್ವಭಾವಜಡಗಳು ಪಾಶಗಳು ಎಂಬುದೇ ಸಿದ್ಧಾಂತವು.

ಧರ್ಮಾಧರ್ಮಾತ್ಮಕಗಳಾದ ಕರ್ಮಗಳು ವಿಚಿತ್ರಗಳೂ ಅನಾದಿಗಳೂ ಮಾಯಾಶ್ರಯಗಳೂ ಪ್ರತಿಪುರುಷರಿಗೂ ನಿಯತವಾಗಿ ಭೋಗ್ಯಗಳೂ ಆಗಿರುತ್ತಾ ಬೀಜ ಅದೃಷ್ಟ ಸಹಕಾರಿ ಮುಂತಾದ ಪರ್ಯಾಯಪದಗಳಿಂದ ಹೇಳಲ್ಪಡುತ್ತವೆ. ಇವು ಮಾಯೆಯ ವ್ಯಾಪಾರದಿಂದ ಉಂಟಾಗತಕ್ಕವೂ,

ಮಾಯಾವಚ್ಛಿನ್ನ ಚೈತನ್ಯನಾದ ಭೋಕ್ತೃವಿಗೆ ಅತ್ಯಂತ ಇಷ್ಟಗಳೂ ಆಗಿದ್ದು ಕರ್ಮವೆನ್ನಲ್ಪಡುತ್ತವೆ. ಕರ್ಮಗಳು ಅನಾದಿಗಳಾದರೂ ಉತ್ಪತ್ತಿವಿನಾಶ ರಹಿತಗಳೆಂದು ತಿಳಿಯಬಾರದು. ಅವುಗಳು ಅನಂತವಾದ ಸಂತತಿ (ಪರಂಪರೆ) ಯಿಂದ ಪ್ರವಾಹರೂಪವಾಗಿ ಅನಾದಿಗಳಾಗಿವೆ. ಇವು ಬುದ್ಧಿಯ ಗುಣಗಳೆಂದು ಕೇಳಲ್ಪಡುತ್ತವೆ, ಮಾಯಾಶ್ರಯಗಳೆಂಬುದು ಹೇಗೆ? ಸತ್ಯ; ಮಾಯೆಯು ಮಂತ್ರೇಶ್ವರನಿಂದ ಕ್ಷೋಭಿತವಾದ ಮಾಯಾತತ್ವದಿಂದ ಸಾಕ್ಷಾತ್ತಾಗಿಯೋ ಪರಂಪರೆಯಿಂದಲೋ ಉತ್ಪನ್ನಗಳಾದ ಕಲೆಮೊದಲಾಗಿ ಪೃಥಿವೀಪರ್ಯಂತ ವಾದ ಮೂವತ್ತುತತ್ವಗಳಿಂದ ಕೂಡಿದ ಸೂಕ್ಷ್ಮದೇಹಸ್ವರೂಪವೆಂದು ಹೇಳುತ್ತೇವೆ. ಆದಕಾರಣ ಅದರಲ್ಲಿ ಸೇರಿ ಅವಯವರೂಪವಾದ, ಎಲ್ಲ ಪದಾರ್ಥಗಳ ಪ್ರತಿಬಿಂಬಕ್ಕೆ ಆಧಾರವಾಗಿಯೂ ಸುಖಾದಿರೂಪವಾಗಿಯೂ ಭೋಗ್ಯವಾಗಿರುವ, ಬುದ್ಧಿತತ್ವಕ್ಕೇ ಧರ್ಮಾದಿ–ಎಂಟು ಗುಣಗಳಿರುವುದು ಯುಕ್ತವಾಗಿದೆ; ಆದರೂ ಅದರಲ್ಲಿರುವ ಕರ್ಮಕ್ಕೆ, ಅದಕ್ಕೆ ಸಮಾನಜಾತಿಯಾದ ತತ್ವಸಮಷ್ಟಿಯಲ್ಲಿ ಇರುವುದಾಗಿ ಲಕ್ಷಣೆಯಿಂದ ಮಾಯಾಶ್ರಯತ್ವವು ಹೇಳಲ್ಪಡುತ್ತದೆ.

ಇದು ಆತ್ಮನ ಗುಣಗಳೆಂಬುದು ಮಾತ್ರ ಸರಿಯಲ್ಲ. ಭೋಗ್ಯವು ಜಡವೇ ಆಗಿರಬೇಕಾದ್ದರಿಂದ, ಚೇತನದೊಡನೆ ತಾದಾತ್ಮ್ಯವು ಕೂಡುವುದಿಲ್ಲ. ಪ್ರತ್ಯಕ್ಷವಾಗಿ ಜ್ಞಾನಕ್ಕೆ ವಿಷಯವಾಗಿ ಅನುಭವಿಸಲ್ಪಡುತ್ತಿರುವುದರಿಂದ ಇವು ಭೋಗ್ಯಗಳೆಂದು ಸ್ಪಷ್ಟವೇ. ಹಾಗಾದರೆ ಇವನ್ನು ಅದೃಷ್ಟಗಳೆಂದು ಹೇಳಿದುದು ತಪ್ಪಾದೀತೆಂದು ತಿಳಿಯಬಾರದು; ಸುಖಾದಿಜ್ಞಾನಾವಸ್ಥೆಯಲ್ಲಿ ಭೋಗ್ಯವಾಗಿ ಭೋಕ್ತೃವಿನ ಜ್ಞಾನಕ್ಕೆ ವಿಷಯಗಳಾದರೂ, ವಾಸನಾರೂಪವಾದ ಸ್ಥಿತಿಯಲ್ಲಿ ಸೂಕ್ಷ್ಮವಾಗಿರುತ್ತಾ ಅದೃಶ್ಯಗಳಾಗಿರುತ್ತವೆ.

ಕರ್ಮವು ಮಾಯಾಗುಣವಾಗಿರುವ ಪಕ್ಷದಲ್ಲಿ ಇದು ಸ್ವತಂತ್ರವಾಗಿ ಪಾಶವೆಂಬುದು ಹೇಗೆ? ಸತ್ಯ; ಮಾಯೆಯು ಸನ್ನಿಹಿತವಾಗಿರುವಾಗ ಅದರ ನಾನಾವಸ್ಥೆಗಳಲ್ಲಿನ ನಾನಾಗುಣಗಳು ಅದಕ್ಕೆ ಬೇರೆಯೆಂದು ಎಣಿಸಲ್ಪಡುವುದಿಲ್ಲ; ಅವು ತಮ್ಮ ಆಶ್ರಯವಾದ ಮಾಯೆಗೆ ಭಿನ್ನವಾದವುಗಳಲ್ಲ; ಗುಣ ಮತ್ತು ಗುಣಿಗಳಿಗೆ ಭೇದಸಹಿಷ್ಣುವಾದ ಅಭೇದವು ಸಂಬಂಧವು. ಆದುದ

ರಿಂದ ಅವುಗಳಿಗೆ ಎಲ್ಲಿಯೂ ಪೃಥಕ್ಕಾಗಿ ಗಣನೆಯಿಲ್ಲ. ಆದರೂ ಈ ಕರ್ಮ ವೆಂಬುವ ಬುದ್ಧಿಗುಣವು ಇತರ ಗುಣಗಳಿಗಿಂತಲೂ ಸಂಸಾರಕ್ಕೆ ಪ್ರಬಲವಾದ ಕಾರಣವಾದ್ದರಿಂದ ಬೇರೆಯಾಗಿ ಗಣಿಸಲ್ಪಟ್ಟಿದೆ. ಮೊದಲನೆಯ ಉಪಾದಾನಕಾರಣವಾದ ಮಾಯಾತತ್ವಭೂಮಿಯಲ್ಲಿ ಹಿಂದಿನ ಎಲ್ಲ ಕಾರ್ಯವನವು ಉಪಸಂಹೃತವಾದರೂ ಮುಂದಿನ ಕಾರ್ಯಾರಣ್ಯದ ವೊಳಕೆಗೆ ಕಾರಣವಾಗಿರುವಿಕೆಯೇ ಕರ್ಮದ ಬೀಜವಾಗಿರುವಿಕೆಯು. ಪ್ರಳಯದಲ್ಲಿ ಬುದ್ಧಿಕಾರ್ಯಶಕ್ತಿಯಂತೆ ಕಾರ್ಯಾಂತರಗಳ ಶಕ್ತಿಗಳೂ ಇರುವುದು ಯುಕ್ತವಾಗಿದೆಯಾದರೂ ಅದರಂತೆ ಇತರ ಶಕ್ತಿಗಳಿಗೆ ಪ್ರಾಧಾನ್ಯವಿರುವುದಿಲ್ಲ; ಇದೇ ಅಸಾಧಾರಣವಾಗಿ ಸರ್ವಕಾರ್ಯಪ್ರಪಂಚದ ಪ್ರವೃತ್ತಿಗೂ ಬೀಜವಾಗಿರುತ್ತದೆ. ಆದುದರಿಂದಲೇ ಬುದ್ಧಿಶಕ್ತಿಸ್ವರೂಪವಾದ ಕರ್ಮವು ಸಹಕಾರಿ ಎಂಬುದಾಗಿಯೂ ಹೇಳಲ್ಪಡುತ್ತದೆ. ಜಗದೀಶ್ವರನೂ ಸಹ ಕರ್ಮದ ಅನ್ವಯವ್ಯತಿರೇಕ (ಇರುವಿಕೆ, ಇಲ್ಲದಿರುವಿಕೆ) ಗಳನ್ನು ಅನುಸರಿಸಿಯೇ ಪ್ರವೃತ್ತಿಯೋಗ್ಯನಾಗುತ್ತಾನೆ. ಪರಮಮಾರ್ಗದಲ್ಲಿ ಕರ್ಮದ ಅಪೇಕ್ಷೆಯಿಲ್ಲವಷ್ಟೆ—ಎಂಬ ಚೋದ್ಯಕ್ಕೇನೂ ಇಲ್ಲಿ ಅವಕಾಶವಿಲ್ಲ; ಅಧಿಕಾರಿವಿಷಯವಾದ ಪ್ರವೃತ್ತಿಯು ಅಶುದ್ಧಮಾರ್ಗದಲ್ಲಿ ಅಧಿಕಾರಿಗಳಾದವರ ಪ್ರಯೋಜನಕ್ಕಾಗಿ ಇರುವುದು.

ಪುರ್ಯಷ್ಟಕ, ಆತಿವಾಹಿಕಾಸಾಧಾರಣದೇಹ, ಸೂಕ್ಷ್ಮದೇಹ- ಮುಂತಾದ ಹೆಸರನ್ನುಳ್ಳ ಮಾಯೆಯು ಪ್ರತಿಆತ್ಮರಿಗೂ ನಿಯತವಾಗಿರುತ್ತಾ ಸೃಷ್ಟಿಯ ಆರಂಭದಲ್ಲಿ ಮಾಯಾತತ್ವದಿಂದ ಹುಟ್ಟಿದ ಕಲೆವೊದಲಾಗಿ ಪೃಥಿವೀವರೆಗಿನ ಮೂವತ್ತು ತತ್ವಗಳ ಸಮುಷ್ಟಿರೂಪವಾಗಿದ್ದು, ಪ್ರಲಯ ಅಥವ ಮೋಕ್ಷದವರೆಗೂ ಭೋಗಸಾಧನವಾಗಿ ಕೆಳಗಿನ ಎಲ್ಲಭುವನಗಳಲ್ಲಿಯೂ ಕಾಮಾನುಸಾರವಾಗಿ ಅಲೆಯುತ್ತದೆ.

ತತ್ವಗಳು ಭುವನಾಧಾರಗಳೆಂದು ಹಿಂದೆ ಹೇಳಿದೆ; ಈಗ ಇವುಗಳಿಗೆ ಭುವನಚಾರವನ್ನು ಹೇಳುವುದು ಹೇಗೆ? ಸತ್ಯ; ಮಾಯೆಯೆಂಬ ತತ್ವ ಪಙ್ಕ್ತಿಯು ಸಾಧಾರಣೀ ಅಸಾಧಾರಣೀ ಎಂದು ಎರಡು ವಿಧವಾದುದು. ಅವೆರಡರಲ್ಲಿ ಸಾಧಾರಣಿಯು ಒಂದು ಮತ್ತು ಅತ್ಯಂತವಿಸ್ತಾರವಾದುದು;

ಇದನ್ನು ಸರ್ವಾತ್ಮರಿಗೂ ಭೋಗ್ಯವಾದ ಭುವನಕ್ಕೆ ಆಧಾರವಾಗಿ ಹಿಂದೆಯೇ ಹೇಳಿರುತ್ತದೆ. ಇದು ವಿದ್ಯೆಯೇ ಮೊದಲಾದ ಬಿಂದುಕಲಾಮೂರರಲ್ಲಿ ನಿಶ್ಚಲವಾಗಿದ್ದಂತೆ ಇರುತ್ತದೆ. ಹೇಗೆಂದರೆ–ವಿದ್ಯಾಕಲೆಯಲ್ಲಿ ಮಾಯೆ, ಕಲೆ ಕಾಲ, ನಿಯತಿ, ವಿದ್ಯಾ, ರಾಗ, ಪ್ರಕೃತಿ—ಎಂಬ ಏಳು ತತ್ವಗಳು ಅಂಗುಷ್ಠ ಮಾತ್ರ ಮೊದಲಾದ ವಾಮದೇವವರೆಗಿನ ಇಪ್ಪತ್ತೇಳು ಭುವನಾಧಾರಗಳಿಗೆ ಅವಸ್ಥಾನಗಳು ; ಪ್ರತಿಷ್ಠಾಕಲೆಯಲ್ಲಿ ಗುಣ, ಬುದ್ಧಿ, ಅಹಂಕಾರ, ಮನಸ್ಸು, ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ ಘ್ರಾಣ, ವಾಕ್, ಪಾದ, ಪಾಣಿ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರಸ, ಗಂಧ, ಆಕಾಶ, ವಾಯು, ಅಗ್ನಿ, ಜಲ, ಸ್ಥಲ–ಎಂಬ ಇಪ್ಪತ್ತುಮೂರು ತತ್ವಗಳು ಶ್ರೀಕಂಠವೊದಲಾಗಿ ಅಮರೇಶವರೆಗಿನ ಐವತ್ತಾರು ಭುವನಾಧಾರಗಳಿಗೆ ಅವಸ್ಥಾನಗಳು : ಹಾಗೆಯೇ ಅದರ ಕೆಳಗಿನ ನಿವೃತ್ತಿಕಲೆಯಲ್ಲಿ ಪೃಥಿವೀತತ್ವವೊಂದೇ ಬ್ರಹ್ಮಾಂಡದ ಒಳಹೊರಗಿನ ಭದ್ರಕಾಳೀಮೊದಲಾಗಿ ಕಾಲಾಗ್ನಿರುದ್ರರವರೆಗಿನ ನೂರೆಂಟುಭುವನಾಧಾರಗಳಿಗೂ ಮಹಾಭೂತಪಂಚಕಕ್ಕೂ ಅವಸ್ಥಿತಿಯಾಗಿರುತ್ತದೆ.—ಎಂದು ಈ ಭೇದವನ್ನು ತಿಳಿಯತಕ್ಕದ್ದು.

ಇವುಗಳಲ್ಲಿಯೇ ಪ್ರತಿಆತ್ಮರಿಗೂ ಭೋಗಸಾಧನವಾಗಿ ಹೇಳಲ್ಪಟ್ಟಿರುವ ಅಸಾಧಾರಣೀ ತತ್ವಪಙ್ಕ್ತಿಗಳು ಸಂಕೋಚವಿಕಾಸಧರ್ಮವುಳ್ಳವುಗಳಾಗಿ ಸೂಕ್ಷ್ಮದೇಹರೂಪದಿಂದ ಇಲ್ಲಿ ಅಲ್ಲಿ ಸಂಚರಿಸುತ್ತವೆ. ಇವು ಆಯಾಭುವನಗಳಲ್ಲಿ ಉಂಟಾಗುವ ಸ್ಥೂಲದೇಹದ ಸಂಬಂಧದಿಂದಲೇ ಆಯಾ ವಿಚಿತ್ರಗಳಾದ ಕರ್ಮಸಂತಾನಗಳ ಸಂಬಂಧ ಮತ್ತು ಅನುಭವ-ಮುಂತಾದುವುಗಳಿಗೆ ಯೋಗ್ಯವಾಗುವುವು.

ಈಗ ಈ ತತ್ವಗಳ ಉತ್ಪತ್ತಿ ಮತ್ತು ವ್ಯಾಪಾರಗಳನ್ನು ತಿಳಿಸುತ್ತೇವೆ. ಒಂದೂ, ನಿತ್ಯವೂ, ವಿಭುವೂ, ವಿಚಿತ್ರಶಕ್ತಿಮಯವೂ ಆದ ಮಾಯೆಯೆಂಬ ಪರಮಕಾರಣತತ್ವವು ಒಂದುಕಾಲದಲ್ಲಿ ಈಶ್ವರಶಕ್ತಿಯಿಂದ ಕ್ಷೋಭೆಗೊಂಡು ಸೃಷ್ಟಿಗೆ ಆರಂಭಿಸಿ, ಕಲಾ, ಕಾಲ, ನಿಯತಿ–ಎಂಬ ತತ್ವತ್ರಯವನ್ನು ಉಂಟುಮಾಡಿತು. ಇವುಗಳಲ್ಲಿ ಕಲಾತತ್ವವು ಆತ್ಮನ ಚೈತನ್ಯವನ್ನು ಮಲಶಕ್ತಿಯ ಒಂದಂಶವನ್ನು ಕಳೆದು ಸ್ವಲ್ಪ ಪ್ರಕಟಪಡಿಸುತ್ತದೆ. ಆಗ ಆತ್ಮನು

ಈ ವ್ಯಂಜಕದ ಸಂಬಂಧದಿಂದ ಸ್ವಲ್ಪ ಪ್ರಕಾಶವಾದ ಸ್ವರೂಪವನ್ನು ಹೊಂದಿ, ತನಗೆ ಉಚಿತವಾದ ವ್ಯಾಪಾರ (ಕಾರ್ಯ) ಗಳಲ್ಲಿ ಕರ್ತೃತ್ವವನ್ನು ಹೊಂದುತ್ತಾನೆ. ವ್ಯಂಗ್ಯ ಮತ್ತು ವ್ಯಂಜಕಗಳಾದ ಆತ್ಮರೂಪ ಮತ್ತು ಕಲಾತತ್ವಗಳಿಗೆ ಪರಸ್ಪರ ಸಂಬಂಧವುಂಟಾಗುವಂತೆ ಯಾವ ಪ್ರಯೋಜಕ (ಪ್ರೇರಕ) ಕ್ಕೂ ಅವಕಾಶವಿರುವುದಿಲ್ಲ.

ನೀಹಾರವು ಸ್ವಪ್ರಕಾಶನಾದ ಆತ್ಮನನ್ನು ತಡೆಯಲಾರದು; ಪರಸಂವಿದ್ರೂಪವಾದ ಆತನ ಶಕ್ತಿಯನ್ನು ಮಾತ್ರವೇ ತಡೆಯಬಲ್ಲುದು; ಹೀಗಾದ ಮೇಲೆ ಕಲಾತತ್ವವು ಆತ್ಮನಿಗೆ ಉಪಕಾರಕವೆಂಬುದು ಹೇಗೆ? ಕರ್ತೃವಿದ್ದರೂ ಕರಣವಿಲ್ಲದೆ ಯಾವಕ್ರಿಯೆಯೂ ಸಂಭಾವಿತವಲ್ಲ. ಆದಕಾರಣ ಕಲಾತತ್ವದಿಂದ ಉಪಕೃತವಾದ ಕರಣಶಕ್ತಿಯುಳ್ಳವನಾಗಿಯೇ ಆತ್ಮನು ತನ್ನ ಭೋಗದಲ್ಲಿ ಪ್ರಯುಕ್ತನಾಗುತ್ತಾನೆ. ಆತ್ಮನಿಗೆ ಭೋಗವೆಂದರೆ ಬುದ್ಧಿತತ್ವದ ಉಪರಂಜನೆಯು. ಇದು ಸುಖಾದಿಪ್ರವೃತ್ತಿಗಳಲ್ಲಿ ಅಭಿನ್ನವಾಗಿ ತೋರಿಬರುವಿಕೆಯಾಗಿ ಸಂವೇದನವೆಂದೂ ಹೇಳಲ್ಪಡುತ್ತದೆ. ಈ ಸಂವೇದನದಲ್ಲಿ ಕರ್ತೃವಿಗೆ ಕಲಾತತ್ವವೊಂದೇ ಸಾಲದು. ಕಲಾತತ್ವವು ಆತ್ಮನ ಶಕ್ತಿಯನ್ನು ಪ್ರಕಟಮಾತ್ರಮಾಡುವುದರಲ್ಲಿ ಸಾಮರ್ಥ್ಯವುಳ್ಳದ್ದಾಗಿದೆ, ಮತ್ತು ಅದಕ್ಕೆ ಅಭಿನ್ನವೂ ಆಗಿರುತ್ತದೆ. ಆದುದರಿಂದ ಇದರಿಂದಲೇ ಇನ್ನೊಂದು ಪ್ರಕಾಶಸ್ವರೂಪವಾದ ವಿದ್ಯೆಯೆಂಬ ತತ್ವವು ಬುದ್ಧಿಯಲ್ಲಿನ ಅರ್ಥಾನುಭವಕ್ಕೆ ಸಾಧಕವಾಗಿ ಉತ್ಪನ್ನವಾಗುತ್ತದೆ. ಇದಿಲ್ಲದೆಯೇ ಆತ್ಮಚಿಚ್ಛಕ್ತಿಯೇ ಬುದ್ಧಿಯನ್ನು ಗ್ರಹಿಸಲಿ-ಎಂದು ಹೇಳಲಾಗದು; ಅದು ಸಾಮಾನ್ಯಕರಣವಾಗಿರುತ್ತಾ ಭೋಗ್ಯವಸ್ತುವಿಶೇಷವನ್ನು ಗ್ರಹಿಸಲು ಕರಣವಿಶೇಷದ ಅಪೇಕ್ಷೆಯುಳ್ಳದ್ದಾಗಿರುತ್ತದೆ. ಹೀಗಲ್ಲವಾದರೆ ಅನೇಕತತ್ವಗಳನ್ನು ಕಲ್ಪಿಸುವುದೇ ಬೇಡವೆನಿಸೀತು.

ಆಮೇಲೆ ಆತ್ಮನಿಗೆ ವಿದ್ಯಾತತ್ವದಿಂದ ತಿಳಿದುಬಂದ ಅರ್ಥಗಳಲ್ಲಿ ಆಸಕ್ತಿಯನ್ನುಂಟುಮಾಡುವ ರಾಗವೆಂಬ ತತ್ವವನ್ನು ಕಲೆಯೇ ಉಂಟುಮಾಡುತ್ತದೆ. ತಿಳಿದುಬಂದಮಾತ್ರದಿಂದ ಅರ್ಥವು ಭೋಗ್ಯವಾಗಲಾರದು. ಆಸಕ್ತಿಇಲ್ಲದೆಯೇ ಯಾರೂ ಭೋಗದಲ್ಲಿ ಪ್ರವರ್ತಿಸಿಲ್ಲ. ಭೋಗದಲ್ಲಿ ಆಸಕ್ತಿ

ಯನ್ನುಂಟು ಮಾಡುವುದರಿಂದಲೇ ರಾಗವೆನಿಸುತ್ತದೆ. ರಾಗವಿಲ್ಲದಿದ್ದರೂ ಆತ್ಮನಿಗೆ ಬುದ್ಧಿಗುಣಗಳೇ ಆಸಕ್ತಿಯನ್ನುಂಟುಮಾಡಲಿ ಎಂದು ಹೇಳಲಾಗದು; ಆ ಬುದ್ಧಿಯ ಗುಣಗಳೂ ಸಹ ಕ್ರಮವಾಗಿ ಒಳಗಿನ ಮತ್ತು ಬಾಹ್ಯಪದಾರ್ಥಗಳಿಗಾಗಿರುತ್ತಾ ಭೋಗ್ಯಗಳೆಂದೇ ನಿಶ್ಚಿತವಾಗಿದೆ. ಭೋಗ್ಯಗಳು ಆದರೂ ರಂಜಕಗಳೂ ಆಗಲಿ—ಎಂದು ಅಭಿಪ್ರಾಯಪಡುವುದಾದರೆ, ಆಗ ವೀತ-ರಾಗರೇ (ರಾಗವಿಲ್ಲದವರು) ಇಲ್ಲವೆಂದಾದೀತು.

ಕಾಲವು ಕೂಡ ಆತ್ಮನಿಗೆ ಗ್ರಾಹ್ಯಗಳಾದ ವಸ್ತುಗಳಲ್ಲಿ ವರ್ತಮಾನ, (ಈಗಿನ) ಮುಂದೆ ಬರುವ, ಕಳೆದ—ಎಂಬ ಮೂರು ಅವಸ್ಥೆಗಳನ್ನು ಕ್ರಮವಾಗಿ ಉಂಟುಮಾಡುತ್ತಾ, ಆ ಮೂಲಕವಾಗಿ ಬೇಗ—ವಿಲಂಬವಾಗಿ ಎಂಬ ತಿಳಿವಳಿಕೆಯನ್ನುಂಟುಮಾಡುತ್ತಾ ಆತ್ಮನನ್ನು ಸರ್ವವಿಧದಿಂದಲೂ ಸಂಸಾರಿಯನ್ನಾಗಿ ಮಾಡುತ್ತದೆ. ಹೀಗೆ ಕಾಲದಿಂದ ಪ್ರೇರಿತನಾದ ಅಣು (ಜೀವ) ವಿಗೆ ತನ್ನಿಂದ ಸಂಪಾದಿತವಾದ ಕರ್ಮಗಳ ಭೋಗವನ್ನು ನಿಯಮಿಸುವುದಕ್ಕಾಗಿ ನಿಯತಿಯೂ ಉಪಯುಕ್ತವಾಗುತ್ತದೆ. ಹೀಗಲ್ಲದಿದ್ದರೆ ಒಬ್ಬನಿಂದ ಸಂಪಾದಿತವಾದ ಕರ್ಮವು ಇನ್ನೊಬ್ಬನಿಂದ ಅನುಭವಿಸಲ್ಪಡಲಿ ಎಂದು ಸಾಂಕರ್ಯವೇ ಆದೀತು. ಈ ಪ್ರಕಾರವಾಗಿ ತತ್ವಪಂಚಕದಿಂದ ಕಂಚುಕಿತನಾದ ಈ ಆತ್ಮನು ಪುರುಷತತ್ವವೆಂಬ ಹೆಸರನ್ನು ಹೊಂದುತ್ತಾನೆ; ಇದರ ಬಂಧನದಿಂದಲೇ ಭೋಕ್ತೃತ್ವಸ್ಥಿತಿಯನ್ನು ಹೊಂದಿದ್ದಾನೆ.

ಈ ಪುರುಷನಿಗೆ ಭೋಗ್ಯಗಳಾದ ವಸ್ತುಗಳ ಸೃಷ್ಟಿಗಾಗಿ ಪ್ರಕೃತಿಯೆಂಬ ಕಲಾತತ್ವವು ಹುಟ್ಟುತ್ತದೆ. ಈ ಪ್ರಕೃತಿಯಿಂದ ಸದ್ಗೃಹಿಣಿಯಂತೆ ಆಲಿಂಗಿಸಲ್ಪಟ್ಟ ಪುರುಷನು ಎಂದಿಗೂ ಅದರ ವಿರಹ (ಅಗಲುವಿಕೆ) ವನ್ನು ಸಹಿಸಲಾರನು. ಇದೇ ಸಂಸಾರಕ್ಕೆ ಮೂಲವಾದುದು. ಸತ್ವ, ರಜಸ್ಸು, ತಮಸ್ಸು—ಎಂದು ಪ್ರಸಿದ್ಧವಾಗಿರುವ ಗುಣಗಳು ಈ ಪ್ರಕೃತಿಯವೇ ಆಗಿವೆ. ಪ್ರಕೃತಿಯು ನಿರವಯುವವಾದ್ದರಿಂದ ಈ ಗುಣಗಳು ಪುರುಷನಲ್ಲಿ ಅಭಿವ್ಯಕ್ತ (ಪ್ರಕಟ) ವಾಗುತ್ತವೆ. ಆದುದರಿಂದಲೇ ಪ್ರಕೃತಿಯನ್ನು ಅವ್ಯಕ್ತವೆಂದೂ ಹೇಳುತ್ತಾರೆ. ಇದರಿಂದಲೇ ಪ್ರಖ್ಯಾ, ವ್ಯಾಪಾರ, ನಿಯಮರೂಪವಾದ ಗುಣತತ್ವವು ಪ್ರಕಟವಾಗುತ್ತದೆ. ಇದು ಗುಣತ್ರಯವುಳ್ಳದ್ದಾಗಿ, ಒಂದನ್ನೊಂದು ಎಡಬಿಡದೇ

ಅಂಥಾ ಮೂರುಭಾಗಗಳನ್ನುಳ್ಳದ್ದಾಗಿಯೇ ಹುಟ್ಟುತ್ತದೆ. ಬುದ್ಧಿಯಂತೆ ಇದೂ ಭೋಗ್ಯಾರ್ಥಗಳನ್ನು ಪ್ರಕಾಶಪಡಿಸುವಂಥದ್ದಲ್ಲ. ಸಾವಯವವಾಗಿದ್ದಾಗ್ಯೂ ಇದು ಮುಂದೆಹೇಳುವ ಎಲ್ಲ ಕರಣ ಮತ್ತು ಕಾರ್ಯಸಮೂಹಗಳಿಂದ ಗರ್ಭಿತವಾಗಿದ್ದು, ಪ್ರಕೃತಿಸಮವಾಗಿರುತ್ತದೆ. ಮೂರುವಿಧವಾಗಿರುವ ಈ ಗುಣತತ್ವದಿಂದ ಮೂರುವಿಧವಾದ ಎಲ್ಲ ಕಾರ್ಯಪರಂಪರೆಯೂ ಹುಟ್ಟುತ್ತದೆ.

ಮಹತ್ತತ್ವವೆಂದು ಬೇರೆ ಹೆಸರನ್ನುಳ್ಳ ಬುದ್ಧಿತತ್ವವು ಸೂರ್ಯನಂತೆ ಪ್ರಕಾಶರೂಪವೂ, ನಿಶ್ಚಯಧರ್ಮವುಳ್ಳದ್ದೂ ಮನಃಸಹಿತವಾದ ಬಾಹ್ಯೇಂದ್ರಿಯಗಳಿಂದ ತಿಳಿದುಬರುವ ಸಮಸ್ತಬಾಹ್ಯಾರ್ಥಗಳ ಪ್ರತಿಬಿಂಬಾಕಾರವಾದ ಅನೇಕವಿಧವೃತ್ತಿಸಮೂಹಯುಕ್ತವೂ ಸಾತ್ವಿಕ, ರಾಜಸ, ತಾಮಸ ಎಂದು ಮೂರುವಿಧಗಳಾದ ಸುಖ ದುಃಖ ಮೋಹಗಳೆಂಬ ಮೂರುವಿಧಗಳಾದ ವೃತ್ತಿಗಳಿಗೆ ಆಶ್ರಯವೂ ಆಗಿ, ಗುಣತತ್ವದಿಂದ ಹುಟ್ಟುವುದು. ಈ ಬುದ್ಧಿತತ್ವದಿಂದ ಯುಕ್ತನಾದ ಪುರುಷನೇ ಭೋಗೀ ಎನ್ನಿಸಲ್ಪಡುವನು. ಈ ಬುದ್ಧಿತತ್ವದ ಸಂಬಂಧವು ಸುಖಾದಿಜ್ಞಾನರೂಪವೆಂದು ಹಿಂದೆಯೇ ತಿಳಿಸಿದ್ದಾಗಿದೆ. ಈ ಕಾರಣದಿಂದಲೇ ಈ ಬುದ್ಧಿತತ್ವವೂ ಭೋಗ್ಯವಾಗಿರುತ್ತದೆ; ಸುಖಾದಿರೂಪವಾಗಿ ಯಾವಾಗಲೂ ವಿದ್ಯೆಯಿಂದ ತಿಳಿಯಲ್ಪಡುತ್ತದೆ. ಧರ್ಮಾದಿಗಳೆಲ್ಲಾ ಬುದ್ಧಿಯ ಗುಣಗಳೆಂದು ಹಿಂದೆಯೇ ವಿವರಿಸಿರುವುದರಿಂದ ಸುಖಾದಿಗಳು ಆತ್ಮನ ಗುಣಗಳೆಂಬ ಅಭಿಪ್ರಾಯವನ್ನು ನಿರಾಕರಿಸಿದ ಹಾಗೆಯೇ ಆಯಿತು. ಇವೆರಡೂ ಭಾವಪ್ರತ್ಯಯರೂಪಗಳಾದ್ದರಿಂದ ಅಭಿನ್ನಗಳೇ ಆಗಿವೆ. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಎಂಬ ಈ ಎಂಟುಗುಣಗಳೂ ಬುದ್ಧಿಯಲ್ಲಿ ವಾಸನಾರೂಪವಾಗಿ ಸೂಕ್ಷ್ಮವಾಗಿ ಇರುತ್ತವೆ. ಇವು 'ಭಾವಿಸಲ್ಪಡುತ್ತವೆ'—ಎಂದರೆ ಯುಕ್ತಿಗಳಿಂದ ಇವುಗಳ ಇರುವಿಕೆಯು ತಿಳಿಯಲ್ಪಡುತ್ತದೆ, ತತ್ವಪರಿಪಾಕದಿಂದ ಕಾಣಲ್ಪಡುತ್ತವೆ— ಎಂಬ ಕಾರಣದಿಂದ ಇವುಗಳಿಗೆ 'ಭಾವ' ಗಳೆಂದು ಸಂಜ್ಞೆಯು. ಇವೇ ಮತ್ತೆ ಕಾಲಕ್ರಮದಲ್ಲಿ ಪರಿಣಾಮಹೊಂದಿ, ಸ್ಥೂಲಗಳಾಗಿ ಭೋಗ್ಯಗಳೆನಿಸುವುವು. ಇವೇ ಪ್ರತೀಯಮಾನಗಳಾಗಿವೆ—ಎಂದರೆ,

ವೇದ್ಯಗಳಾಗಿವೆ ಎಂದು ಪ್ರತ್ಯಯ ಎಂಬ ಸಂಜ್ಞೆಯುಳ್ಳವುಗಳಾಗುತ್ತವೆ. ಈ ಪ್ರತ್ಯಯಗಳು ಸಿದ್ಧಿ, ತುಷ್ಟಿ, ಅಶಕ್ತಿ, ವಿಪರ್ಯಯ ಎಂದು ಐವತ್ತು ಭೇದವಾಗಿವೆ.

ಸಿದ್ಧಿಗಳು ಎಂಟು. ತುಷ್ಟಿಗಳು ಒಂಭತ್ತು. ಧರ್ಮವೇ ಮುಂತಾದ ನಾಲ್ಕರ ಅವಸ್ಥಾಭೇದಗಳು ಸತ್ವಾಧಿಕ್ಯದಿಂದ ಪ್ರಕಾಶರೂಪವಾಗಿದ್ದು ಸುಖ-ರೂಪಪ್ರವೃತ್ತಿಗಳು ಎಂದು ಹೇಳಲ್ಪಡುತ್ತವೆ. ಅಶಕ್ತಿಗಳು ಇಪ್ಪತ್ತೆಂಟು. ಅವೈರಾಗ್ಯಾವಸ್ಥೆಯು ರಜೋಗುಣಯುಕ್ತವಾಗಿರುವ ಕಾರಣ ಪ್ರವೃತ್ತಿ (ವ್ಯಾಪಾರ)ಗೆ ಕಾರಣವಾಗಿ ದುಃಖರೂಪವಾಗಿರುತ್ತದೆ. ವಿಪರ್ಯಯಗಳು ಐದು ವಿಧಗಳು. ಅಧರ್ಮಾದಿಯಾದ ಮೂರು ಅವಸ್ಥೆಗಳು ಸ್ಥೂಲಾಕಾರವಾದ ತಮೋಗುಣದ ಬಾಹುಳ್ಯದಿಂದ ನಿಯಮನಕಾರಣಗಳಾಗಿ ಮೋಹರೂಪಗಳಾಗಿವೆ. ಈ ಭಾವಾಷ್ಟಕದಲ್ಲಿ ಧರ್ಮಾಧರ್ಮಗಳೇ ಮುಖ್ಯವಾದವು. ಇವೇ ಎಲ್ಲ ಭಾವಗಳಿಗೂ ಮೂಲವಾದುವು. ಇವು ಶ್ರುತಿಯಲ್ಲಿ ವಿಹಿತವೂ ನಿಷಿದ್ಧವೂ ಆದವುಗಳನ್ನು ಅನುಷ್ಠಾನಮಾಡಿ ಬಂದ ಕರ್ಮಪಾಶರೂಪವಾದ್ದರಿಂದ ಪ್ರಧಾನವಾಗಿವೆ. ಹೀಗೆ ಬುದ್ಧಿಯು ಸಿದ್ಧಿಮೊದಲಾದ ಪ್ರತ್ಯಯಗಳಿಗೆ ಆಶ್ರಯವಾಗಿ ಭೋಗ್ಯವಾಗಿರುವುದಾದರೂ, ವಿಷಯಗಳ ನಿಶ್ಚಯಜ್ಞಾನಕ್ಕೆ ಕಾರಣವಾಗಿ ಕರಣವೂ ಆಗಿದೆಯೆಂಬುದು ಯುಕ್ತವಾಗಿದೆ.

ಇದರಿಂದಲೇ ಅಹಂಕಾರತತ್ವದ ಉತ್ಪತ್ತಿಯಾಗುತ್ತದೆ. ಇದಕ್ಕೆ ಗ್ರಾಹಕ (ಆತ್ಮನ) ನಿಶ್ಚಯವೇ ಧರ್ಮವು. ಮತ್ತು ಇದು ಸಂರಂಭಸ್ವರೂಪವಾದ್ದರಿಂದ, ಪ್ರಾಣಾದಿಪ್ರವೃತ್ತಿಗಳಿಗೂ ವಿಷಯವ್ಯವಹಾರಗಳಿಗೂ ಕಾರಣವಾಗಿದೆ. ಇದೂ ಸತ್ವಾದಿಭೇದದಿಂದ ಮೂರುವಿಧವಾಗಿದೆ. ಅಹಂಕಾರದ ಸಾತ್ವಿಕರಾಜಸತಾಮಸರೂಪವಾದ ಈ ಮೂರು ಸ್ಕಂಧಗಳು ಕ್ರಮವಾಗಿ ತೈಜಸ, ವೈಕಾರಿಕ ಭೂತಾದಿಪಂಚಕ—ಎಂಬ ಸಂಜ್ಞೆಯುಳ್ಳವುಗಳಾಗುತ್ತವೆಂದು ತಿಳಿಯತಕ್ಕದ್ದು. ಇವುಗಳಲ್ಲಿ ತೈಜಸದಿಂದ ಪದಾರ್ಥಗಳನ್ನು ಗಮನಿಸುವ ಸಾಮರ್ಥ್ಯವುಳ್ಳ, ಸಂಕಲ್ಪಧರ್ಮವುಳ್ಳ, ಯಾವಾಗಲೂ ಎಲ್ಲಕಡೆಗಳಲ್ಲಿಯೂ ವೇಗವಾಗಿ ಸಂಚರಿಸುವಂಥ, ಶ್ರೋತ್ರಾದಿಗಳಿಗೆ ಪ್ರೇರಕವಾದ ಮನಸ್ತತ್ವವು ಜನಿಸುತ್ತದೆ. ಇದರ ಪ್ರವೃತ್ತಿಯ ಅನಂತರವೇ ಬುದ್ಧಿ ಮತ್ತು

ಅಹಂಕಾರಗಳ ಪ್ರವೃತ್ತಿಯುಂಟಾಗುವುದು. ಈ ಮೂರೂ ಅಂತಃಕರಣಗಳೆನಿಸುತ್ತವೆ. ಬಾಹ್ಯಕರಣಗಳು ವ್ಯಾಪಾರಮಾಡದೇ ಸುಮ್ಮನಿರುವಾಗಲೂ ಇವುಗಳಿಗೆ ಪ್ರವೃತ್ತಿಯು ಇರುತ್ತದೆ.

ಬಾಹ್ಯಕರಣಗಳು ಜ್ಞಾನ ಮತ್ತು ಕರ್ಮಭೇದದಿಂದ ಎರಡುವಿಧವಾಗಿವೆ. ಅವುಗಳಲ್ಲಿ ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ, ಘ್ರಾಣ ಎಂಬ ಐದು ತತ್ವಗಳು, ಮಹಾಭೂತಗಳ ಗುಣಗಳಾದ ಶಬ್ದಸ್ಪರ್ಶರೂಪರಸಗಂಧಗಳನ್ನು ಗ್ರಹಿಸುತ್ತಾ ಜ್ಞಾನಕರಣಗಳೆನ್ನಲ್ಪಡುತ್ತವೆ. ಇವು ಪದಾರ್ಥಗಳನ್ನು ಪ್ರಕಾಶಪಡಿಸುವ ಸಾಮರ್ಥ್ಯವುಳ್ಳದ್ದರಿಂದ ತೈಜಸದಿಂದಲೇ ಉತ್ಪನ್ನಗಳೆಂದು ತಿಳಿದುಬರುತ್ತದೆ. ಅನಂತರ ವೈಕಾರಿಕದಿಂದ ವಾಕ್, ಪಾದ, ಪಾಣಿ, ಪಾಯು, ಉಪಸ್ಥಗಳೆಂಬ ವಚನ, ಗಮನ, ಆದಾನ, ವಿಸರ್ಗ, ಆನಂದವೆಂಬ ಐದುಕರ್ಮಗಳನ್ನು ನೆರವೇರಿಸುವ ಐದು ಕರ್ಮೇಂದ್ರಿಯಗಳು ಉಂಟಾಗಿವೆ. ಈ ಹತ್ತು ಬಾಹ್ಯಕರಣಗಳು ಆತ್ಮನಿಗೆ ಬಾಹ್ಯಪದಾರ್ಥಗಳ ಸಂಬಂಧವನ್ನುಂಟುಮಾಡಿಸಿ ಪ್ರತ್ಯೇಕವಾಗಿ ತಮ್ಮ ತಮ್ಮ ಕಾರ್ಯಗಳನ್ನೂ ನಿರ್ವಹಿಸುತ್ತವೆ. ಇವುಗಳು ಮೂರ್ತಗಳಾದ್ದರಿಂದ ಆಧಾರವಿಲ್ಲದೇ ಇವುಗಳಿಗೆ ಚೇಷ್ಟೆಯು (ವ್ಯಾಪಾರವು) ಸಂಭವಿಸಲಾರದೆಂದು ಇವುಗಳ ಉಪಕಾರಕ್ಕಾಗಿ ಶಬ್ದವೇ ಮೊದಲಾದ, ಹಿಂದಿನದಕ್ಕಿಂತಲೂ ಒಂದೊಂದು ಅಧಿಕಗುಣಗಳನ್ನುಳ್ಳ, ಆ ಗುಣಗಳಿಗೆ ಅಭಿನ್ನಗಳಾದ್ದರಿಂದ ಅದೇ ಹೆಸರನ್ನುಳ್ಳ ಪಂಚತನ್ಮಾತ್ರಗಳು ಭೂತಾದಿ ಅಹಂಕಾರಗಳಿಂದ ಉತ್ಪನ್ನಗಳಾಗಿವೆ. ಇವುಗಳಿಂದ ಆ ಗುಣಗಳನ್ನುಳ್ಳ ಮತ್ತು ಅವಕಾಶ, ವ್ಯೂಹ, ಪಾಕ, ಸಂಗ್ರಹ, ಧಾರಣವೆಂಬ ಕ್ರಿಯೆಗಳನ್ನುಳ್ಳ ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ ಎಂಬ ಐದು ಸೂಕ್ಷ್ಮಭೂತಗಳು ಹುಟ್ಟುವುವು. ಈ ಹತ್ತು ತತ್ವಗಳು ಕರಣಗಳಿಗೆ ಆಧಾರಗಳಾಗಿದ್ದು ಕಾರ್ಯಸಂಜ್ಞೆಯನ್ನು ಹೊಂದಿರುತ್ತವೆ.

ಈ ಮೇಲೆ ವರ್ಣಿಸಿರುವ ಕಲೆಮೊದಲಾದ ಪೃಥಿವೀಪರ್ಯಂತವಾದ ಮೂವತ್ತು ತತ್ತ್ವಗಳು ಸೇರಿ ಪುರುಷನಿಗೆ ಭೋಗಸಾಧನಗಳಾಗಿರುತ್ತಾ ಸೂಕ್ಷ್ಮದೇಹವಾಗಿವೆ. ಇವುಗಳಿಗೆ ಪ್ರಳಯದಲ್ಲಿ ವಿಪರೀತಕ್ರಮದಿಂದ ತನ್ನ ತನ್ನ ಕಾರಣದಲ್ಲಿ ಅಂತರ್ಭಾವಮಾಡಲ್ಪಟ್ಟರೆ, ಕೈವಲ್ಯವೇ ಆಗುತ್ತದೆ. ಅಥವಾ

ಇವುಗಳಿಗೆ ಮಲಪರಿಪಾಕವುಂಟಾಗಲು ದೀಕ್ಷೆಯಿಂದ ಉಪಸಂಹಾರ ಮಾಡಲ್ಪಟ್ಟಾಗ ಶಿವಸಾಮ್ಯರೂಪವಾದ ಮೋಕ್ಷವೇ ಲಭಿಸುತ್ತದೆ. ಹೀಗೆ ಪದಾರ್ಥಗಳು ಸಪ್ರಕಾರವಾಗಿಯೂ ವಿಸ್ತರವಾಗಿಯೂ ನಿರೂಪಿಸಲ್ಪಟ್ಟವು.

ಶ್ರೀಶೈವಸಿದ್ಧಾಂತಪರಿಭಾಷೆಯಲ್ಲಿ ಪಾಶಪರಿಚ್ಛೇದವು ಸಮಾಪ್ತವು.

ವಿನಿಯೋಗಪರಿಚ್ಛೇದ

ಹಿಂದೆ ವಿವರಿಸಿದ ಪದಾರ್ಥಗಳ ವಿನಿಯೋಗಗಳು (ಉಪಯೋಗಗಳು) ಸಂಗ್ರಹಿಸಲ್ಪಡುತ್ತವೆ. ಈ ಪದಾರ್ಥಗಳ ಫಲವೇ ಪರಾ ಅಪರಾ ಎಂದು ಎರಡುವಿಧವಾದ ಮೋಕ್ಷಸಿದ್ಧಿಯು. ಸರ್ವಜ್ಞತ್ವವೇ ಮುಕ್ತಿಯೆಂದು ಸಿದ್ಧಾಂತಿಗಳಿಗೆ ಸಮ್ಮತವಾದುದು ; ಹೀಗಿರುವಲ್ಲಿ ಈ ಎಲ್ಲ ಪದಾರ್ಥಗಳನ್ನು ಮೋಕ್ಷಸಿದ್ಧಿಯು ಅಪೇಕ್ಷಿಸುತ್ತದೆಂದು ಹೇಳಿದುದು ಹೇಗೆ ?—ಎಂದರೆ; ಸತ್ಯವೇ. ಜ್ಞಾನವು ಪರವೆಂದೂ ಅಪರವೆಂದೂ ಎರಡುವಿಧವಾಗಿದೆ. ಪರ ಜ್ಞಾನವು ಕೇವಲ ತಿಳಿವಳಿಕೆ (ಅವಬೋಧ) ರೂಪವಾದುದು. ಇದು ಎಲ್ಲಾ ಪಾಶಗಳಿಂದಲೂ ಸಂಪೂರ್ಣವಾಗಿ ಬಿಡಲ್ಪಟ್ಟದ್ದರಿಂದ ಬೇರೆ ಯಾವ ದ್ವಾರ ವನ್ನೂ ಅಪೇಕ್ಷಿಸದೇ ಶುದ್ಧಚೈತನ್ಯಸ್ವರೂಪವಾದುದು. ಆಗಮರೂಪ ವಾದುದೇ ಅಪರಜ್ಞಾನವು. ಇದು ಪಾಶದ ಲೇಶವನ್ನುಳ್ಳ, ಪರಿಗ್ರಹಶಕ್ತಿಯ ಕಾರ್ಯಗಳಾದ ನಾದಾದಿಗಳನ್ನು ಅಪೇಕ್ಷಿಸುವ ಅಧಿಕಾರಯುಕ್ತವಾದ ಚೈತನ್ಯ-ರೂಪವಾದುದು. ಇದರಲ್ಲಿ ಪರಜ್ಞಾನವುಳ್ಳವರು ಪರಶಿವಸಾಮ್ಯವು ಲಭಿಸಿರುವುದರಿಂದ ಪರಮುಕ್ತರೆನಿಸುತ್ತಾರೆ. ಇವರುಗಳಿಗೆ ಇನ್ನು ಹೊಂದ ಬೇಕಾದುದು ಏನೂ ಇರುವುದಿಲ್ಲ. ಇವರುಗಳು ಹೊಂದಿರುವ ಸ್ಥಾನವೇ ಸರ್ವೋತ್ತಮವಾಗಿ ನಿರತಿಶಯವಾದುದರಿಂದ, ಇನ್ನು ಹೊಂದಬೇಕಾದ ಹೆಚ್ಚಿನಸ್ಥಾನವು ಯಾವುದೂ ಇರುವುದಿಲ್ಲ.

ಅಪರಜ್ಞಾನಿಗಳು ಸಾಧಕರಾದ ಆಚಾರ್ಯರು : ಇವರು ಸಿದ್ಧಾಂತದಿಂದ ವ್ಯಕ್ತವಾದ ಚೈತನ್ಯವುಳ್ಳವರಾದ್ದರಿಂದ ಅಪರಮುಕ್ತರೆನಿಸುತ್ತಾರೆ. ಇವರು ಪರಮುಕ್ತಿಪ್ರಾಪ್ತಿಗಾಗಿ ಆಗಮದಿಂದ ತಿಳಿದುಬರುವ ಕ್ರಿಯಾ, ಯೋಗ ಮತ್ತು ಚರ್ಯೆಗಳಲ್ಲಿ ತಮ್ಮತಮ್ಮ ಅಧಿಕಾರಕ್ಕನುಗುಣವಾಗಿ ಪದಾರ್ಥತ್ರಯ ವನ್ನು ಶಿಷ್ಯರೊಡನೆ ಸೇವಿಸುತ್ತಾರೆ. ಹೇಗೆಂದರೆ :—ಕ್ರಿಯೆಯಲ್ಲಿ ಆಚಾರ್ಯ ಮಾತ್ರರಿಂದ ಸಾಧ್ಯವಾದ ದೀಕ್ಷೆಯಲ್ಲಿ ಪತಿಯು ಅನುಗ್ರಾಹಕನಾಗಿಯೂ, ಪಶುವು ಅನುಗ್ರಾಹ್ಯನಾಗಿಯೂ, ಪಾಶವು ನಿಗ್ರಾಹ್ಯವಾಗಿಯೂ ವಿನಿಯುಕ್ತ ವಾಗುತ್ತವೆ. ಯೋಗದಲ್ಲಿ ಸಾಧಕಸಹಿತರಾದ ಆಚಾರ್ಯರಿಂದ ಸಾಧ್ಯ ವಾದ ಸಕಲಧ್ಯಾನಾದಿಗಳಲ್ಲಿ ಶಿವನು ಧ್ಯೇಯನಾಗಿಯೂ, ಜೀವನು

ಧ್ಯಾತೃವಾಗಿಯೂ, ಬಂಧವು ಮರೆಯಲ್ಪಡತಕ್ಕದ್ದಾಗಿಯೂ ಉಪಯುಕ್ತವಾಗುತ್ತವೆ. ಚರ್ಯೆಯಲ್ಲಿಯೂ, ಸಾಧಕಸನ್ನಿಹಿತರಾದ ಆಚಾರ್ಯರಿಂದ ಸಾಧಿಸಲ್ಪಡುವ ಆಲಯಸೇವಾದಿಗಳಲ್ಲಿ ದೇವನು ಸೇವ್ಯನಾಗಿಯೂ, ದಾಸನು ಸೇವೆಮಾಡತಕ್ಕವನಾಗಿಯೂ, ಜಡದ್ರವ್ಯಸಮೂಹವು ದೇವನ ಪಾದಾರವಿಂದಗಳಲ್ಲಿ ಸಮರ್ಪಣೆಮಾಡಲ್ಪಡತಕ್ಕವುಗಳಾಗಿಯೂ ವಿನಿಯುಕ್ತವಾಗುತ್ತವೆ. ಇಲ್ಲಿ ಎಲ್ಲ ಕಡೆಗಳಲ್ಲಿಯೂ ಪತಿಯು ಆರಾಧ್ಯನಾಗಿರುತ್ತಾನೆಂಬುದು ವಿಶೇಷವು. ಪತಿಯ ಆರಾಧನೆಯಿಲ್ಲದಿದ್ದರೆ ಪತಿಯ ಅನುಗ್ರಹವು ಲಭಿಸದೇ ಪತಿಯ ಪ್ರಾರ್ಥನೆ, ಧ್ಯಾನ, ಸನ್ನಿಧಾಪನ ಮತ್ತು ಇದಕ್ಕೆ ಅಧೀನವಾದ ಪಶು ಪಾಶ ವಿಷಯಗಳ ವಿನಿಯೋಗ ಇವುಗಳು ಸಿದ್ಧಿಸಲಾರವು. ಪತಿಯ ಆರಾಧನೆಯೆಂದರೆ ಶ್ರದ್ಧೆಯಿಂದ ಶಿವಲಿಂಗ ಮುಂತಾದುವುಗಳಲ್ಲಿ ಪೂರ್ವ-ಮತ್ತು ಪರಗಳಾದ ಅನೇಕ ಅಂಗಸಹಿತವಾಗಿ, ಮನಸ್ಸು, ವಾಕ್ಕು ಮತ್ತು ವ್ಯಾಪಾರಗಳಿಂದ, ಧ್ಯಾನ, ಜಪ, ಮುದ್ರಾವಿಶೇಷಗಳಿಂದ, ತನಗೆ ಇಷ್ಟವಾದ ಶುದ್ಧದ್ರವ್ಯದ ಸಮರ್ಪಣೆಯು.

ಇಂಥ ಆರಾಧನೆಯು ಎರಡುವಿಧವಾಗಿದೆ, ಸ್ವಾರ್ಥ ಮತ್ತು ಪರಾರ್ಥವೆಂದು. ಇವುಗಳಲ್ಲಿ ಸಾಧಕರೇ ಮೊದಲಾದವರಿಂದ ತಮ್ಮ ಇಷ್ಟಸಿದ್ಧಿಗಾಗಿ ಆಚಾರ್ಯರ ಅನುಜ್ಞೆಯಿಂದ ಚಲಲಿಂಗಾದಿಗಳಲ್ಲಿ ಮಾಡಲ್ಪಡುವ ಆರಾಧನೆಯು ಸ್ವಾರ್ಥಾರಾಧನೆಯು. ಇದು ಕರ್ತೃವಿಗೆ ಮಾತ್ರ ಫಲದಾಯಕವಾಗುತ್ತದೆ. ಆಚಾರ್ಯರು ರಾಜ ಮತ್ತು ರಾಷ್ಟ್ರಾದಿಗಳಿಂದ ಅಪೇಕ್ಷಿತವಾದ ಫಲದ ಸಿದ್ಧಿಗಾಗಿ ಸ್ವತಂತ್ರವಾಗಿ ಸ್ವಾಯಂಭು ಮೊದಲಾದ ಸ್ಥಿರಲಿಂಗಗಳಲ್ಲಿ ಮಾಡಲ್ಪಡುವ ಆರಾಧನೆಯು ಪರಾರ್ಥಾರಾಧನೆಯು. ಇದು ಕರ್ತೃಸಹಿತರಾದ ಇತರರಿಗೂ ಫಲವನ್ನುಂಟುಮಾಡುವಂಥಾದ್ದು.

ಪರಾರ್ಥಪೂಜೆಯಲ್ಲಿ ಆಚಾರ್ಯರಿಗೆ ತಮ್ಮ ಇಷ್ಟಾರ್ಥಸಿದ್ಧಿಯೇಕೆ? ಅವರು ಸ್ವಾರ್ಥಪೂಜೆಯನ್ನು ನಿಯಮವಾಗಿ ಮಾಡುತ್ತಲೇ ಇರುತ್ತಾರಲ್ಲವೆ? ಎಂದರೆ, ಹಾಗಲ್ಲ. ಅವರಿಗೆ ಸ್ವಾರ್ಥದಂತೆ ಪರಾರ್ಥಪೂಜೆಯನ್ನು ಮಾಡದಿದ್ದರೂ ಪ್ರತ್ಯವಾಯ (ದೋಷ) ಉಂಟೆಂದು ಕೇಳಲ್ಪಡುತ್ತಿದೆ. ವಸ್ತುತಃ ನೋಡಿದರೆ, ಗುರುಗಳಿಗೆ ಸ್ವಾರ್ಥಕ್ಕೆಂದು ವಿಹಿತವಾಗಿರುವುದೆಲ್ಲಾ ಪರಾರ್ಥವೇ

ಆಗಿರುತ್ತದೆ. ಸಿದ್ಧಿಫಲವನ್ನು ಕೊಡುವಂಥ ಇವರ ಚರಿತ್ರೆಯು (ನಡತೆಯು) ಸಾಧಕಾದಿಗಳಿಗೆ ಮಾರ್ಗದರ್ಶನಕ್ಕಾಗಿರುತ್ತದೆ. ಗುರುಗಳು ಶಿವ, ಮಂತ್ರೇಶ, ರುದ್ರ, ದೇವ, ಮುನಿ, ಮನುಷ್ಯ ಭೇದದಿಂದ ಆರುವಿಧವಾಗಿರುತ್ತಾರೆ. ಇವರಲ್ಲಿ ಪರ, ಮಹತ್, ಅಂತರಾಳ, ದಿವ್ಯ, ಅದಿವ್ಯ, ದಿವ್ಯಾದಿವ್ಯಗಳ ಸಂಬಂಧತಾರತಮ್ಯವಿರುವುದರಿಂದ, ಮುಂದುಮುಂದಿನವರು ಹಿಂದುಹಿಂದಿನವರಿಗೆ ನಿಯೋಜ್ಯರಾಗಿದ್ದಾರೆ. ಆದರೂ ಮನುಷ್ಯಾಚಾರ್ಯರೇ ಇವರಲ್ಲಿ ಶ್ರೇಷ್ಠರು. ಹಿಂದಿನ ಇತರರೆಲ್ಲರ ಸಾನ್ನಿಧ್ಯವೂ ಇವರಲ್ಲಿರುತ್ತದೆ. ಅದರಲ್ಲಿಯೂ ನಾಲ್ಕುವರ್ಣದವರಲ್ಲಿ ಇತರರಿಗೆ ಗುರುತ್ವವಿಲ್ಲ; ಅವರಿಗೆ ವೇದವೇದಾಂಗಗಳ ಅಧ್ಯಯನದಿಂದ ವೇದಾಂತಜ್ಞಾನವಿಲ್ಲದುದರಿಂದ, ಸಿದ್ಧಾಂತ-ಶ್ರವಣಕ್ಕೆ ಯೋಗ್ಯತೆಯಿಲ್ಲ. ಸಿದ್ಧಾಂತವು ವೇದಾಂತಸಾರವಾಗಿರುತ್ತದೆ.

ಕ್ಷತ್ರಿಯಾದಿಗಳಿಗೆ ಮಲಪಾಕವು ಪೂರ್ಣವಾಗಿದ್ದರೆ, ಆಗ ಅವರು ನಿರಧಿಕಾರದೀಕ್ಷೆಯಿಂದ ಪರಮೋಕ್ಷವನ್ನು ಹೊಂದಿಸಲ್ಪಡುತ್ತಾರೆ. ಅಥವಾ ವಿಶ್ವಾಮಿತ್ರಾದಿಗಳಂತೆ ತಪೋವಿಶೇಷದಿಂದ ಬೇರೆವರ್ಣಕ್ಕೆ ಸಂಕ್ರಮಿಸಿ, ಅಧಿಕಾರವನ್ನು ಪಡೆಯುತ್ತಾರೆ. ಅಧಿಕಾರಿಗಳು ಲೋಕಸಂಗ್ರಹಕ್ಕಾಗಿ ಸ್ಮೃತಿ-ವಿಹಿತಗಳಾದ ವರ್ಣಾಶ್ರಮಧರ್ಮಗಳನ್ನು ಬಿಡಬಾರದೆಂದು ಕೇಳುತ್ತೇವೆ. ನಾಲ್ಕುವರ್ಣಗಳಿಗೆ ಸೇರಿದ ಅಧಿಕಾರಿಗಳಿಗೆ ಹಿಂದಿನ ಜಾತಿಯು ಕಳೆದರೂ ಅವರು ಆಯಾ ಜಾತಿಗೆ ಉಚಿತವಾದ ಆಚರಣೆಯನ್ನು ಲೋಕಸಾಂಕರ್ಯ-ವುಂಟಾಗದಂತೆ ಫಲಾಸಕ್ತಿಯನ್ನು ಪರಿಹಾರಮಾಡಿ ಅವಶ್ಯವಾಗಿ ಅನುಷ್ಠಿಸಬೇಕು. ಶೈವಾಚಾರವುಳ್ಳವರಿಗೆ ವೈದಿಕಾಚಾರವು ಕೂಡುವುದಿಲ್ಲವೆಂಬುದೇನೂ ಇಲ್ಲ; ಶೈವಾಚಾರಕ್ಕೆ ಅವಿರುದ್ಧಗಳಾದ ಆಚಾರಗಳೇ ಅವರಿಗೆ ಅನುಮತಗಳಾಗಿರುತ್ತವೆ. ಇದಲ್ಲದೆ ವೇದ ಮತ್ತು ಆಗಮಗಳಿಗೆ ಅತ್ಯಂತ ವಿರೋಧವೇನೂ ಇರುವುದಿಲ್ಲ; ಎರಡೂ ಪರಮೇಶ್ವರನಿಂದಲೇ ರಚಿತಗಳಾಗಿವೆ. ಆದರೆ ವೇದದಲ್ಲಿ ಶುದ್ಧ ಮತ್ತು ಅಶುದ್ಧರಾದ ಜನಗಳನ್ನು ಸಾಧಾರಣವಾಗಿ ಕುರಿತು ಯಾವುದು ಪ್ರತಿಪಾದಿತವಾಗಿದೆಯೋ, ಅದರಲ್ಲಿ ಶುದ್ಧರನ್ನು ಮಾತ್ರ ಕುರಿತ ಆಚಾರಗಳು ಆಗಮದಲ್ಲಿ ಸ್ಪಷ್ಟವಾಗಿ ಉಪದೇಶಿಸಲ್ಪಡುತ್ತವೆಂದು ಇವೆರಡಕ್ಕೂ ಇಷ್ಟುಮಾತ್ರವೇ ಭೇದವು.

ಅದರಲ್ಲಿ ಪಶ್ವಾತ್ಮರ ಪಶುತ್ವದ ಪಾಕಕ್ಕಾಗಿ ವಿಹಿತಗಳಾದ ವೇದದ ಅಂಶಗಳು ಸಿದ್ಧಾಂತಿಗಳಿಂದ ತ್ಯಾಜ್ಯಗಳೇ ಸರಿ—ಕರ್ಮಕಾಂಡದಲ್ಲಿ ಕಾಮ್ಯ-ಕರ್ಮಗಳು; ಉಪಾಸನಾಕಾಂಡದಲ್ಲಿ ಪಂಚಾಕ್ಷರವನ್ನು ಬಿಟ್ಟು ಇತರ ಉಪಾಸನೆಗಳು; ಜ್ಞಾನಕಾಂಡದಲ್ಲಿಯೂ ಪರಮಾತ್ಮೈಕ್ಯಾದಿಜ್ಞಾನಗಳು—ಇವು ತ್ಯಾಜ್ಯಗಳು. ಸಿದ್ಧಾಂತದಲ್ಲಾದರೋ ಸರ್ವಾಂಶವೂ ಸೇವ್ಯವೇ. ಇದರಲ್ಲಿಯೂ ಅಧಿಕಾರಿಗಳಿಗೆ ಅಧಿಕಾರವು ಉದಯಿಸುವವರೆಗೂ ತಮ್ಮ ಆಚಾರದಲ್ಲಿ ನ್ಯೂನತೆಯುಂಟೆಂದು ತಿಳಿಯತಕ್ಕದ್ದು. ಅಧಿಕಾರವು ಉದಯಿಸದೆಯೇ ದೇಹತ್ಯಾಗವು ಸಂಭವಿಸಿದರೆ, ಆಗ ಆ ಮೂವರಿಗೂ ಕ್ರಮವಾಗಿ ಶಿವ, ಮಂತ್ರೇಶ್ವರ, ರುದ್ರರ ಪದಪ್ರಾಪ್ತಿಯಾಗುತ್ತದೆ. ಸಾಧಕರಿಗೂ ಪುತ್ರಕರಿಗೂ ಸಮಾನಪದಪ್ರಾಪ್ತಿಯೆಂಬುದಿಲ್ಲ; ಅಲ್ಲಿ ಶಿವಪದದಲ್ಲಿಯೂ ಅವರಿಗೆ ಭೋಗಾವಸ್ಥೆ, ಲಯಾವಸ್ಥೆಯೆಂಬುವು ಕ್ರಮವಾಗಿ ಸಂಭವಿಸುತ್ತವೆ. ಈ ರೀತಿಯಲ್ಲಿ ಯಥಾವತ್ತಾಗಿ ಅಧ್ಯಯನಮಾಡಿದ ಸಾಮಾನ್ಯ ಮತ್ತು ವಿಶೇಷ ಶಾಸ್ತ್ರಗಳನ್ನುಳ್ಳ, ಸಮರ್ಥರಾದ, ಸಮಸ್ತಸಂಪತ್ತುಗಳಿಂದಲೂ ಸಂಪನ್ನರಾದ ಬ್ರಾಹ್ಮಣೋತ್ತಮರಿಗೇನೇ ಸರ್ವಪದಾರ್ಥಗಳ ವಿನಿಯೋಗಕ್ಕಾಗಿ ಪರ-ಮೇಶ್ವರಾಧಿಕರಣತ್ವವೆಂದು ಹೇಳಲ್ಪಡುವ ಆಚಾರ್ಯತ್ವವು ವ್ಯವಸ್ಥಿತವಾಗಿರುತ್ತದೆಂದು ಸರ್ವಮಂಗಳವು.

ಸಿದ್ಧವಾದ ಗುರುವರ್ಯರ ಕಾರುಣ್ಯವನ್ನುಳ್ಳ ಸೂರ್ಯಭಟ್ಟನು ಶುದ್ಧ ಬುದ್ಧಿಗಳಿಗೆ ಸುಲಭವಾಗಿ ತಿಳಿದುಬರುವಂತೆ ಸಮಸ್ತಸಿದ್ಧಾಂತಾರ್ಥವನ್ನೂ ಹೇಳಿದ್ದಾನೆ.

ಎಂದು ಶ್ರೀಕವಿರಾಜಶೇಖರಸೂರ್ಯಭಟ್ಟಾರಕನ ಕೃತಿಗಳಲ್ಲಿ
ಶ್ರೀಶೈವಸಿದ್ಧಾಂತಪರಿಭಾಷೆಯಲ್ಲಿ ವಿನಿಯೋಗಪರಿಚ್ಛೇದವು
ಸಮಾಪ್ತವು

श्रीमनोन्मनीग्रन्थमालायां प्रकाश्यमानग्रन्था:

कुसुमम्—६ आगमरहस्यम् (वातूलशुद्धाख्यम्)

कुसुमम्—७ अर्चनाप्रकाश:

अद्यावधि प्रकटितग्रन्था: (इदानीमलभ्या:)

कुसुमम् १. श्रीपंचलिंगदर्शनयात्राविवरणम्

" २. तलकाडु इतिहास:

" ३. तलकाडु कैपिडि

" ४. श्रीदुर्गामहालक्ष्मीस्तोत्रम्

Copies may be had from :

AGAMIK KRISHNA DEEKSHIT
"Sri Manonmani Krupa"
Bangalore-2.